ಸಂಪುಟ: 04 ಸಂಚಿಕೆ: 267 ಪುಟಗಳು: 08 ಮಂಗಳವಾರ 10 ಡಿಸೆಂಬರ್ 2024
www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail.com
ಸಂಪಾದಕರು: ಟಿ. ಹೊಂಬೇಗೌಡ
RNI No. KARKAN/2021/80833
9448225696 +91 8035841833
₹5

**ಮುಂಜಾನೆ ಮಾತು**

ಬದುಕಿನಲ್ಲಿ ಏನೇ ನಡೆದರೂ ಒಳ್ಳೆಯದೇ. ವರ್ತಮಾನದಲ್ಲಿ ಏನಾಗುತ್ತಿದೆಯೋ ಅದೆಲ್ಲವೂ ಉತ್ತಮವಾಗಿಯೇ ನಡೆಯುತ್ತಿದೆ. ಮುಂದೆ ಏನಾಗುವುದೋ ಅದು ಕೂಡ ಚೆನ್ನಾಗಿರುತ್ತದೆ. ಭವಿಷ್ಯದ ಬಗ್ಗೆ ಚಿಂತಿಸಬೇಡಿ, ವರ್ತಮಾನದಲ್ಲಿ ಜೀವಿಸಿ.


# ಉದಯ ವಾಹಿನಿ

ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ


## ಬಾಂಗ್ಲಾದೇಶದವರಿಗೂ ರಾಜ್ಯದಲ್ಲಿ ಬಿಪಿಎಲ್ ಕಾರ್ಡ್ ಕೊಡಲಾಗಿದೆ



• ಉದಯವಾಹಿನಿ, ಬೆಂಗಳೂರು

ಬಾಂಗ್ಲಾದೇಶದವರಿಗೂ ರಾಜ್ಯದಲ್ಲಿ ಬಿಪಿಎಲ್ ಕಾರ್ಡ್ ಕೊಡಲಾಗಿದೆ ಅಂತ ಬಿಜೆಪಿ ಸದಸ್ಯ ಸಿಟಿ ರವಿ ಆರೋಪ ಮಾಡಿದ್ದಾರೆ.

ವಿಧಾನ ಪರಿಷತ್ ಪ್ರಶ್ನೋತ್ತರ ಕಲಾಪದಲ್ಲಿ ಬಿಜೆಪಿ, ಜೆಡಿಎಸ್, ಕಾಂಗ್ರೆಸ್ ಸದಸ್ಯರು ರೇಷನ್ ಕಾರ್ಡ್ ಗೊಂದಲದ ಬಗ್ಗೆ ಪ್ರಶ್ನೆ ಕೇಳಿದ್ರು. ಈ ವೇಳೆ ಬಾಂಗ್ಲಾದೇಶದವರಿಗೂ ಬಿಪಿಎಲ್ ಕಾರ್ಡ್ ಕೊಡಲಾಗಿದೆ ಅಂತ ಆರೋಪ ಮಾಡಿದ್ರು. ಜೆಡಿಎಸ್ ಸದಸ್ಯ ಜವರಾಯಿಗೌಡ ಮಾತಾಡಿ, ರಾಜ್ಯದಲ್ಲಿ 40 ಲಕ್ಷ ಬೋಗಸ್ ಕಾರ್ಡ್ ಇದೆ ಅಂತ ಹೇಳಲಾಗ್ತಿದೆ. ಈ ಬೋಗಸ್ ಕಾರ್ಡ್ ಕೊಟ್ಟ ಅಧಿಕಾರಗಳ ಮೇಲೆ ಯಾಕೆ ಕ್ರಮ ತೆಗೆದುಕೊಂಡಿಲ್ಲ.

ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕು ಎಂದರು.ಕಾಂಗ್ರೆಸ್ ನ ಐವಾನ್ ಡಿಸೋಜಾ, ಬಿಪಿಎಲ್ ಕಾರ್ಡ್ ರದ್ದು ಮಾಡೋಕೆ ಇರೋ ಮಾನದಂಡ ಸರಿಯಿಲ್ಲ. ಜೀವನೋಪಾಯಕ್ಕಾಗಿ ಸ್ವಂತ ವಾಹನ ಇರೋ ಅಂಶ ಪ್ರಸ್ತಾಪ ಮಾಡಿರೋದು ಸರಿಯಲ್ಲ. ಈ ಮಾನದಂಡ ಸರಿ ಮಾಡಬೇಕು ಎಂದರು. ಈ ವೇಳೆ ಮಧ್ಯ ಪ್ರವೇಶಿಸಿದ ಸಿ.ಟಿ ರವಿ, 5 ಕೋಟಿಗೂ ಹೆಚ್ಚು ಜನ ರೇಷನ್ ಪಡೆಯುತ್ತಿದ್ದಾರೆ. ಅಷ್ಟೊಂದು ಬಡವರು ರಾಜ್ಯದಲ್ಲಿ ಇದ್ದಾರಾ ಹಾಗಾದರೆ ಕರ್ನಾಟಕ ಸಂವೃದ್ಧಿ ಹೇಗೆ ಆಗುತ್ತದೆ ಕಾಳಸಂತೆಗೆ ಅಕ್ಕಿ ಹೇಗೆ ಬರ್ತಿದೆ ಇದಕ್ಕೆ ನಾವೇ ದಾರಿ ಮಾಡಿಕೊಟ್ಟಂತೆ ಕಾಣ್ತಿದೆ. ಇದನ್ನ ನಿಯಂತ್ರಣ ಮಾಡಲು ಸರ್ಕಾರದ ಕ್ರಮ ಏನು ಅಂತ ಪ್ರಶ್ನೆ ಮಾಡಿದ್ರು.ಬಳಿಕ ಜೆಡಿಎಸ್ ಶರವಣ ಮಾತಾಡಿ, ಸರ್ಕಾರ ಯಾರಿಗೆ ಕಾರ್ಡ್ ರದ್ದು ಮಾಡುತ್ತದೆ ಅಂತ ಸ್ಪಷ್ಟಪಡಿಸಬೇಕು. ಯಾವುದು ನಿಯಮ ಅಂತ ಸ್ಪಷ್ಟವಾಗಿ ಹೇಳಿಕೆ. ಬೆಂಗಳೂರಿನಲ್ಲಿ ಪಡಿತರ ಅಂಗಡಿಯವರು ಜನರಿಂದ ಒಂದು ಕಾರ್ಡ್‌ಗೆ 20 ರೂ. ವಸೂಲಿ ಮಾಡ್ತಿದ್ದಾರೆ. ಇದಕ್ಕೆ ಸರ್ಕಾರದ ಅನುಮತಿ ಇದೆಯಾ ಬಡವರಿಗೆ ಕೊಟ್ಟ ಅಕ್ಕಿ ಉಳಿದ ಮೇಲೆ ಖಾಸಗಿ ಅವರಿಗೆ ಮಾರಾಟ ಮಾಡಲಾಗ್ತಿದೆ. ಇಂತಹವರ ವಿರುದ್ಧ ಸರ್ಕಾರದ ಕ್ರಮ ಏನು ಅಂತ ಪ್ರಶ್ನೆ ಮಾಡಿದ್ರು.

## ಪಂಚಮಸಾಲಿ ಹೋರಾಟಕ್ಕೆ ಬೆಳಗಾವಿ ಜಿಲ್ಲಾಡಳಿತ ಅನುಮತಿ



• ಉದಯವಾಹಿನಿ, ಬೆಳಗಾವಿ

ಬಸವಜಯ ಮೃತ್ಯುಂಜಯ ಸ್ವಾಮೀಜಿ ನೇತೃತ್ವದಲ್ಲಿ ಪಂಚಮಸಾಲಿ ಹೋರಾಟಕ್ಕೆ ಕರೆ ನೀಡಲಾಗಿತ್ತು. ಈ ಹೋರಾಟಕ್ಕೆ ಅನುಮತಿ ನೀಡುವಂತೆ ಬೆಳಗಾವಿ ಜಿಲ್ಲಾಡಳಿತಕ್ಕೆ ಮನವಿ ಮಾಡಲಾಗಿತ್ತು. ಆದರೇ ಆರಂಭದಲ್ಲಿ ಅನುಮತಿಗೆ ನಿರಾಕರಿಸಿದಂತ ಬೆಳಗಾವಿ ಜಿಲ್ಲಾಡಳಿತ. ಇದೀಗ ಕೊನೆಗೂ ಅನುಮತಿ ನೀಡಿದೆ. ಮಧ್ಯಾಹ್ನ ಬಸವಜಯ ಮೃತ್ಯುಂಜಯ ಸ್ವಾಮೀಜಿ ಹಾಗೂ ಇತರೆ ಮುಖಂಡರ ಜೊತೆಗೆ ಬೆಳಗಾವಿ ಜಿಲ್ಲಾಡಳಿತದಿಂದ ತುರ್ತು ಸಭೆಯನ್ನು ನಡೆಸಲಾಯಿತು. ಈ ಸಭೆಯಲ್ಲಿ ಸಂಧಾನ ಯಶಸ್ವಿಯಾದ ಬಳಿಕ, ಜಿಲ್ಲಾಧಿಕಾರಿ ಮಹಮ್ಮದ್ ರೋಷನ್ ಅವರು ಪಂಚಸಾಲಿ ಹೋರಾಟಕ್ಕೆ ಅನುಮತಿ ನೀಡಿದ್ದಾರೆ. ಅಂದಹಾಗೇ ಪಂಚಮಸಾಲಿ ಹೋರಾಟದ ಪ್ರತಿಭಟನೆಯ ವೇಳೆಯಲ್ಲಿ ಟ್ರ್ಯಾಕ್ಟರ್ ಬಳಕೆ ಮಾಡದಿರಲು ಮುಖಂಡರು ಒಪ್ಪಿಗೆ ಸೂಚಿಸಿದ್ದಾರೆ. ಟ್ರ್ಯಾಕ್ಟರ್ ಬದಲು ಕ್ರೂಷರ್ ವಾಹನ ಬಳಸೋದಕ್ಕೆ ಅನುಮತಿ ನೀಡಲಾಗಿದೆ. ಅಲ್ಲದೇ ಸಾರ್ವಜನಿಕರಿಗೆ ತೊಂದರೆ ಆಗದಂತೆ ಪ್ರತಿಭಟನೆ ಮಾಡಲು ಜಿಲ್ಲಾಡಳಿತ ಮನವಿ ಮಾಡಿದ ಕಾರಣ, ಅದಕ್ಕೂ ಆಯ್ತು ಎಂದಿದ್ದಾರೆ.

## ಇಡಿ ಪತ್ರ ಮಾಧ್ಯಮ ಸೃಷ್ಟಿ ಪ್ರಶ್ನೆ ಕೇಳಿದ್ದಕ್ಕೆ ಭೈರತಿ ಸುರೇಶ್ ಗರಂ

• ಉದಯವಾಹಿನಿ, ಬೆಳಗಾವಿ

ಮುಡಾ ಅಕ್ರಮದ ಬಗ್ಗೆ ಜಾರಿ ನಿರ್ದೇಶನಾಲಯ ಲೋಕಾಯುಕ್ತಕ್ಕೆ ಬರೆದ ಪತ್ರದ ಬಗ್ಗೆ ಪ್ರಶ್ನೆ ಕೇಳಿದ್ದಕ್ಕೆ ನಗರಾಭಿವೃದ್ಧಿ ಸಚಿವ ಭೈರತಿ ಸುರೇಶ್ ಗರಂ ಆಗಿದ್ದಾರೆ. ಇಡಿ ಪತ್ರದ ಬಳಿಕ ಮಾಧ್ಯಮಗಳ ಕೈಗೆ ಸಿಗದೇ ನಾಪತ್ತೆಯಾಗಿದ್ದ ಭೈರತಿ ಸುರೇಶ್ ಬೆಳಗಾವಿ ಅಧಿವೇಶನದಲ್ಲಿ ಸಿಕ್ಕಿದರು. ಇಡಿ ವೇಳೆ, ಪ್ರಕರಣ ನ್ಯಾಯಾಲಯದಲ್ಲಿದೆ. ನಾನೇನು ನೇಣು ಹಾಕೊಳ್ಳೊಕ್ಕೆ ಆಗುತ್ತಾ ನಾನು ಯಾರ ಕೈಗೂ ಸಿಗದೇ ಹೋಗಿಲ್ಲ. ನಾನು ಎಲ್ಲಿಯೂ ತಪ್ಪಿಸಿಕೊಂಡು ಹೋಗಿಲ್ಲ. ನಾನು ಎಲ್ಲರಿಗೂ ಸಿಗುತ್ತಿದ್ದೇನೆ ಎಂದು ಭೈರತಿ ಸಮರ್ಥನೆ ನೀಡಿದರು. ಇಡಿ ಪತ್ರದ ಬಗ್ಗೆ ಕೇಳಿದ್ದಕ್ಕೆ, ಎಲ್ಲವೂ ಸುಳ್ಳು. ನನ್ನ ವಿರುದ್ಧ ವರದಿ ಕೊಟ್ಟಿಲ್ಲ. ಯಾವ ಅಧಿಕಾರಿ 144 ಫೈಲ್ ತಗೆದುಕೊಂಡು ಹೋಗಿದ್ದಾರೆ ನಾನು ಅಲ್ಲಿಗೆ ಹೋಗಿದ್ದೆ ಅಂತ ಯಾರು ಹೇಳಿದ್ದಾರೆ ಮುಡಾ ಅಕ್ರಮದಲ್ಲಿ ಕ್ರಮ ಕೈಗೊಂಡಿದ್ದೇವೆ ಎಂದು ಹೇಳಿ ಕೆಂಡಾಮಂಡಲವಾದರು.ಇದೇ ವೇಳೆ ಯಾರು ಯಾವುದೇ ಪತ್ರ ಬರೆದಿಲ್ಲ. ಅಧಿಕೃತವಾಗಿ ಇಡಿ ಪತ್ರ ಬರೆದಿದ್ಯಾ ಪತ್ರ ಎಲ್ಲವೂ ಮಾಧ್ಯಮ ಸೃಷ್ಟಿ ಎಂದು ಹೇಳಿ ಮಾಧ್ಯಮಗಳ ಮೇಲೆಯೇ ಗೂಬೆ ಕೂರಿಸಿದರು.


## ಸಿಎಂ ಸಿದ್ದರಾಮಯ್ಯ ಹೇಳಿಕೆ ಕೇವಲ ಬಾಯಿಮಾತಿಗೆ ಸೀಮಿತ

• ಉದಯವಾಹಿನಿ, ದಾವಣಗೆರೆ

ರಾಜ್ಯ ಸರ್ಕಾರ ರೈತರ ಬಗ್ಗೆ ತೋರುತ್ತಿರುವ ನಿರ್ಲಕ್ಷ್ಯ ಖಂಡಿಸಿ ಡಿ.13ರಂದು ರೈತ ಸಂಘಟನೆಯಿಂದ ಬೆಳಗಾವಿ ಸುವರ್ಣಸೌಧ ಮುತ್ತಿಗೆ ಹಾಕಲಾಗುವುದು ಎಂದು ರಾಜ್ಯ ರೈತ ಸಂಘದ ಅಧ್ಯಕ್ಷ ಕೋಡಿಹಳ್ಳಿ ಚಂದ್ರಶೇಖರ್ ತಿಳಿಸಿದ್ದಾರೆ. ಚುನಾವಣೆಗೂ ಮುನ್ನ ಕೃಷಿಗೆ ಸಂಬಂಧಿಸಿದಂತೆ ಪ್ರಣಾಳಿಕೆಯಲ್ಲಿ ನೀಡಿದ್ದ ಘೋಷಣೆಗಳನ್ನು ಕಾಂಗ್ರೆಸ್ ಮರೆತಿದೆ. ನಮ್ಮದು ರೈತಪರ ಸರ್ಕಾರ ಎಂಬ ಸಿಎಂ ಸಿದ್ದರಾಮಯ್ಯ ಅವರ ಹೇಳಿಕೆ ಕೇವಲ ಬಾಯಿಮಾತಿಗೆ ಮಾತ್ರ ಸೀಮಿತವಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ಅಧಿಕಾರಕ್ಕೆ ಬಂದು ಒಂದುವರೆ ವರ್ಷ ಕಳೆದರೂ ಭೂಸುಧಾರಣಾ ಕಾಯ್ದೆಯ ತಿದ್ದುಪಡಿ ಬಗ್ಗೆ ಯಾವುದೇ ತೀರ್ಮಾನ ಮಾಡಿಲ್ಲ. ಬಗರ್ ಹುಕುಂ ರೈತರಿಗೆ ಸಾಗುವಳಿ ಚೀಟಿ ಕೊಟ್ಟಿಲ್ಲ. ರೈತರ ಪರವಾದ ಪಹಣಿ ತಿದ್ದುಪಡಿ ಪ್ರಕ್ರಿಯೆ ಮಂದಗತಿಯಲ್ಲಿ ನಡೆಯುತ್ತಿದೆ ಅರಣ ಇಲಾಖೆ ಸಣ್ಣ ರೈತರಿಗೆ ಕಿರುಕುಳ ನೀಡುತ್ತಿದೆ. ಇದರಿಂದಾಗಿ ರೈತರು ಆತಂಕಗೊಂಡಿದ್ದಾರೆ. ರೈತರ ವಿಚಾರದಲ್ಲಿ ಕಾಂಗ್ರೆಸ್, ಬಿಜೆಪಿ ನಡುವೆ ಯಾವುದೇ ವ್ಯತ್ಯಾಸವಿಲ್ಲ ಎಂದು ಕಿಡಿಕಾರಿದರು. ರೈತರ ವಿವಿಧ ಬೇಡಿಕೆ ಈಡೇರಿಸುವಂತೆ ಆಗ್ರಹಿಸಿ ಡಿ.13ರಂದು ಸುವರ್ಣ ಸೌಧಕ್ಕೆ ಮುತ್ತಿಗೆ ಹಾಕುವ ಮೂಲಕ ಸರ್ಕಾರಕ್ಕೆ ಬಿಸಿ ಮುಟ್ಟಿಸುವುದಾಗಿ ತಿಳಿಸಿದರು.

- ಉಪ ಚುನಾವಣೆಯಲ್ಲಿ ಗೆದ್ದಿದ್ದ ಮೂವರು ಕಾಂಗ್ರೆಸ್ ಶಾಸಕರಿಂದ ಪ್ರಮಾಣವಚನ ಸ್ವೀಕಾರ ಮಾಡಿದ ಸ್ಪೀಕರ್
- ವಂದೇಮಾತರಂ ಗಾಯನದೊಂದಿಗೆ ವಿಧಾನಸಭೆ ಕಲಾಪ ಆರಂಭ
- ಎರಡು ದಿನಗಳಲ್ಲಿ ಗಡಿ ಕನ್ನಡ ಶಾಲೆಗಳಿಗೆ ಭೇಟಿ ನೀಡುವೆ: ಮಧು ಬಂಗಾರಪ್ಪ

# ವಕ್ಫ್ ಪ್ರಸ್ತಾಪ ವಿಪಕ್ಷಗಳ ಆರೋಪ




**ವಕ್ಫ್ ಆಸ್ತಿ ವಿಚಾರ; ಮಾತಿನ ಸಮರ**

• ಉದಯವಾಹಿನಿ, ಬೆಂಗಳೂರು

ಬೆಳಗಾವಿಯ ಅಧಿವೇಶನದ ಮೊದಲ ದಿನವೇ ವಕ್ಫ್ ಆಸ್ತಿ ವಿಚಾರ ಪ್ರತಿಧ್ವನಿಸಿದೆ. ಕೆಲಕಾಲ ಗದ್ದಲದ ವಾತಾವರಣ ನಿರ್ಮಾಣವಾದ ಪ್ರಸಂಗ ವಿಧಾನಸಭೆಯಲ್ಲಿ ಸೋಮವಾರ ನಡೆಯಿತು. ಸ್ಪೀಕರ್ ಯು.ಟಿ.ಖಾದರ್ ಸಂತಾಪ ಸೂಚನಾ ನಿರ್ಣಯ ಮಂಡಿಸಿದ ನಂತರ ಸಭಾಧ್ಯಕ್ಷರ ಪೀಠ ನವೀಕರಣ ಮಾಡಿರುವ ಬಗ್ಗೆ ತಿಳಿಸಿದರು. ಬಳಿಕ ಸುವರ್ಣ ವಿಧಾನಸೌಧದಲ್ಲಿ ಅನುಭವ ಮಂಟಪದ ವರ್ಣಚಿತ್ರ ಪ್ರತಿಷ್ಠಾಪಿಸಿರುವ ಕುರಿತು ಸದನಕ್ಕೆ



ಬಿಜೆಪಿ, ಆರ್ ಎಸ್ಎಸ್‌ನವರು ಬಸವಣ್ಣನವರ ವಿರೋಧಿಗಳು. ಬಿಜೆಪಿಯ ಶಾಸಕರೊಬ್ಬರು ಬಸವಣ್ಣನವರ ಬಗ್ಗೆ ಅವಹೇಳನವಾಗಿ ಮಾತನಾಡಿದ್ದಾರೆ. ಬಸವಣ್ಣನವರ ಬಗ್ಗೆ ಮಾತನಾಡುವ ನೈತಿಕ ಹಕ್ಕು ಬಿಜೆಪಿಯವರಿಗೆ ಇಲ್ಲ ಎಂದು ಏರುಧ್ವನಿಯಲ್ಲಿ ಹೇಳಿದರು. ಆಗ ಮತ್ತೆ ಎರಡೂ ಕಡೆಯ ಸದಸ್ಯರ ನಡುವೆ ಮಾತಿನ ಚಕಮಕಿ ಜೋರಾಯಿತು.

-ಡಾ.ಶರಣ ಪ್ರಕಾಶ್ ಪಾಟೀಲ್ ಸಚಿವ



ಮಾಹಿತಿ ನೀಡುತ್ತಿದ್ದಂತೆಯೇ ಪ್ರತಿಪಕ್ಷದ ನಾಯಕ ಆರ್. ಅಶೋಕ್, ವಕ್ಫ್ ವಿಚಾರದ ಬಗ್ಗೆ ನಿಲುವಳಿ ಸೂಚನೆಯ ಪೂರ್ವಭಾವಿ ಪ್ರಸ್ತಾಪಕ್ಕೆ ಅವಕಾಶ ಕೊಡಬೇಕು. ನೀವು ಅನುಭವ ಮಂಟಪದ ವಿಚಾರ ಪ್ರಸ್ತಾಪಿಸುತ್ತಿರುವುದರಿಂದ ಆ ವಿಚಾರದ ಬಗ್ಗೆ ಚರ್ಚೆ ನಡೆಯುತ್ತದೆ. ನಿಲುವಳಿ ಸೂಚನೆಯ ಪೂರ್ವಭಾವಿ ಪ್ರಸ್ತಾವನೆ ಮಂಡನೆ ಮಾಡಲು ತಡವಾಗುತ್ತದೆ ಎಂದು ಹೇಳಿದರು. ಆಡಳಿತ ಪಕ್ಷದ ಕಡೆಯಿಂದ ಹಲವು ಶಾಸಕರು, ಸಚಿವ ಕೃಷ್ಣಬೈರೇಗೌಡ, ಡಾ.ಶರಣ ಪ್ರಕಾಶ್ ಪಾಟೀಲ್ ಎದ್ದುನಿಂತು ನಿಯಮಾವಳಿಗಳಂತೆ ಚರ್ಚೆಗೆ ಅವಕಾಶ ಕೊಡಿ. ಪ್ರಶ್ನೋತ್ತರ ನಡೆಯಲಿ. ಆಡಳಿತ ಹಾಗೂ ಪ್ರತಿಪಕ್ಷದ ಸದಸ್ಯರ ನಡುವೆ ಮಾತಿನ ಚಕಮಕಿ ನಡೆದು ಗದ್ದಲದ ವಾತಾವರಣ ನಿರ್ಮಾಣವಾಯಿತು. ಪ್ರತಿಪಕ್ಷ ನಾಯಕ ಆರ್.ಅಶೋಕ್, ಅರವಿಂದ ಬೆಲ್ಲದ, ಬಸನಗೌಡ ಪಾಟೀಲ್ ಯತ್ನಾಳ್ ಎದ್ದು ನಿಂತು ವಕ್ಫ್ ವಿಚಾರ ಚರ್ಚೆಗೆ ಅವಕಾಶ ಕೊಡಿ, ರೈತರಿಗೆ ಅನ್ಯಾಯವಾಗುತ್ತಿದೆ ಎಂದು ಮನವಿ ಮಾಡಿದರು. ಮಾತು ಮುಂದುವರಿಸಿದ ಅಶೋಕ್, ನೀವು ಇಲ್ಲಿ ಬಸವಣ್ಣನವರ ಅನುಭವ ಮಂಟಪದ ವಿಚಾರ ಪ್ರಸ್ತಾಪಿಸುತ್ತಿದ್ದೀರಿ, ಬಸವಣ್ಣನ ದೇವಾಲಯಗಳೆಲ್ಲಾ ವಕ್ಫ್ ಆಸ್ತಿಗಳಾಗುತ್ತಿವೆ ಎಂದು ಹೇಳಿದ ಬಳಿಕ ಮತ್ತೆ ಆಡಳಿತ ಮತ್ತು ಪ್ರತಿಪಕ್ಷ ಸದಸ್ಯರ ನಡುವೆ ಮಾತಿನ ಚಕಮಕಿಗೆ ಕಾರಣವಾಗಿ ಗದ್ದಲ ಹೆಚ್ಚಾಯಿತು. ಕೃಷ್ಣಬೈರೇಗೌಡ ಮಾತನಾಡಿ, ವಕ್ಫ್ ವಿವಾದಕ್ಕೆ ಸಂಬಂಧಿಸಿದಂತೆ ನಾವು ಚರ್ಚೆಗೆ ಸಿದ್ಧ. ನಿಯಮಾವಳಿಗಳಂತೆ ಚರ್ಚೆಗೆ ಅವಕಾಶ ಕೊಡಿ. ಬಿಜೆಪಿಯವರು ಅಧಿವೇಶನದ ಮೊದಲ ದಿನವೇ ಸದನದ ಸಮಯ ಹಾಳು ಮಾಡಲು ಹೊರಟಿದ್ದಾರೆ. ರಾಜಕೀಯ ಮಾಡುತ್ತಿದ್ದಾರೆ ಎಂದು ಕಿಡಿಕಾರಿದರು. ಆಡಳಿತ ಪಕ್ಷದ ಹಲವು ಸದಸ್ಯರು ದನಿಗೂಡಿಸಿದರು. ಗದ್ದಲ ಮತ್ತಷ್ಟು ಹೆಚ್ಚಾಯಿತು. ಆಗ ಮಧ್ಯಪ್ರವೇಶಿಸಿದ ಸ್ಪೀಕರ್ ಯು.ಟಿ.ಖಾದರ್, ಎಲ್ಲಾ ಸದಸ್ಯರನ್ನು ಸಮಾಧಾನಗೊಳಿಸಿ, ಸದನ ನಿಯಮಾವಳಿಗಳಂತೆ ನಡೆಸಬೇಕು. ಪ್ರಶ್ನೋತ್ತರ ಮುಗಿಯಲಿ, ನಂತರ ಅವಕಾಶ ಕೊಡುತ್ತೇನೆ ಎಂದು ಹೇಳಿದರು.

### ಪಂಚಮಸಾಲಿ ಮೀಸಲಾತಿಗೆ ಒತ್ತಾಯ



ಪಂಚಮಸಾಲಿ ಮೀಸಲಾತಿ ಹೋರಾಟ ಸರ್ಕಾರ ಹತ್ತಿಕ್ಕುತ್ತಿದೆ ಎಂದು ಬಿಜೆಪಿಯ ಸದಸ್ಯರು ವಿಧಾನಸಭೆಯಲ್ಲಿ ಧರಣಿ ನಡೆಸಿದ್ದರಿಂದ ಸದನವನ್ನು ಮಧ್ಯಾಹ್ನಕ್ಕೆ ಮುಂದೂಡಲಾಯಿತು. ವಕ್ಫ್‌ಗೆ ಸಂಬಂಧಿಸಿದಂತೆ ಗದ್ದಲ ತಿಳಿಯಾದ ನಂತರ ಬಿಜೆಪಿ ಸದಸ್ಯರಾದ ಯತ್ನಾಳ್, ಸಿ.ಸಿ.ಪಾಟೀಲ್, ಅರವಿಂದ ಬೆಲ್ಲದ ಮತ್ತಿತರರು ಏಕಾಏಕಿ ಎದ್ದುನಿಂತು ಪಂಚಮಸಾಲಿ ಮೀಸಲಾತಿಗೆ ಸಂಬಂಧಿಸಿದಂತೆ ಟ್ರ್ಯಾಕ್ಟರ್ ರ್‍ಯಾಲಿ ನಡೆಸಲು ಸರ್ಕಾರ ಅವಕಾಶ ಕೊಡುತ್ತಿಲ್ಲ. ಇದು ಪ್ರಜಾಪ್ರಭುತ್ವ ವಿರೋಧಿ ಧೋರಣೆ. ಪ್ರತಿಭಟನೆಗೆ ಅವಕಾಶ ಕೊಡಿ ಎಂದು ಸದನದ ಸ್ಪೀಕರ್ ಪೀಠದ ಮುಂದಿರುವ ಬಾವಿಗೆ ಆಗಮಿಸಿ ಧರಣಿ ಆರಂಭಿಸಿದರು.

### ಸರ್ಕಾರದ ವಿರುದ್ಧ ವಾಗ್ದಾಳಿ



ಬಿಜೆಪಿಯ ಎಲ್ಲಾ ಸದಸ್ಯರು, ಪಂಚಮಸಾಲಿ ಹೋರಾಟಕ್ಕೆ ಅವಕಾಶ ಕೊಡಬೇಕು ಎಂದು ಒತ್ತಾಯಿಸಿದರು. ಈ ನಡುವೆ ಮಾತನಾಡಿದ ಆರ್.ಅಶೋಕ್, ಸರ್ಕಾರ ಪ್ರಜಾಪ್ರಭುತ್ವವನ್ನು ಕಗ್ಗೊಲೆ ಮಾಡುತ್ತಿದೆ. ಹೋರಾಟ ನಡೆಸುವ ಹಕ್ಕುಗಳನ್ನು ಹತ್ತಿಕ್ಕುತ್ತಿದೆ. ಇದು ಸರಿಯಲ್ಲ ಎಂದು ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದರು. ಬಿಜೆಪಿ ಸದಸ್ಯರ ಧರಣಿಯಿಂದ ಸದನದಲ್ಲಿ ಗದ್ದಲದ ವಾತಾವರಣ ನಿರ್ಮಾಣವಾಗಿದ್ದರಿಂದ ಸ್ಪೀಕರ್ ಸದನವನ್ನು ಮಧ್ಯಾಹ್ನಕ್ಕೆ ಮುಂದೂಡಿದರು.

## 17 ತಿಂಗಳಲ್ಲಿ 17 ಅವಾಂತರ ತೋರಿದ ಸರ್ಕಾರ

• ಉದಯವಾಹಿನಿ, ಬೆಳಗಾವಿ



ಸಿಎಂ ನಿದ್ದೆರಾಮಯ್ಯ ಆಗಿದ್ದಾರೆ, 12 ತಿಂಗಳ ಅವಧಿಯಲ್ಲಿ 17 ಅವಾಂತರಗಳನ್ನು ಸರ್ಕಾರ ತೋರಿಸಿದೆ ಎಂದು ಪ್ರತಿಪಕ್ಷ ನಾಯಕ ಆರ್.ಅಶೋಕ್ ಕಿಡಿಕಾರಿದ್ದಾರೆ. ಬೆಳಗಾವಿಯಲ್ಲಿ ಮಾತನಾಡಿದ ಅವರು, ಕಾಂಗ್ರೆಸ್ ಸರ್ಕಾರ ಆಡಳಿತಕ್ಕೆ ಬಂದು 18 ತಿಂಗಳು ಕಳೆದಿವೆ. 17 ತಿಂಗಳಾದರೂ ಸರ್ಕಾರ ಏನೂ ಅಭಿವೃದ್ಧಿ ಮಾಡಿಲ್ಲ. ಆದರೆ 17 ತಿಂಗಳಲ್ಲಿ 17 ಅವಾಂತರಗಳನ್ನು ಸರ್ಕಾರ ತೋರಿಸಿದೆ. ಸಿದ್ದರಾಮಯ್ಯ ಕಳೆದ ಬಾರಿಯ ಆಡಳಿತವನ್ನು ಕೊಡುತ್ತಿಲ್ಲ. ಈ ಬಾರಿ ಸಿದ್ದರಾಮಯ್ಯ ಅವರೇ ಮುಡಾದಲ್ಲಿ ಸಿಲುಕಿ ನರಳುತ್ತಿದ್ದಾರೆ. ಸಿಎಂ ಸಿದ್ದರಾಮಯ್ಯ ಇದೀಗ ನಿದ್ದೆರಾಮಯ್ಯ ಆಗಿದ್ದಾರೆ. ಜೊತೆಗೆ ಸರ್ಕಾರವು ಕೂಡ ನಿದ್ದೆಯಲ್ಲಿದೆ. ಸಿಎಂಗೆ ಯಾವುದೇ ಇಲಾಖೆಗಳ ಮೇಲೆಯೂ ಹಿಡಿತ ಇಲ್ಲ ಎಂದು ವ್ಯಂಗ್ಯವಾಡಿದರು.

ಬೆಳಗಾವಿ ಜಿಲ್ಲೆಯೊಂದರಲ್ಲಿಯೇ ಮುನ್ನೂರಕ್ಕೂ ಹೆಚ್ಚು ನವಜಾತ ಶಿಶುಗಳ ಸಾವಾಗಿದೆ. ಸಿದ್ದರಾಮಯ್ಯ ಹೊಸದಾಗಿ ಬಂದಾಗ ಪ್ರತಿ ತಿಂಗಳು ಜನತಾದರ್ಶನ ಮಾಡುತ್ತೇನೆ ಎಂದಿದ್ದರು. ಆದರೆ ಮಂತ್ರಿಗಳು ದುಡ್ಡು ಮಾಡುವುದರಲ್ಲಿ ಮುಳುಗಿದ್ದಾರೆ. ಜಿಲ್ಲೆಗಳಿಗೆ ಮಂತ್ರಿಗಳು ಭೇಟಿ ಕೊಡುತ್ತಿಲ್ಲ. ದುಡ್ಡು ಮಾಡಲು ಮಾತ್ರ ಜಿಲ್ಲೆಗಳಿಗೆ ಹೋಗುತ್ತಾರೆ. ಯಾವ ಮಂತ್ರಿಗಳು ಆಯಾ ಜಿಲ್ಲೆಗೆ ಹೋಗುತ್ತಿಲ್ಲ. ಇದು ಗುರುವಾರದ ಸರ್ಕಾರ, ಗುರುವಾರ ಮಾತ್ರ ಸಚಿವರು ವಿಧಾನಸೌಧಕ್ಕೆ ಬರುತ್ತಾರೆ. ಉತ್ತರ ಕರ್ನಾಟಕದ ಬಗ್ಗೆ ಸರ್ಕಾರ ಹೇಳಿದ್ದೇನು, ಮಾಡಿದ್ದೇನು ಅತ್ಯಂತ ಕಳಪೆ ಸರ್ಕಾರ ಇದು. ಅಧಿವೇಶನದಲ್ಲಿ ಚರ್ಚೆ ಮಾಡುತ್ತೇವೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

## ಸರ್ಕಾರದ ಬೇಜವಾಬ್ದಾರಿತನದಿಂದ ಸಾವು

• ಉದಯವಾಹಿನಿ, ಬೆಳಗಾವಿ

ಬಾಣಂತಿಯರು ಮತ್ತು ಹಸುಗೂಸುಗಳ ಸಾವಿನಲ್ಲಿ ರಾಜ್ಯ ಸರ್ಕಾರದ ಬೇಜವಾಬ್ದಾರಿತನ ಮೇಲ್ನೋಟಕ್ಕೆ ಕಾಣುತ್ತಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಮತ್ತು ಶಾಸಕ ಬಿವೈ.ವಿಜಯೇಂದ್ರ ಆರೋಪಿಸಿದರು.

ಸತ್ಯಾಂಶ ತಿಳಿಯಲು ಇಲ್ಲಿಗೆ ಬಂದಿದ್ದೇವೆ. ಆಸ್ಪತ್ರೆ ಭೇಟಿಯಲ್ಲಿ ರಾಜಕಾರಣದ ಪ್ರಶ್ನೆ ಇಲ್ಲ. ಇವತ್ತು ಬಡವರಿಗೆ ಅನ್ಯಾಯ ಆಗುತ್ತಿದೆ. ಬಾಣಂತಿಯರು, ಹಸುಗೂಸುಗಳು ಪ್ರಾಣ ಕಳೆದುಕೊಳ್ಳುತ್ತಿದ್ದಾರೆ. ಇದನ್ನು ಸದನದಲ್ಲಿ ಚರ್ಚಿಸುತ್ತೇವೆ ಎಂದು ತಿಳಿಸಿದರು.ಉಸ್ತುವಾರಿ ಸಚಿವರು, ಆರೋಗ್ಯ ಸಚಿವರು, ವೈದ್ಯಕೀಯ ಶಿಕ್ಷಣ ಸಚಿವರು ಈ ಸಾವುಗಳ ಕುರಿತು ತಲೆ ಕೆಡಿಸಿಕೊಂಡಿಲ್ಲ. ಈ ಬೇಜವಾಬ್ದಾರಿತನ ಏನಿದೆಯೋ? ಅದನ್ನು ಸರ್ಕಾರ ಈಗಲಾದರೂ ಎಚ್ಚೆತ್ತು ಗಮನಿಸಬೇಕು ಎಂಬ ದೃಷ್ಟಿಯಿಂದ ಇದರ ಕುರಿತು ಗಮನ ಸೆಳೆಯುತ್ತೇವೆ ಎಂದು ಹೇಳಿದರು.

# ಪಕ್ಷದ ಚೌಕಟ್ಟಿನಲ್ಲಿ ಏನೇ ತೀರ್ಮಾನ ಆದರೂ ಪಾಲಿಸಲು ಬದ್ಧ: ನಿಖಿಲ್ ಮಾತು

## ● ಸರ್ಕಾರದಲ್ಲಿ ಮುಂಚೂಣಿ ಹುದ್ದೆಯಲ್ಲಿದ್ದಾರೆ ಎಂಬ ಕಾರಣಕ್ಕೆ ಉಳಿದೆಲ್ಲಾ ಪ್ರಮುಖ ನಾಯಕರನ್ನು ಮೂಲೆ ಗುಂಪು ಮಾಡಿ ಮೇಳೈಸುತ್ತಿದ್ದಾರೆ

• ಉದಯವಾಹಿನಿ, ಬೆಂಗಳೂರು

**ಶಕ್ತಿ ತುಂಬುವ ನಿಟ್ಟಿನಲ್ಲಿ ಕೆಲಸ**

ನಾನು ಪಕ್ಷದ ಶಿಸ್ತಿನ ಸಿಪಾಯಿ. ಪಕ್ಷದ ಹಿತ ಕಾಪಾಡುವುದು ನನ್ನ ಜವಾಬ್ದಾರಿ. ಹೀಗಾಗೀ ಪಕ್ಷ ಕಟ್ಟಿ ಬೆಳೆಸಿದ ಕಟ್ಟ ಕಡೆಯ ಕಾರ್ಯಕರ್ತನಿಗೂ ರಾಜಕೀಯ, ಸಾಮಾಜಿಕ ಶಕ್ತಿ ತುಂಬುವ ನಿಟ್ಟಿನಲ್ಲಿ ಅವರಲ್ಲಿ ಒಬ್ಬನಾಗಿ ಕೆಲಸ ಮಾಡುತ್ತಿದ್ದೇನೆ. ಪಕ್ಷದ ಚೌಕಟ್ಟಿನಲ್ಲಿ ಏನೇ ತೀರ್ಮಾನ ಆದರೂ ನಾನು ಪಾಲಿಸಲು ಬದ್ಧ ಎಂದು ಜೆಡಿಎಸ್ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಹೇಳಿದ್ದಾರೆ.

ರಾಜ್ಯಾಧ್ಯಕ್ಷ ಹುದ್ದೆ ಆಯ್ಕೆ ಮಾಡುವ ವಿಚಾರಕ್ಕೆ ಸಂಬಂಧಿಸಿದಂತೆ ದೆಹಲಿಯಲ್ಲಿ ಮಾತನಾಡಿದ ಅವರು, ನಾನು ಯಾವುದೇ ಹುದ್ದೆಯ ಆಕಾಂಕ್ಷಿ ಅಲ್ಲ. ನಮ್ಮಲ್ಲಿ ಹಿರಿಯ ನಾಯಕರಿದ್ದಾರೆ. ಅವರ ಜೊತೆಗೆ ಹೆಚ್.ಡಿ ಕುಮಾರಸ್ವಾಮಿ ಮಾರ್ಗದರ್ಶನದಲ್ಲಿ ಕೆಲಸ ಮಾಡುತ್ತೇನೆ. ಪಕ್ಷ ಇದ್ದರೆ ನಿಖಿಲ್ ಕುಮಾರಸ್ವಾಮಿ. ಪಕ್ಷಕ್ಕೆ ಸಾವಿರಾರು ಕಾರ್ಯಕರ್ತರನ್ನು ಹುಟ್ಟು ಹಾಕುವ ಶಕ್ತಿ ಇದೆ. ಹೀಗಾಗೀ ಪಕ್ಷದ ತೀರ್ಮಾನವೇ ಅಂತಿಮ ಎಂದರು.

ಉಪಚುನಾವಣೆ ಬಳಿಕ ನಾನು ಕೈಕಟ್ಟಿ ಕೂತಿಲ್ಲ. ರೈತರ ನಿಯೋಗದೊಂದಿದೆ ದೆಹಲಿಗೆ ಬಂದಿದ್ದೇನೆ. ತಂಬಾಕು ಬೆಳೆಗಾರರ ಸಮಸ್ಯೆಗಳ ಕೇಂದ್ರ ಮಂತ್ರಿಗಳ ಜೊತೆಗೆ ಚರ್ಚೆ ಮಾಡಿದ್ದೇನೆ. ಇದೇ ಅವಧಿಯಲ್ಲಿ ಗೃಹ ಸಚಿವ ಅಮಿತ್ ಶಾ, ಉಸ್ತುವಾರಿ ರಾಧಮೋಹನ್ ಸಿಂಗ್, ಸಂಘಟನಾ ಪ್ರಧಾನ ಕಾರ್ಯದರ್ಶಿ ಬಿ.ಎಲ್ ಸಂತೋಷ್ ಅವರನ್ನು ಭೇಟಿಯಾಗಿದ್ದೇನೆ. ಮೈತ್ರಿಯನ್ನು ಬಲಪಡಿಸುವ ಬಗ್ಗೆ, ಸ್ಥಳೀಯ ಚುನಾವಣೆಗಳಲ್ಲಿ ಒಟ್ಟಾಗಿ ಹೋಗುವ ಬಗ್ಗೆ ಚರ್ಚೆ ಮಾಡಿದ್ದೇನೆ. ಅಮಿತ್ ಶಾ ಅವರಿಗೆ ರಾಜ್ಯ ಬಿಜೆಪಿ ಬೆಳವಣಿಗೆ ಬಗ್ಗೆ ಗೊತ್ತಿರುವ ಹಿನ್ನೆಲೆ ಆ ಬಗ್ಗೆ ಚರ್ಚಿಸಿಲ್ಲ ಎಂದು ಹೇಳಿದರು. ಹಾಸನದಲ್ಲಿ ಕಾಂಗ್ರೆಸ್ ಜನಕಲ್ಯಾಣ ಸಮಾವೇಶದ ಬಗ್ಗೆ ಪ್ರತಿಕ್ರಿಯಿಸಿ, ಯಾರ ಕಲ್ಯಾಣ ಆಗಿದೆ ಎಂದು ಕಾಂಗ್ರೆಸ್ ಸಮಾವೇಶ ಮಾಡಿದೆ ಹೆಚ್‌ಡಿ ದೇವೇಗೌಡರ ಕುಟುಂಬವನ್ನು ನಿಂದಿಸುವ ಸಮಾವೇಶ ಮಾಡಿದ್ದಾರೆ. ನಮ್ಮನ್ನು ನಿಂದಿಸಿ ರಾಜಕೀಯವಾಗಿ ದುರ್ಬಲ ಮಾಡುವ ಹುನ್ನಾರ ಮಾಡಿದ್ದಾರೆ. ದೇವೇಗೌಡರ ಕುಟುಂಬವನ್ನು ನಿಂದಿಸಿದರೆ ಏನು ಸಿಗುತ್ತೆ ಅದಕ್ಕೆ ಪ್ರತಿಯಾಗಿ ಸಮಾವೇಶ ಮಾಡುವುದರಿಂದ ಏನು ಲಾಭ ಇಲ್ಲ ಎಂದು ಆಕ್ರೋಶ ಹೊರ ಹಾಕಿದರು. ಕುಮಾರಸ್ವಾಮಿ ಸಂಸತ್‌ನಲ್ಲಿ ಬ್ಯುಸಿಯಾಗಿರುವ ಹಿನ್ನೆಲೆ ಮಂಡ್ಯದಲ್ಲಿ ಮಾಡಬೇಕಿದ್ದ ಸಮಾವೇಶ ಮುಂದೂಡಿದೆ ಎಂದು ತಿಳಿಸಿದರು. ಉಪಚುನಾವಣೆಯಲ್ಲಿ ಅನಿರೀಕ್ಷಿತವಾಗಿ ಸ್ಪರ್ಧಿಸಿ 87,000 ಮತಗಳನ್ನು ಪಡೆದು ಸೋಲನ್ನಪ್ಪಿದ್ದೇನೆ. ನಮಗೆ ಜಯ ಸಿಕ್ಕಿರದೇ ಇರಬಹುದು, ಫಲ ಸಿಕ್ಕಿದೆ. ಜನರ ತೆರಿಗೆಯ ದುಡ್ಡನ್ನು ಚುನಾವಣಾ ಮುನ್ನಾ ದಿನ ಗೃಹಲಕ್ಷ್ಮಿ ಯೋಜನೆ ಮೂಲಕ ನೀಡಲಾಯಿತು. ಇದರ ಜೊತೆಗೆ ಒಂದು ಸಮುದಾಯ ನಮ್ಮನ್ನು ಕೈಬಿಟ್ಟಿತು.



### ಹಲಾಲ್, ಹಿಜಾಬ್ ಪರ ಧ್ವನಿ ಎತ್ತಿದ್ದು ಕುಮಾರಸ್ವಾಮಿ



ಗಣೇಶ ವಿಸರ್ಜನೆ ಪ್ರಕರಣ ನಡೆದಾಗ ಎರಡು ಸಮುದಾಯದ ನಡುವೆ ಘರ್ಷಣೆಯಾಯಿತು. ಆಗ ಆಸ್ತಿ ಹಾನಿಯಾದವರಿಗೆ ಸಮುದಾಯ ಕೇಳದೆ ಹೆಚ್‌ಡಿ ಕುಮಾರಸ್ವಾಮಿ ಸಹಾಯ ಮಾಡಿದರು. ಮುಸ್ಲಿಮರಿಗೆ ಸಾಂತ್ವನ ಹೇಳಿ ನೆರವು ನೀಡಿದರು. ಹಲಾಲ್, ಹಿಜಾಬ್ ಪರ ಧ್ವನಿ ಎತ್ತಿದ್ದು ಕುಮಾರಸ್ವಾಮಿ. ಅದಾಗ್ಯೂ ನಮ್ಮನ್ನು ಬಿಟ್ಟು ಕಾಂಗ್ರೆಸ್ ಆಯ್ಕೆ ಮಾಡಿದ್ದಾರೆ. ಅದು ಅವರ ನಿರ್ಧಾರ. ನಾವು ಪ್ರಶ್ನೆ ಮಾಡುವುದಿಲ್ಲ ಎಂದರು. ಚನ್ನಪಟ್ಟಣಕ್ಕೆ ಹೆಚ್‌ಡಿ ಕುಮಾರಸ್ವಾಮಿ ಅವರು 1,200 ಕೋಟಿ ಅನುದಾನ ತಂದಿದ್ದಾರೆ. ಆದರೆ ನಾವು ಪ್ರಚಾರ ಪಡೆದಿಲ್ಲ. ಆತ್ಮ ಸಾಕ್ಷಿಯಾಗಿ ಕೆಲಸ ಮಾಡಿದ್ದೇವೆ. ಮಾಡಿದ ಕೆಲಸ ಹೆಚ್‌ಡಿ ದೇವೇಗೌಡರು, ಹೆಚ್‌ಡಿ ಕುಮಾರಸ್ವಾಮಿ ಹೇಳಿಕೊಂಡಿಲ್ಲ. ಮಾಡಿದ ಅಭಿವೃದ್ಧಿ ಜನರ ಮುಂದೆ ಹೇಳಬೇಕಿತ್ತು. ಜನರ ನೆನಪು ಕಡಿಮೆ. ಹೀಗಾಗಿ ನಾವು ನೆನಪಿಸಬೇಕಿತ್ತು. ಇದರಲ್ಲಿ ನಾವು ಎಡವಿದ್ದೇವೆ ಎಂದು ನುಡಿದರು.

**ಈ ದಿನದ ದರ** | ಪೆಟ್ರೋಲ್: 103.44 ₹/L | ಡೀಸೆಲ್ : 89.97 ₹/L | ಬಂಗಾರ: ₹7,778/Gram24ct ₹7,130/Gram22ct | ಬೆಳ್ಳಿ: ₹92.00/Gram



## ಸಿದ್ಧಸೂಕ್ತಿ

**ಡಾ ಆರೂಢಭಾರತೀ ಸ್ವಾಮೀಜಿ**
**ಶ್ರೀ ಸಿದ್ಧಾರೂಢ ಮಿಷನ್ ಆಶ್ರಮ ರಾಮೋಹಳ್ಳಿ**

## ವಿವಾದಿತ ಮಂದಿರ ಮಸೀದಿಗಳು


ಎಂಟನೆಯದಾಗಿ ದೆಹಲಿಯ ಕುತುಬ್ ಮಿನಾರ್. 1199 ರಿಂದ 1220 ರ ಅವಧಿಯಲ್ಲಿ ನಿರ್ಮಾಣಗೊಂಡ ಈ ಸ್ಮಾರಕದ ನಿರ್ಮಾಣವನ್ನು ಗುಲಾಮ ಸಂತತಿಯ ಮೊದಲ ಸುಲ್ತಾನ ಕುತ್ಬುದ್ದೀನ್ ಐಬಕ್ ಪ್ರಾರಂಭಿಸಿದ, ಇಲ್ತಾಮಿಷ್ ಪೂರ್ಣಗೊಳಿಸಿದ ಎಂಬ ಪ್ರತೀತಿ ಇದೆ. ಅತಿ ಎತ್ತರದ ಈ ಮಿನಾರ್ ನ ಗೋಪುರದ ಕೆಳಗಡೆ ಕುಲಾತ್ ಉಲ್ ಇಸ್ಲಾಂ ಎಂಬ ಮಸೀದಿ ಇದೆ. ಆದರೆ ಇದು ಹಿಂದುಗಳಿಗೆ ಸಂಬಂಧಿಸಿದ್ದು ಎಂದು ಹೇಳಲಾಗುತ್ತಿದ್ದು ಈ ಮಿನಾರ್ ನ್ನು ಧ್ರುವಸ್ತಂಭ / ವಿಷ್ಣುಸ್ತಂಭ/ಸೂರ್ಯಸ್ತಂಭ ಎಂದೂ ಕರೆಯಲಾಗುತ್ತಿದೆ. ಒಂಭತ್ತನೆಯದಾಗಿ ವಿಜಯಪುರ(ಬಿಜಾಪುರ) ದ ಕರೀಮುದ್ದೀನ್ ಮಸೀದಿ. ಇದು ಮೂಲತಃ 11ನೇ ಶತಮಾನದ ನಾಗಚಂದ್ರನು ನಿರ್ಮಿಸಿದ 19 ನೇ ತೀರ್ಥಂಕರ ಮಲ್ಲಿನಾಥನ ಜೈನ ಬಸದಿ. 14 ನೇ ಶತಮಾನದಲ್ಲಿ ಅಲ್ಲಾವುದ್ದೀನ್ ಖಿಲ್ಜಿಯ ಸೇನಾ ದಂಡನಾಯಕ ಮುಸ್ಲಿಂ ಆಗಿ ಮತಾಂತರಗೊಂಡ ಹಿಂದು ಮಲ್ಲಿಖಾಫರ್ ಈ ಬಸದಿಯನ್ನು ನಾಶಪಡಿಸಿ ಬಸದಿಯ ಮೇಲೆ ಈ ಮಸೀದಿಯನ್ನು ನಿರ್ಮಿಸಿದನೆಂದು ಹೇಳಲಾಗುತ್ತಿದೆ.

# ನನೆಗುದಿಗೆ ಬಿದ್ದ ಕೆಂಪೇಗೌಡ ಅಧ್ಯಯನ ಕೇಂದ್ರ ಕಾಮಗಾರಿ

## ಜ್ಞಾನಭಾರತಿ ವಿಶ್ವವಿದ್ಯಾನಿಲಯ ಕ್ಯಾಂಪಸ್‌ನಲ್ಲಿ ಅಧ್ಯಯನ ಕೇಂದ್ರವಿದ್ದು 100–ಕೋಟಿ ಯೋಜನೆ

• ಉದಯವಾಹಿನಿ, ಬೆಂಗಳೂರು

ನಾಡಪ್ರಭು ಕೆಂಪೇಗೌಡರ ಇತಿಹಾಸ, ಆಡಳಿತ, ಸಾಧನೆ ಅವರು ನೀಡಿದ ಕೊಡುಗೆಗಳನ್ನು ನಾಡಿನ ಜನರಿಗೆ ತಿಳಿಸಿಕೊಡುವ ಉದ್ದೇಶದಿಂದ ನಿರ್ಮಿಸಲು ಉದ್ದೇಶಿಸಿರುವ ಕೆಂಪೇಗೌಡ ಅಧ್ಯಯನ ಕೇಂದ್ರವು ನಿರ್ಲಕ್ಷ್ಯಕ್ಕೊಳಗಾಗಿದೆ.ಕೆಂಪೇಗೌಡರ ಆಡಳಿತ ಮತ್ತು ಅವರ ಜೀವನ ಚರಿತ್ರೆಯನ್ನು ಕಟ್ಟಿಕೊಡುವುದು ಹಾಗೂ ಅವರ ಮುಂದಾಳತ್ವದಲ್ಲಿ ನಗರದಲ್ಲಿ ನಿರ್ಮಾಣವಾಗಿದ್ದ ಕೆರೆಕಟ್ಟೆಗಳು, ದೇವಾಲಯಗಳು, ನಗರದ ಗಡಿ ಗೋಪುರಗಳ ಬಗ್ಗೆ ಜನರಿಗೆ ಸಮಗ್ರ ಮಾಹಿತಿ ನೀಡುವುದು ಈ ಕೇಂದ್ರದ ಉದ್ದೇಶವಾಗಿದೆ.



ಉದಯವಾಹಿನಿ ಚಿತ್ರ

ಜ್ಞಾನಭಾರತಿ ವಿಶ್ವವಿದ್ಯಾನಿಲಯ ಕ್ಯಾಂಪಸ್‌ನಲ್ಲಿ ಅಧ್ಯಯನ ಕೇಂದ್ರವಿದ್ದು 100–ಕೋಟಿ ಯೋಜನೆಯು ಈಗ ಅಪೂರ್ಣವಾಗಿದೆ, ಸೈಟ್ ನಿವಾಸಿಗಳು ಮತ್ತು ಅಲ್ಲಿ ಕೆಲಸ ಮಾಡುವ ಕಾರ್ಮಿಕರಿಗೆ ಬಯಲು ಮಲವಿಸರ್ಜನೆಯ ವಲಯವಾಗಿ ಮಾರ್ಪಟ್ಟಿದೆ. 2016ರಲ್ಲಿ 100 ಕೋಟಿ ರೂಪಾಯಿ ವೆಚ್ಚದಲ್ಲಿ ಆರಂಭವಾದ ಈ ಅಧ್ಯಯನ ಕೇಂದ್ರದಲ್ಲಿ ಮ್ಯೂಸಿಯಂ, 30 ಅಡಿಯ ಕೆಂಪೇಗೌಡರ ಕಂಚಿನ ಪ್ರತಿಮೆ, ಹವಾನಿಯಂತ್ರಿತ ಸಭಾಂಗಣ, ಮತ್ತಿತರ ಸೌಲಭ್ಯಗಳನ್ನು ಕಲ್ಪಿಸಲು ಯೋಜಿಸಲಾಗಿತ್ತು. ಆದರೂ,

**ಸರ್ಕಾರದ ಸಂಪೂರ್ಣ ನಿರ್ಲಕ್ಷ್ಯ**

ಸುಮಾರು ಎಂಟು ವರ್ಷಗಳ ನಂತರ, ಕಾಮಗಾರಿ ಇನ್ನೂ ಅಪೂರ್ಣವಾಗಿಯೇ ಉಳಿದಿದೆ. ನಿರ್ಮಾಣ ಹಂತದಲ್ಲಿರುವ ಕೇಂದ್ರ ಮಲಿನಗೊಂಡಿದೆ. ಈ ಪ್ರದೇಶದ ಸುತ್ತಮುತ್ತಲಿನ ಕಾರ್ಮಿಕರು, ಸ್ಥಳೀಯ ನಿವಾಸಿಗಳು ಇದನ್ನು ಮಲವಿಸರ್ಜನೆಯ ತಾಣವಾಗಿ ಬಳಸುತ್ತಿದ್ದಾರೆ ಎಂದು ವಿದ್ಯಾರ್ಥಿಗಳು TNIEಗೆ ತಿಳಿಸಿದರು.

ಇದಲ್ಲದೆ, ಕುಸಿಯುತ್ತಿರುವ ವಿಶ್ವವಿದ್ಯಾನಿಲಯದ ಕಾಂಪೌಂಡ್ ಗೋಡೆಯು ಜನರ ಪ್ರವೇಶಕ್ಕೆ ಅವಕಾಶ ನೀಡುವ ಮೂಲಕ ಸಮಸ್ಯೆಯನ್ನು ಹೆಚ್ಚಿಸುತ್ತದೆ ಮತ್ತು ಪ್ರದೇಶವನ್ನು ಅಸುರಕ್ಷಿತಗೊಳಿಸುತ್ತದೆ ಎಂದು ವಿದ್ಯಾರ್ಥಿಗಳು ಅಳಲು ತೋಡಿಕೊಂಡರು. ಹಿಂದಿನ ಸರ್ಕಾರದ ಅವಧಿಯಲ್ಲಿ ವಿಶ್ವವಿದ್ಯಾಲಯದ ಪ್ರಾಂಗಣದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್, ಈಶಾನ್ಯ ರಾಜ್ಯಗಳ ವಿದ್ಯಾರ್ಥಿನಿಯರ ವಸತಿನಿಲಯ ಹಾಗೂ ಕೆಂಪೇಗೌಡ ಅಧ್ಯಯನ ಮತ್ತು ಸಂಶೋಧನ ಕೇಂದ್ರ ಆರಂಭಿಸಲು ಮಂಜೂರಾತಿ ಸಿಕ್ಕಿತ್ತು.

> **ವರ್ಷಗಳ ನಿರ್ಲಕ್ಷ್ಯತೆಯ ನಂತರ ಯೋಜನೆಯು ಇತ್ತೀಚೆಗೆ ಪುನರಾರಂಭಗೊಂಡಿದೆ ಎಂದು ಬಿಬಿಎಂಪಿ ಎಂಜಿನಿಯರ್‌ಗಳು ಹೇಳಿಕೊಂಡರೂ, ಇದು ಪೂರ್ಣಗೊಳ್ಳಲು ಇನ್ನೂ ಕನಿಷ್ಠ ಎರಡು ವರ್ಷಗಳು ಬೇಕಾಗಬಹುದು ಎಂದು ಅವರು ತಿಳಿಸಿದ್ದಾರೆ ಈ ಯೋಜನೆಗೆ 2017 ರಲ್ಲಿ ಶ್ರೀ ಆದಿಚುಂಚನಗಿರಿ ಮಠದ ಶ್ರೀ ನಿರ್ಮಲಾನಂದನಾಥ ಸ್ವಾಮಿಗಳು ಅಡಿಪಾಯ ಹಾಕಿದರು. ಇದನ್ನು 2021 ರಲ್ಲಿ ಕೆಂಪೇಗೌಡರ 511 ನೇ ಜನ್ಮದಿನದ ಸಂದರ್ಭದಲ್ಲಿ ಆಗಿನ ಮುಖ್ಯಮಂತ್ರಿ ಬಿಎಸ್ ಯಡಿಯೂರಪ್ಪ ಅವರು ಮರುಪ್ರಾರಂಭಿಸಿದರು.**

ಈ ಪೈಕಿ, ಡಾ.ಬಿ.ಆರ್.ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್ ಕಾಮಗಾರಿ ಕಳೆದ ವರ್ಷವೇ ಆರಂಭವಾಗಿದೆ. ಈಶಾನ್ಯ ರಾಜ್ಯಗಳ ವಿದ್ಯಾರ್ಥಿನಿಯರ ವಸತಿನಿಲಯ ಕಟ್ಟಡಮಾ.6ರಂದು ಉದ್ಘಾಟನೆಗೊಂಡಿದೆ.

ಆದರೆ, ಕೆಂಪೇಗೌಡ ಅಧ್ಯಯನ ಮತ್ತು ಸಂಶೋಧನ ಕೇಂದ್ರದ ಕಾಮಗಾರಿಯನ್ನು ಇದುವರೆಗೂ ಆರಂಭಿಸದಿರುವ ಬಗ್ಗೆ ಅಸಮಾಧಾನ ವ್ಯಕ್ತವಾಗಿದೆ. ವಿಶ್ವವಿದ್ಯಾನಿಲಯದ ಆವರಣದಲ್ಲಿ ಗೋಡೆಗಳು ಒಡೆದು ಹೋಗಿರುವುದರಿಂದ ಕ್ಯಾಂಪಸ್‌ನಲ್ಲಿ ಭದ್ರತೆಯ ಕೊರತೆ ಎದುರಾಗಿದೆ ಶ್ರೀಗಂಧದ ಮರ ಕಳ್ಳತನದ ಹಾಟ್ ಸ್ಪಾಟ್ ಆಗಿ ಮಾರ್ಪಟ್ಟಿದೆ ಎಂದು ವಿಶ್ವವಿದ್ಯಾಲಯದ ಅರ್ಥಶಾಸ್ತ್ರ ವಿಭಾಗದ ಹಿರಿಯ ಅಧಿಕಾರಿಯೊಬ್ಬರು TNIEಗೆ ತಿಳಿಸಿದ್ದಾರೆ.

ಅಧ್ಯಯನ ಕೇಂದ್ರವು ಬೆಂಗಳೂರಿಗೆ ಕೆಂಪೇಗೌಡರ ಕೊಡುಗೆಗಳನ್ನು ಗೌರವಿಸುವ ಉದ್ದೇಶವನ್ನು ಹೊಂದಿದ್ದು ಅವರ ದೃಷ್ಟಿ ಮತ್ತು ಸಾಧನೆಗಳನ್ನು ತಿಳಿಸುವ ಅಗತ್ಯವಿದೆ.

ಆದರೆ ಸರ್ಕಾರದ ದಿವ್ಯ ನಿರ್ಲಕ್ಷ್ಯದಿಂದ ಯಾವುದು ಸಾಧ್ಯವಾಗುತ್ತಿಲ್ಲ ಎಂದು ಅರ್ಥಶಾಸ್ತ್ರ ವಿಭಾಗದ ಹಿರಿಯ ಅಧಿಕಾರಿಯೊಬ್ಬರು ವಿಷಾಧ ವ್ಯಕ್ತ ಪಡಿಸಿದ್ದಾರೆ.

## ಚಂಡಮಾರುತ ಡಿ.13 ರಿಂದ ರಾಜ್ಯಾದ್ಯಂತ ಭಾರಿ ಮಳೆ ಮುನ್ಸೂಚನೆ



ಉದಯವಾಹಿನಿ ಚಿತ್ರ

• ಉದಯವಾಹಿನಿ, ಬೆಂಗಳೂರು

ರೈತ ಬೆಳೆದಂತಹ ಬೆಳೆ ಕೈಗೆ ಸಿಗುವ ಹೊತ್ತಲ್ಲಿ ಮಳೆರಾಯ ಹಲವು ಕಡೆಅಬ್ಬರಿಸುತ್ತಿದ್ದಾನೆ. ಇದೀಗ ಡಿ.13 ರಿಂದ ರಾಜ್ಯದಲ್ಲಿ ಮತ್ತೆ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ಬಂಗಾಳ ಕೊಲ್ಲಿಯಲ್ಲಿ ವಾಯುಭಾರ ಕುಸಿತ ಉಂಟಾಗುವ ಸಾಧ್ಯತೆ ಇದ್ದು, ಡಿ. 13 ರಿಂದ ರಾಜ್ಯದ 18 ಕ್ಕೂ ಜಿಲ್ಲೆಗಳಲ್ಲಿ ಭಾರಿ ಮಳೆಯಾಗುವ ಸಂಭವವಿದೆ. #Sach Mein TooMuch ಮತ್ತೊಂದು ಚಂಡಮಾರುತ ಅಪ್ಪಳಿಸಲಿದ್ದು, ಇದರ ಪ್ರಭಾವದಿಂದ ದಕ್ಷಿಣ ಒಳನಾಡಿನ ಬಹುತೇಕ ಎಲ್ಲಾ ಜಿಲ್ಲೆಗಳು, ಕರಾವಳಿ ಭಾಗದ ಜಿಲ್ಲೆಗಳಲ್ಲಿ ಡಿ.13 ರಿಂದ 18 ರವರೆಗೆ ಮಳೆಯಾಗುವ ಸಂಭವವಿದೆ. 2ನೇ ವಾಯುಭಾರ ಕುಸಿತ ಡಿಸೆಂಬರ್ 16ರ ನಂತರ ರೂಪುಗೊಳ್ಳಲಿದ್ದು, ರಾಜ್ಯದಲ್ಲಿ ಡಿ 17, 18ರ ವೇಳೆಗೆ ಮಳೆಯಾಗುವ ಸಂಭವ ಇದೆ. ಭಾರಿ ಮಳೆ ಹಿನ್ನೆಲೆ ಬೆಂಗಳೂರು, ದಕ್ಷಿಣ ಕನ್ನಡ, ಉಡುಪಿ, ಬೆಂಗಳೂರು ಗ್ರಾಮಾಂತರ, ಬೆಂಗಳೂರು ನಗರ, ಚಾಮರಾಜನಗರ, ಚಿಕ್ಕಬಳ್ಳಾಪುರ, ತುಮಕೂರು, ಚಿಕ್ಕಮಗಳೂರು, ಚಿತ್ರದುರ್ಗ, ಹಾಸನ, ಕೊಡಗು, ಮಂಡ್ಯ, ಮೈಸೂರು, ರಾಮನಗರ, ಜಿಲ್ಲೆಗಳಲ್ಲಿ ಭಾರಿ ಮಳೆಯಾಗಲಿದ್ದು ಯೆಲ್ಲೋ ಅಲರ್ಟ್ ಘೋಷಿಸಲಾಗಿದೆ.

## ಗ್ರಾಹಕನಿಗೆ ಕೈಪಿಡಿ ಒದಗಿಸದ ಫೋನ್ ಕಂಪನಿಗೆ ದಂಡ ವಿಧಿಸಿದ ಗ್ರಾಹಕ ನ್ಯಾಯಾಲಯ

• ಉದಯವಾಹಿನಿ, ಬೆಂಗಳೂರು

ಹೊಸ ಮೊಬೈಲ್ ಫೋನ್ ನೊಂದಿಗೆ ಕೈಪಿಡಿಯನ್ನು ನೀಡಿದ್ದಕ್ಕಾಗಿ ಬೆಂಗಳೂರು ನಿವಾಸಿಗೆ ವ್ಯಾಜ್ಯ ವೆಚ್ಚಕ್ಕಾಗಿ ರೂ. 1,000 ದೊಂದಿಗೆ ರೂ.5,000 ಪರಿಹಾರವನ್ನು ನೀಡುವಂತೆ ಎಲೆಕ್ಟ್ರಾನಿಕ್ಸ್ ದೈತ್ಯ ಇಂಡಿಯಾ ಟೆಕ್ನಾಲಜಿ ಪ್ರೈವೇಟ್ ಲಿಮಿಟೆಡ್ ಗೆ ಗ್ರಾಹಕ ನ್ಯಾಯಾಲಯ ಆದೇಶಿಸಿದೆ.ಕಂಪನಿಯನ್ನು ನಿರ್ಲಕ್ಷ್ಯ, ಉದಾಸೀನತೆಯ ಕ್ರಮವಾಗಿದೆ ಎಂದು ಬೆಂಗಳೂರಿನ 1ನೇ ಹೆಚ್ಚುವರಿ ಜಿಲ್ಲಾ ಗ್ರಾಹಕ ವ್ಯಾಜ್ಯಗಳ ಪರಿಹಾರ ಆಯೋಗ ಹೇಳಿರು ವುದಾಗಿ ಟೈಮ್ಸ್ ಆಫ್ ಇಂಡಿಯಾ ವರದಿ ಮಾಡಿದೆ. ಮೊಬೈಲ್ ಫೋನ್ ಅನ್ನು ಖರೀದಿಸಿದ ಸಂಜಯ್ ನಗರದ ನಿವಾಸಿ ಎಸ್ ಎಂ ರಮೇಶ್ ಅವರ ಪ್ರಕರಣ ಇದಾಗಿದೆ. ಅವರಿಗೆ ಬಳಕೆದಾರರ ಕೈಪಿಡಿಯನ್ನು ನೀಡಿಲ್ಲ. ಇದರಿಂದಾಗಿ ಅವರಿಗೆ ಫೋನ್‌ನ ವೈಶಿಷ್ಟ್ಯಗಳು, ಗ್ಯಾರಂಟಿ ವಿವರ, ಕಂಪನಿಯ ವಿಳಾಸ ಮತ್ತಿತರ ಮಾಹಿತಿ ಸಿಗದಂತಾಗಿದೆ. 1. ರಾಜಕೀಯ ಗ್ರಾಹಕನ ಪುನರಾವರ್ತಿತ ದೂರುಗಳ ಹೊರತಾಗಿಯೂ, ಯಾವುದೇ ರೀತಿಯ ಪ್ರತಿಕ್ರಿಯೆ ನೀಡಿಲ್ಲ. ಅಂತಿಮವಾಗಿ ಏಪ್ರಿಲ್ 2024 ರಲ್ಲಿ ಖರೀದಿಯ ನಾಲ್ಕು ತಿಂಗಳ ನಂತರ ಕೈಪಿಡಿ ತಲುಪಿದೆ. ಇದರಿಂದ ತೃಪ್ತರಾಗದ ಗ್ರಾಹಕ ಜೂನ್ 3ರಂದು 'ಸೇವೆಯಲ್ಲಿ ಲೋಪವಿದೆ' ಎಂದು ಆರೋಪಿಸಿ ಕಾನೂನು ದೂರು ದಾಖಲಿಸಿದ್ದರು.ವಿಚಾರಣೆಗೆ ಹಾಜರಾಗಲು ವಿಫಲವಾಗಿದೆ. ಬಳಕೆದಾರರ ಕೈಪಿಡಿ ಇಲ್ಲದಿದ್ದರೆ ಗ್ರಾಹಕರು ತುಂಬಾ ಮಾನಸಿಕ ಸಂಕಟ ಹಾಗೂ ಅನಾನುಕೂಲ ಎದುರಿಸಬೇಕಾಗುತ್ತದೆ. ಅಗತ್ಯ ದಾಖಲೆಗಳನ್ನು ಒದಗಿಸುವ ಕರ್ತವ್ಯ ಕಂಪನಿಯದ್ದಾಗಿದೆ ಎಂಬುದನ್ನು ಪರಿಗಣಿಸಿದ ನ್ಯಾಯಾಲಯ, ಗ್ರಾಹಕನಿಗೆ ಮಾನಸಿಕ ಸಂಕಟಕ್ಕಾಗಿ ರೂ.5,000 ಹಾಗೂ ಕಾನೂನು ವೆಚ್ಚಕ್ಕಾಗಿ ರೂ.1,000 ಪರಿಹಾರ ನೀಡುವಂತೆ ನವೆಂಬರ್ 29 ರಂದು ನ್ಯಾಯಾಲಯ ನಿರ್ದೇಶಿಸಿರುವುದಾಗಿ ವರದಿ ಹೇಳಿದೆ.

## ಡಿಸೆಂಬರ್ 11ರಂದು ನಟ ದರ್ಶನ್‌ಗೆ ಸರ್ಜರಿ ಫಿಕ್ಸ್

• ಉದಯವಾಹಿನಿ, ಬೆಂಗಳೂರು



ಉದಯವಾಹಿನಿ ಚಿತ್ರ

**ಅಕ್ಟೋಬರ್ 24ರ ಸರ್ಟಿಫಿಕೇಟ್ ಸರ್ಜರಿ ಅಗತ್ಯ**

ರೇಣುಕಾಸ್ವಾಮಿ ಕೊಲೆ ಪ್ರಕರಣಕ್ಕೆ ಸಂಬಂಧಪಟ್ಟಂತೆ ಬೆನ್ನು ನೋವಿನ ಕಾರಣ ತಿಳಿಸಿ ಬಳ್ಳಾರಿ ಜೈಲಿನಿಂದ ಮಧ್ಯಂತರ ಜಾಮೀನು ಪಡೆದುಕೊಂಡ ನಟ ದರ್ಶನವರು ಬೆಂಗಳೂರಿನ ಬಿ ಜಿ ಎಸ್ ಆಸ್ಪತ್ರೆಗೆ ಸರ್ಜರಿ ಮಾಡಿಸಿಕೊಳ್ಳಲು ದಾಖಲಾಗಿದ್ದರು. ಆದರೆ ಆರು ವಾರಗಳ ಕಳೆದರೂ ಕೂಡ ನಟ ದರ್ಶನ್ ಇದುವರೆಗೂ ಸರ್ಜರಿಗೆ ಒಳಗಾಗಿಲ್ಲ.ಇದೀಗ ನಟ ದರ್ಶನ್ ಪರ ವಕೀಲ ಸಿವಿ ನಾಗೇಶ್ ಅವರು ಡಿಸೆಂಬರ್ 11 ರಂದು ನಟ ದರ್ಶನ್ ಅವರಿಗೆ ಸರ್ಜರಿ ಮಾಡಿಸಲಾಗುತ್ತದೆ ಎಂದು ಮಾಹಿತಿ ನೀಡಿದರು. ಹೈಕೋರ್ಟ್‌ನಲ್ಲಿ ನಟ ದರ್ಶನ್ ಅವರ ಜಾಮೀನು ಅರ್ಜಿ ವಿಚಾರಣೆ ನಡೆಯಿತು. ಈ ವೇಳೆ ಸರ್ಕಾರದ ಪರ ಎಸ್ಪಿಪಿ ಪ್ರಸನ್ನ ಕುಮಾರ್ ಅವರ ಸುದೀರ್ಘವಾಗಿ ವಾದ ಮಂಡಿಸಿದರು. ಪ್ರಸನ್ನಕುಮಾರ್ ವಾದ ಅಂತ್ಯವಾದ ಬಳಿಕ ದರ್ಶನ್ ಪರ ಹಿರಿಯ ವಕೀಲ ಸಿವಿ ನಾಗೇಶ್ ವಾದ ಮಂಡಿಸಿದ್ದು, ದರ್ಶನ್ ನಡವಳಿಕೆ ಪರಿಗಣಿಸಬೇಕು ಎಂದು ಎಸ್ ಪಿ ಪಿ ವಾದಿಸಿದ್ದಾರೆ. ಸರ್ಜರಿಗಾಗಿ ಮಧ್ಯಂತರ ಜಾಮೀನು ಪಡೆದು ಮಾಡಿಸಿಲ್ಲವೆಂದು ವಾದಿಸಿದ್ದಾರೆ.

ವೈದ್ಯರು 5 ಸರ್ಟಿಫಿಕೇಟ್ಗಳನ್ನು ನೀಡಿದ್ದಾರೆ. ಅಕ್ಟೋಬರ್ 24ರ ಸರ್ಟಿಫಿಕೇಟ್ ಸರ್ಜರಿ ಅಗತ್ಯವೆಂದು ಹೇಳಿದೆ. ಕಾಲು ಮರಗಟ್ಟುತ್ತದೆ ಎಂದು ಹೇಳಿದ್ದಾರೆ.

ಬಿಜಿಎಸ್ ವೈದ್ಯರ ಸರ್ಟಿಫಿಕೇಟ್‌ನಲ್ಲಿ ಬಳ್ಳಾರಿ ವೈದ್ಯರ ಸರ್ಟಿಫಿಕೇಟ್‌ಅನ್ನು ಖಚಿತಪಡಿಸಿದ್ದಾರೆ ಎಂದು ನಟ ದರ್ಶನ್ ಪರ ಹಿರಿಯ ವಕೀಲ ಸಿವಿ ನಾಗೇಶ್ ಅವರು ವಾದ ಮಂಡಿಸಿದರು.

ದರ್ಶನ್ ಮಧ್ಯಂತರ ಜಾಮೀನಿನ ಯಾವುದೇ ಶರತ್ತು ಉಲ್ಲಂಘಿಸಿಲ್ಲ. ಎಸ್ ಪಿ ಪಿ ಸರ್ಜರಿ ಮಾಡಿಸಿಲ್ಲವೆಂದು ಆರೋಪಿಸಿದ್ದಾರೆ. ನಾನು ವೈದಿಕೀಯ ವರದಿ ಆಧರಿಸಿಯೇ ವಾದ ಮಂಡಿಸಿದ್ದೆ. ನವೆಂಬರ್ 21ರಂದು ವೈದ್ಯರು ಮತ್ತೊಂದು ಸರ್ಟಿಫಿಕೇಟ್ ಕೊಟ್ಟಿದ್ದಾರೆ. ಸರ್ಜರಿಗಾಗಿ ಸಿದ್ಧಪಡಿಸಲಾಗುತ್ತಿದೆ ಎಂದು ವೈದ್ಯರು ವರದಿ ನೀಡಿದ್ದಾರೆ.

ನವೆಂಬರ್ 6 ರಂದು ಕೆಲ ಚಿಕಿತ್ಸೆಗಳನ್ನು ನೀಡಲಾಗಿದೆ. ಡಿಸೆಂಬರ್ 11ಕ್ಕೆ ಸರ್ಜರಿ ಮಾಡಲಾಗುತ್ತದೆ ಎಂದು ಸಿಬಿ ನಾಗೇಶ್ ಅವರು ನ್ಯಾಯಾಧೀಶರ ಗಮನಕ್ಕೆ ತಂದರು.

## ಪತ್ನಿ ಕೇಸ್ ಹಾಕಿದ್ದಕ್ಕೆ ಮನನೊಂದು ಪತಿ ಆತ್ಮಹತ್ಯೆಗೆ ಶರಣು

• ಉದಯವಾಹಿನಿ, ಬೆಂಗಳೂರು


ಪತ್ನಿಯೊಬ್ಬರು ಪತಿಯ ವಿರುದ್ಧ ಕೇಸ್ ಹಾಕಿದ ಕಾರಣಕ್ಕೆ ಮನನೊಂದು ವ್ಯಕ್ತಿಯೊಬ್ಬ ಆತ್ಮಹತ್ಯೆಗೆ ಶರಣಾಗಿರುವಂತ ಘಟನೆ ಮಾರತಹಳ್ಳಿಯಲ್ಲಿ ನಡೆದಿದೆ. ಬೆಂಗಳೂರಿನ ಮಾರತಹಳ್ಳಿಯ ನಿವಾಸಿಯಾಗಿದ್ದಂತ ಮಂಜುನಾಥ್ ಎಂಬುವರೇ ಆತ್ಮಹತ್ಯೆಗೆ ಶರಣಾದಂತ ವ್ಯಕ್ತಿಯಾಗಿದ್ದಾರೆ. ಆತ್ಮಹತ್ಯೆಗೂ ಮುನ್ನ 40 ಪುಟಗಳ ಡೆತ್ ನೋಟ್ ಕೂಡ ಬರೆದಿಟ್ಟಿದ್ದಾರೆ. ಅಲ್ಲದೇ ಮನೆಯ ಭಾಗಿಲು, ಬೀರುವಿಗೆಲ್ಲ ಏನು ಮಾಡಬೇಕು. ಏನು ಕೆಲಸ ಬಾಕಿ ಇದೆ ಎಂಬುದನ್ನು ಬರೆದು ಅಂಟಿಸಿದ್ದಾರೆ. ಇದಷ್ಟೇ ಅಲ್ಲದೇ ತಾನಿರುವಂತ ಎನ್ ಜಿ ಓ ಗ್ರೂಪಿಗೆ ತನ್ನ ಡೆತ್ ನೋಟ್ ಹಾಕಿರುವಂತ ಮಂಜುನಾಥ್, ತನ್ನ ಕುಟುಂಬಕ್ಕೆ ಸಹಾಯ ಮಾಡುವಂತೆ ಅದರಲ್ಲಿ ಕೋರಿದ್ದಾರೆ. ಮಂಜುನಾಥ್ ಆತ್ಮಹತ್ಯೆ ಮಾಡಿಕೊಂಡಿರುವಂತ ವಿಷಯ ತಿಳಿದು ಸ್ಥಳಕ್ಕೆ ಮಾರತಹಳ್ಳಿ ಠಾಣೆಯ ಪೊಲೀಸರು ಆಗಮಿಸಿ, ಮನೆಯ ಭಾಗಿಲು ಹೊಡೆದು ಪರಿಶೀಲಿಸಿ, ಪ್ರಕರಣ ದಾಖಲಿಸಿಕೊಂಡಿದ್ದಾರೆ.

## ಐಎಎಸ್ ಅಧಿಕಾರಿ ನೇತೃತ್ವದ ತಂಡದಿಂದ ಔಷಧ ಖರೀದಿಯ ತನಿಖೆ

• ಉದಯವಾಹಿನಿ, ಬೆಂಗಳೂರು

ಬಳ್ಳಾರಿಯ ಬಿಮ್ಸ್‌ನಲ್ಲಿ ಇತ್ತೀಚೆಗೆ ಐವರು ಬಾಣಂತಿಯರು ಮೃತಪಟ್ಟ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರ ಐಎಎಸ್ ಅಧಿಕಾರಿ ನೇತೃತ್ವದಲ್ಲಿ ಪರಿಶೀಲನಾ ತಂಡವನ್ನು ರಚಿಸಿದೆ. ಈ ತಂಡವು ಕರ್ನಾಟಕ ರಾಜ್ಯ ವೈದ್ಯಕೀಯ ಸರಬರಾಜು ನಿಗಮ ನಿಯಮಿತ ಔಷಧ ಖರೀದಿಯಲ್ಲಿನ ಅಕ್ರಮಗಳ ಬಗ್ಗೆ ತನಿಖೆ ನಡೆಸುತ್ತದೆ ಮತ್ತು ಇಂತಹ ಘಟನೆಗಳು ಮರುಕಳಿಸದಂತೆ ತಡೆಯುತ್ತದೆ. ಇಂತಹ ಘಟನೆಗಳಲ್ಲಿ ತಂಡವು ಉಲ್ಲಂಘನೆಗಳನ್ನು ತನಿಖೆ ಮಾಡುತ್ತದೆ. ಈಗಿರುವ ವ್ಯವಸ್ಥೆಯಲ್ಲಿ ಅಗತ್ಯ ಸುಧಾರಣೆಗಳನ್ನು ತರಲು ಸಲಹೆ ನೀಡುತ್ತದೆ. ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಮತ್ತು ಅಭಿವೃದ್ಧಿ ಆಯುಕ್ತರ ಅಧ್ಯಕ್ಷತೆಯಲ್ಲಿ ಡಿಸೆಂಬರ್ 5 ರಂದು ನಡೆದ ಸಮಿತಿಯ ಸಭೆಯ ನಂತರ ಈ ಕ್ರಮ ಕೈಗೊಳ್ಳಲಾಗಿದೆ.

ಸಮಿತಿಯು ಟೆಂಡರ್ ಮೂಲಕ ಔಷಧಗಳ ಸಂಗ್ರಹಣೆಯಲ್ಲಿನ ಉಲ್ಲಂಘನೆಗಳನ್ನು ಪರಿಶೀಲಿಸಿದೆ. ಔಷಧ ಮಾದರಿಗಳನ್ನು ಎಂಪನೆಲ್ಡ್ ಪ್ರಯೋಗಾಲಯಗಳಿಗೆ ಸಲ್ಲಿಸಿತು. ಕೆಎಂಎಸ್‌ಸಿಎಲ್ ಅಧಿಕಾರಿಗಳ ಪಾತ್ರ ಮತ್ತು ಜವಾಬ್ದಾರಿಗಳನ್ನು ನಿಗದಿಪಡಿಸುವ ಬಗ್ಗೆಯೂ ಚರ್ಚಿಸಲಾಯಿತು.ಕರ್ನಾಟಕ ಕೌಶಲ ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕ ಎಂ ಕನಗವಲ್ಲಿ ಅವರ ನೇತೃತ್ವದಲ್ಲಿ ಪರಿಶೀಲನಾ ತಂಡವು ಕಾರ್ಯನಿರ್ವಹಿಸಲಿದ್ದು, ಸಹಾಯಕ ಔಷಧ ನಿಯಂತ್ರಕ ವೆಂಕಟೇಶ್, ಬೆಂಗಳೂರು ವೈದ್ಯಕೀಯ ಕಾಲೇಜಿನ ಮೈಕ್ರೋಬಯಾಲಜಿಸ್ಟ್ ಡಾ. ಅಸೀಮಾ ಬಾನು, ರಾಜೀವ್ ಗಾಂಧಿ ವಿಶ್ವವಿದ್ಯಾಲಯದ ಉಪಕುಲಪತಿಗಳು ನಾಮನಿರ್ದೇಶನಗೊಂಡ ಔಷಧಶಾಸ್ತ್ರದ ಹಿರಿಯ ಪ್ರಾಧ್ಯಾಪಕ ಡಾ. ಆರೋಗ್ಯ ವಿಜ್ಞಾನ ತಂಡದಲ್ಲಿರುತ್ತಾರೆ.



ಉದಯವಾಹಿನಿ ಚಿತ್ರ

ಐದು ದಿನಗಳಲ್ಲಿ ವಿವರವಾದ ವರದಿಯನ್ನು ಸಲ್ಲಿಸುವುದು, ಸಂಗ್ರಹಣೆ ಮತ್ತು ಪರೀಕ್ಷಾ ಕಾರ್ಯವಿಧಾನಗಳಲ್ಲಿನ ಲೋಪಗಳನ್ನು ವಿವರಿಸುವುದು ಮತ್ತು ಸರಿಪಡಿಸುವ ಕ್ರಮಗಳನ್ನು ಶಿಫಾರಸು ಮಾಡುವ ಜವಾಬ್ದಾರಿಯನ್ನು ತಂಡಕ್ಕೆ ವಹಿಸಲಾಗಿದೆ.

196 ತಂಡಗಳ ಇಂಟ್ರಾವೆನಸ್ ಫ್ಲೂಯಿಡ್ ರಿಂಗರ್ಸ್ ಲ್ಯಾಕ್ಟೇಟ್‌ನ ಖರೀದಿ ಆದೇಶವನ್ನು ನೀಡುವುದರಿಂದ ಹಿಡಿದು ನ. 30, 2024 ರವರೆಗೆ ಸಂಪೂರ್ಣ ಪ್ರಕ್ರಿಯೆಯನ್ನು ವಿಶ್ಲೇಷಿಸುತ್ತದೆ. ಕೆಎಸ್‌ಎಂಎಸ್ ಸಿಎಲ್‌ನಲ್ಲಿ ಯಾವುದೇ ಕಾರ್ಯವಿಧಾನದ ಲೋಪದೋಷಗಳನ್ನು ತನಿಖೆ ಮಾಡುತ್ತಾರೆ ಮತ್ತು ವೈಫಲ್ಯಗಳಿಗೆ ಹೊಣೆಗಾರಿಕೆಯನ್ನು ಸರಿಪಡಿಸುತ್ತಾರೆ. ಸ್ಥಾಪಿತ ಪ್ರೋಟೋಕಾಲ್‌ಗಳ ಅನುಸರಣೆಯಲ್ಲಿ ಯಾವುದೇ ಅಂತರವನ್ನು ಗುರುತಿಸಲು ಪ್ರಯೋಗಾಲಯಗಳ ತಂಡ, ಔಷಧ ಮಾದರಿಗಳ ಪರೀಕ್ಷೆ ಮತ್ತು ಗುಣಮಟ್ಟದ ಪರೀಕ್ಷೆಗಳಲ್ಲಿ ವಿಫಲವಾದ ತಂಡಗಳ ನಿರ್ವಹಣೆಯ ಮೇಲೆ ತಂಡವು ನಿರ್ದಿಷ್ಟವಾಗಿ ಗಮನಹರಿಸುತ್ತದೆ.

> **ತಂಡವು ಕೆಎಸ್‌ಎಂಎಸ್‌ಸಿಎಲ್ ಸುಧಾರಿಸಬಹುದಾದ ಕ್ಷೇತ್ರಗಳನ್ನು ಗುರುತಿಸುವ ಸಲುವಾಗಿ ಔಷಧ ಸಂಗ್ರಹಣೆ, ಗುಣಮಟ್ಟ ಪರೀಕ್ಷೆ ಮತ್ತು ಪ್ರತಿಕೂಲ ಪರಿಣಾಮಗಳ ವರದಿಗೆ ಸಂಬಂಧಿಸಿದಂತೆ ತಮಿಳುನಾಡು ಮತ್ತು ರಾಜಸ್ಥಾನದಂತಹ ರಾಜ್ಯಗಳಲ್ಲಿ ಅನುಸರಿಸುವ ಕ್ರಮಗಳನ್ನು ಪರಿಶೀಲಿಸುತ್ತದೆ. ಭವಿಷ್ಯದಲ್ಲಿ ಸಾರ್ವಜನಿಕ ಆರೋಗ್ಯ ಸೌಲಭ್ಯಗಳಿಗಾಗಿ ಪರಿಣಾಮಕಾರಿ ಕಾರ್ಯವಿಧಾನಗಳನ್ನು ಸೂಚಿಸಲು ತಂಡವು ರಾಜೀವ್ ಗಾಂಧಿ ವಿಶ್ವ ವಿದ್ಯಾಲಯದ ಉಪಕುಲಪತಿ ಅಥವಾ ಗೊತ್ತುಪಡಿಸಿದ ಪ್ರತಿನಿಧಿಯಿಂದ ಮಾಹಿತಿ ಪಡೆಯುತ್ತದೆ.**

## ಪಿಡಿಒ ಪರೀಕ್ಷೆಯಲ್ಲಿ ಬ್ಲೂಟೂತ್ ಬಳಸಿದ್ದ ಅಭ್ಯರ್ಥಿಯ ವಿಚಾರಣೆ

• ಉದಯವಾಹಿನಿ, ಬೆಂಗಳೂರು

ಪಂಚಾಯತ್ ಅಭಿವೃದ್ಧಿ ಅಧಿಕಾರಿ (ಪಿಡಿಒ)ಹುದ್ದೆಗೆ ನಡೆಯುತ್ತಿದ್ದ ತುಮಕೂರಿನ ಪರೀಕ್ಷಾ ಕೇಂದ್ರ ವೊಂದರಲ್ಲಿ ಸಿಸಿಟಿವಿ ಕಣ್ಗಾವಲಿದ್ದರೂ ಬ್ಲೂಟೂತ್ ಬಳಸಿ ಪರೀಕ್ಷೆ ಬರೆಯುತ್ತಿದ್ದ ಅಭ್ಯರ್ಥಿಯನ್ನು ತುಮಕೂರಿನ ತಿಲಕ್ ಪಾರ್ಕ್‌ಠಾಣೆ ಪೊಲೀಸರು ವಶಕ್ಕೆ ಪಡೆದು ವಿಚಾರಣೆಗೊಳಪಡಿಸಿದ್ದಾರೆ.

ನಿನ್ನೆ ಪಿಡಿಒ ಹುದ್ದೆಗಾಗಿ ಪರೀಕ್ಷೆ ನಡೆಯುತ್ತಿತ್ತು. ತುಮಕೂರಿನ ನಗರದ ಲಾ ಕಾಲೇಜಿನ ಪರೀಕ್ಷೆ ಕೇಂದ್ರದಲ್ಲಿ ಬೆಂಗಳೂರಿನ ರಾಮಮೂರ್ತಿನಗರದ ನಿವಾಸಿಯಾದ ಅಭ್ಯರ್ಥಿ ಪರೀಕ್ಷೆಗೆ ಹಾಜರಾಗಿದ್ದಾನೆ.ಆ ವೇಳೆ ಪರೀಕ್ಷೆ ಕೇಂದ್ರದೊಳಗೆ ಎಲ್ಲರ ಕಣ್ತಪ್ಪಿಸಿ ಬ್ಲೂಟೂತ್ ತೆಗೆದುಕೊಂಡು ಹೋಗಿದ್ದಾನೆ. ಅಭ್ಯರ್ಥಿಯ ಚಲನ ವಲನ ಗಮನಿಸಿದ ಕೊಠಡಿಯ ಮೇಲ್ವಿಚಾರಕರು ಪರಿಶೀಲನೆ ನಡೆಸಿದಾಗ ಬನಿಯನ್ ಒಳಗೆ ಬ್ಲೂಟೂತ್ ಕಂಡು ಬಂದಿದೆ.ತಕ್ಷಣ ಈ ವಿಷಯವನ್ನು ಮೇಲ್ವಿಚಾರಕರು ಕಾಲೇಜು ಪ್ರಾಂಶುಪಾಲರಿಗೆ ತಿಳಿಸಿದ್ದಾರೆ. ಈ ಬಗ್ಗೆ ತಿಲಕ್ ಪಾರ್ಕ್ ಪೊಲೀಸರಿಗೆ ಪ್ರಾಂಶುಪಾಲರಿಗೆ ವಿಷಯ ತಿಳಿಸಿದ್ದು, ಪೊಲೀಸರು ಸ್ಥಳಕ್ಕೆ ಬಂದು ಆ ಅಭ್ಯರ್ಥಿಯನ್ನ ವಶಕ್ಕೆ ಪಡೆದು ಠಾಣೆಗೆ ಕರೆದೊಯ್ದು ಪ್ರಕರಣ ದಾಖಲಿಸಿಕೊಂಡು ವಿಚಾರಣೆಗೆ ಒಳಪಡಿಸಿಕೊಂಡಿದ್ದಾರೆ.ಆರೋಪಿ ಅಭ್ಯರ್ಥಿ ಬ್ಲೂಟೂತ್ ಬಳಸಿ ಪ್ರಶ್ನೆಗಳಿಗೆ ಉತ್ತರಿಸಿ ದ್ದಾನೆಯೇ ಎಂಬುದನ್ನು ತಜ್ಞರನ್ನು ಕರೆಸಿ ತನಿಖೆ ನಡೆಸುತ್ತಿದ್ದಾರೆ.

## ಪ್ರೌಢಶಾಲಾ ಸಹ ಶಿಕ್ಷಕರಿಗೆ ಸರ್ಕಾರದಿಂದ ಶೀಘ್ರವೇ ಮುಂಬಡ್ತಿ ಭಾಗ್ಯ

• ಉದಯವಾಹಿನಿ, ಬೆಂಗಳೂರು

ರಾಜ್ಯದ ಪ್ರೌಢಶಾಲಾ ಸಹ ಶಿಕ್ಷಕರಿಗೆ ಗುಡ್ ನ್ಯೂಸ್ ಎಂಬಂತೆ ಸರ್ಕಾರ ಶೀಘ್ರವೇ ಬಡ್ತಿ ಭಾಗ್ಯ ಕರುಣಿಸಲಿದೆ. ಪ್ರೌಢಶಾಲಾ ಸಹ ಶಿಕ್ಷಕರಿಗೆ ಭಡ್ತಿ ನೀಡುವ ಪ್ರಕ್ರಿಯೆ ಮುಂದಿನ ವರ್ಷದ ಫೆಬ್ರವರಿ ಅಂತ್ಯದೊಳಗೆ ಪೂರ್ಣಗೊಳಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ಸಚಿವ ಎಸ್ ಮಧುಬಂಗಾರಪ್ಪ ಹೇಳಿದ್ದಾರೆ. ಪದೋನ್ನತಿ ಪ್ರಕ್ರಿಯೆ ನಡೆಸುವ ಹಿನ್ನೆಲೆಯಲ್ಲಿ ರಾಜ್ಯಮಟ್ಟದಲ್ಲಿ ಒಂದೇ ಜೇಷ್ಠತಾ ಪಟ್ಟಿಯನ್ನು ತಯಾರಿಸುವ ಬಗ್ಗೆ ಮಾರ್ಗದರ್ಶನ ಕೋರಿ 2024ರ ಫೆಬ್ರವರಿ ಮಾಹೆ ಮತ್ತು ಮಾರ್ಚ್ ಮಾಹೆಯಲ್ಲಿ ಶಾಲಾ ಶಿಕ್ಷಣ ಇಲಾಖೆಯ ಆಯುಕ್ತರು ಹಾಗೂ ಏಪ್ರಿಲ್ ಮಾಹೆಯಲ್ಲಿ ಶಾಲಾ ಶಿಕ್ಷಣ ಇಲಾಖೆಯ ನಿರ್ದೇಶಕರು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದಾರೆ ಎಂದರು.



ಉದಯವಾಹಿನಿ ಚಿತ್ರ

ಶಿಕ್ಷಣ ಇಲಾಖೆಯ ನಾಲ್ಕು ವಿಭಾಗಗಳಲ್ಲಿ ಸ್ನಾತಕೋತ್ತರ ಪದವಿ ಪಡೆದ ಅರ್ಹ ಸಹ ಶಿಕ್ಷಕರ ಜೇಷ್ಠತಾ ಪಟ್ಟಿಯನ್ನು ಪರಿಶೀಲಿಸಿ ಸಾಮಾನ್ಯ ಜೇಷ್ಠತಾ ಪಟ್ಟಿಯನ್ನು ಅಂತಿಮಗೊಳಿಸಲಾಗುತ್ತದೆ. ಅಂತಿಮ ರಾಜ್ಯಮಟ್ಟದ ಒಂದೇ ಜೇಷ್ಠತಾ ಪಟ್ಟಿಯನ್ನು ತಯಾರಿಸಲು ಕರ್ನಾಟಕ ಸರ್ಕಾರಿ ನೌಕರರ ನಿಯಮಗಳು 1957ರ ನಿಯಮ 7–ಎರ ನಿಯಮದನ್ವಯ ಪರಿಶೀಲಿಸಿ ಅಗತ್ಯ ಕ್ರಮವಹಿಸಲು 2024ರ ಅಕ್ಟೋಬರ್ ಮಾಹೆಯಲ್ಲಿ ಪತ್ರ ಬರೆಯಲಾಗಿದೆ.

ಈ ಸಂಬಂಧ ಕ್ರಮ ಕೈಗೊಳ್ಳಲು ಬೆಂಗಳೂರಿನ ಶಾಲಾ ಶಿಕ್ಷಣ ಇಲಾಖೆಯ ಆಯುಕ್ತರಿಗೆ, ಶಾಲಾ ಶಿಕ್ಷಣ ಇಲಾಖೆಯ ನಿರ್ದೇಶಕರಿಗೆ ನಿರ್ದೇಶನ ನೀಡಲಾಗಿದ್ದು, ಇದರನ್ವಯ ಪದೋನ್ನತಿ ಪ್ರಕ್ರಿಯೆಯನ್ನು ಬೇಗ ನಿಯಮಾನುಸಾರ ನಡೆಸಲು ಕ್ರಮ ವಹಿಸಲಾಗುವುದು ಎಂದಿದ್ದಾರೆ.

## ಬೆಂಗಳೂರಿನಲ್ಲಿ ಕುತ್ತಿಗೆಗೆ ಚುಚ್ಚಿ ಭೀಕರ ಹತ್ಯೆ

• ಉದಯವಾಹಿನಿ, ಬೆಂಗಳೂರು

ನಗರದಲ್ಲಿ ತಡರಾತ್ರಿ ಸೆಕ್ಯುರಿಟಿ ಸೇರಿದಂತೆ ಇಬ್ಬರನ್ನು ಬರ್ಬರವಾಗಿ ಕೊಲೆ ಮಾಡಿರುವ ಘಟನೆಯಿಂದ ಸಿಲಿಕಾನ್ ಸಿಟಿ ಜನತೆ ಬೆಚ್ಚಿಬಿದ್ದಿದ್ದಾರೆ. ನೇಪಾಳ ಮೂಲದ ಸೆಕ್ಯುರಿಟಿ ಗಾರ್ಡ್ ಬಿಕ್ರಂ (21) ಮತ್ತು ಬಿಹಾರ ಮೂಲದ ಚಾಲಕ ಚೋಟು ತೂರಿ (33) ಕೊಲೆಯಾದವರು.

ಯಲಹಂಕ ನ್ಯೂಟೌನ್ ಪೊಲೀಸ್ ಠಾಣಾ ವ್ಯಾಪ್ತಿಯ ಕೈಗಾರಿಕಾ ಪ್ರದೇಶದ 4ನೇ ಹಂತದಲ್ಲಿರುವ ವೆಂಕಟೇಶ್ವರ ಟೆಕ್ಸ್ ಟೈಲ್ಸ್ ಸಮೀಪದಲ್ಲಿನ ಕಾರ್ಖಾನೆಯೊಂದು ಸ್ಥಗಿತಗೊಂಡಿದ್ದು, ಇಲ್ಲಿ ಬಿಕ್ರಂ ಸೆಕ್ಯುರಿಟಿ ಗಾರ್ಡ್ ಕೆಲಸ ಮಾಡುತ್ತಿದ್ದನು.

ವೆಂಕಟೇಶ್ವರ ಟೆಕ್ಸ್‌ಟೈಲ್ನಲ್ಲಿ ಚೋಟು ತೂರಿ ವಾಹನ ಚಾಲಕ ವೃತ್ತಿ ಮಾಡಿಕೊಂಡಿದ್ದನು. ವೆಂಕಟೇಶ್ವರ ಟೈಕ್ಸ್ ಟೈಲ್ ಸಮೀಪದ ಟೆಂಟ್ನಲ್ಲಿ ರಾತ್ರಿ ಇವರಿಬ್ಬರು ಹಾಗೂ ಮೂರ್ನಾಲ್ಕು ಮಂದಿ ಸ್ನೇಹಿತ ರೊಂದಿಗೆ ಮದ್ಯದ ಪಾರ್ಟಿ ಮಾಡಿದ್ದಾರೆ. ಆ ವೇಳೆ ಇವರುಗಳ ನಡುವೆಯೇ ಯಾವುದೋ ವಿಚಾರವಾಗಿ ಗಲಾಟೆಯಾಗಿದೆ. ಆ ಸಂದರ್ಭದಲ್ಲಿ ಜಗಳ ವಿಕೋಪಕ್ಕೆ ತಿರುಗಿ ಟೈಲ್ಸ್ ಚೂರಿನಿಂದ ಬಿಕ್ರಂ ಮತ್ತು ಚೋಟು ತೂರಿ ಅವರುಗಳ ಕುತ್ತಿಗೆಗೆ ಚುಚ್ಚಿ ನಂತರ ಟೈಲ್ಸ್ ನಿಂದ ತಲೆಗೆ ಹೊಡೆದು ಭೀಕರವಾಗಿ ಕೊಲೆ ಮಾಡಿ ಆರೋಪಿಗಳು ಪರಾರಿಯಾಗಿದ್ದಾರೆ. ಬೆಳಗ್ಗೆ ಸ್ಥಳೀಯರು ಇಬ್ಬರು ಕೊಲೆಯಾಗಿರುವುದನ್ನು ಗಮನಿಸಿ ತಕ್ಷಣ ಪೊಲೀಸರಿಗೆ ತಿಳಿಸಿದ್ದಾರೆ. ಸುದ್ದಿ ತಿಳಿದು ಯಲಹಂಕ ನ್ಯೂಟೌನ್ ಠಾಣೆ ಪೊಲೀಸರು ಸ್ಥಳಕ್ಕೆ ಆಗಮಿಸಿ ಪರಿಶೀಲನೆ ನಡೆಸಿ ಪ್ರಕರಣ ದಾಖಲಿಸಿಕೊಂಡು ಇಬ್ಬರ ಮೃತ ದೇಹಗಳನ್ನು ಆಸ್ಪತ್ರೆಗೆ ರವಾನಿಸಿದ್ದಾರೆ. ಆರೋಪಿಗಳ ಪತ್ತೆಗಾಗಿ ಘಟನಾ ಸ್ಥಳದ ಸುತ್ತಮುತ್ತಲಿನ ರಸ್ತೆಗಳಲ್ಲಿರುವ ಸಿಸಿ ಕ್ಯಾಮೆರಾಗಳನ್ನು ಯಲಹಂಕ ನ್ಯೂಟೌನ್ ಠಾಣೆ ಪೊಲೀಸರು ಪರಿಶೀಲಿಸುತ್ತಿದ್ದಾರೆ.

## ಬೆಂಗಳೂರಿನ ಗತವೈಭವದ ಸ್ಥಳಗಳಲ್ಲಿ ವಿವಿಧ ಸಾಂಸ್ಕೃತಿಕ ಚಟುವಟಿಕೆಗಳ ಕಲರವ

• ಉದಯವಾಹಿನಿ, ಬೆಂಗಳೂರು

ಅನ್‌ಬಾಕ್ಸಿಂಗ್ ಬಿಎಲ್‌ಆರ್, ಸರ್ಕಾರದ ಸಹಭಾಗಿತ್ವದಲ್ಲಿ ನಡೆಸುತ್ತಿರುವ ಬೆಂಗಳೂರು ಹಬ್ಬಗೆ ಅತ್ಯುತ್ತಮ ಪ್ರತಿಕ್ರಿಯ ವ್ಯಕ್ತವಾಗುತ್ತಿದ್ದು, ಡಿಸೆಂಬರ್ 15ರವರೆಗೆ ಬೆಂಗಳೂರಿನಾದ್ಯಂತ ಮುಂದುವರೆಯುತ್ತಿದೆ. ನಗರದ ಪರಂಪರೆ, ಸಾಂಸ್ಕೃತಿಕ ವೈಭವ, ನಾಡು–ನುಡಿ, ಸಾಹಿತ್ಯ, ಸಂಗೀತದ ಕಲೆಯನ್ನು ಪ್ರದರ್ಶನಗೊಳ್ಳುವ 500 ಕ್ಕೂ ಅಧಿಕ ಕಾರ್ಯಕ್ರಮಗಳು ಜರುಗುತ್ತಿವೆ. ಈ ಬಾರಿ ಪ್ರಮುಖವಾಗಿ ಫ್ರೀಡಂ ಪಾರ್ಕ್, ಪಂಚವಟಿ, ಬೆಂಗಳೂರು ಅಂತಾರಾಷ್ಟ್ರೀಯ ಕೇಂದ್ರ, ನ್ಯಾಷನಲ್ ಗ್ಯಾಲರಿ ಆಫ್ ಮಾಡರ್ನ್ ಆರ್ಟ್ ನಂತಹ ಪ್ರಮುಖ ಸ್ಥಳಗಳಲ್ಲಿ ನಡೆಯುತ್ತಿರುವುದು ವಿಶೇಷ. ಫ್ರೀಡಂ ಪಾರ್ಕ್: ಒಂದು ಕಾಲದಲ್ಲಿ ಸೆಂಟ್ರಲ್ ಜೈಲಾಗಿದ್ದ ಈ ಸ್ಥಳವು, ಕ್ರಮೇಣ ಆಸಕ್ತಿದಾಯಕ ಕ್ರಿಯಾಶೀಲತೆಯ ಮೈದಾನವಾಗಿ ಹೊರಹೊಮ್ಮಿದ್ದು, ಕಲಾತ್ಮಕ ಪ್ರದರ್ಶನಗಳೊಂದಿಗೆ ಸಾಂಸ್ಕೃತಿಕ ಅಭಿವ್ಯಕ್ತಿಯನ್ನು ವಿಲೀನಗೊಳಿಸುತ್ತಿದೆ. ಪಂಚವಟಿ: ನೊಬೆಲ್ ಪ್ರಶಸ್ತಿ ಪುರಸ್ಕೃತ ಸರ್.ಸಿ.ವಿ. ರಾಮನ್, ಇತಿಹಾಸ ಮತ್ತು ವೈಜ್ಞಾನಿಕ ಪರಂಪರೆಯಲ್ಲಿ ಮುಳುಗಿದೆ. ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರ ಬೌದ್ಧಿಕ ಪ್ರವಚನ, ಪ್ರದರ್ಶನಗಳು ಮತ್ತು ಪ್ರದರ್ಶನಗಳಿಗೆ ರೋಮಾಂಚಕ ಸ್ಥಳ.ನ್ಯಾಷನಲ್ ಗ್ಯಾಲರಿ ಆಫ್ ಮಾಡರ್ನ್ ಆರ್ಟ್ ನಗರದ ಪ್ರವರ್ಧಮಾನಕ್ಕೆ ಬರುತ್ತಿರುವ ಕಲಾ ದೃಶ್ಯ ಮತ್ತು ಸಾಂಸ್ಕೃತಿಕ ಪರಂಪರೆಗೆ ಸಾಕ್ಷಿಯಾಗಿದೆ. ಈ ವ್ಯವಹಾರ ಕರ್ನಾಟಕ T&C Apply ಡಿಸೆಂಬರ್ 15ರವರೆಗೆ ಬೆಂಗಳೂರು ಹಬ್ಬ ಮುಂದುವರೆಯಲಿದೆ.

# 266 ಅಪಾರ್ಟ್‌ಮೆಂಟ್ ಖರೀದಿದಾರರ ಭವಿಷ್ಯ ಅತಂತ್ರ

## ಹಣ ನೀಡಿ ಚಾತಕ ಪಕ್ಷಿಯಂತೆ ಫ್ಲಾಟ್‌ಗೆ ಕಾಯುತ್ತಿರುವ ಮನೆ ಖರೀದಿದಾರರು!

• ಉದಯವಾಹಿನಿ, ಬೆಂಗಳೂರು

ನಗರದ ಹರಳೂರು ಗ್ರಾಮದಲ್ಲಿರುವ ಐಷಾರಾಮಿ ವಸತಿ ಸಮುಚ್ಚಯದಲ್ಲಿ 266 ಅಪಾರ್ಟ್ ಮೆಂಟ್ ಖರೀದಿದಾರರ ಭವಿಷ್ಯ ಅತಂತ್ರವಾಗಿದೆ. ವರ್ತೂರು ಹೋಬಳಿಯ 'ಫ್ರಾಂಟಿಯರ್ ಹೈಟ್ಸ್'ಲ್ಲಿನ ಫ್ಲಾಟ್‌ಗಳಲ್ಲಿ ಹೂಡಿಕೆ ಮಾಡಿರುವ ಜನರು ಅತಂತ್ರ ಸ್ಥಿತಿಯಲ್ಲಿದ್ದಾರೆ. ಬಿಲ್ಡರ್ ಪ್ರಾಜೆಕ್ಟ್‌ನ್ನು ಪೂರ್ಣಗೊಳಿಸಿಲ್ಲ ಕಳೆದ ಒಂದು ವರ್ಷದ ಹಿಂದೆ ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರ ಹೊರಡಿಸಿದ ಆದೇಶಕ್ಕೆ ಬದ್ಧವಾಗಿಲ್ಲ. 120 ಕೋಟಿ ರೂಪಾಯಿಗಳ ಈ ಯೋಜನೆಯು 15 ಮಹಡಿಗಳನ್ನು (ಜೊತೆಗೆ ನೆಲಮಹಡಿ) ಐದು ಬ್ಲಾಕ್‌ಗಳನ್ನು ಹೊಂದಿದೆ. ಡೆವಲಪರ್, ಫ್ರಾಂಟಿಯರ್ ಶೆಲ್ಟರ್ಸ್ ಪ್ರೈವೇಟ್ ಲಿಮಿಟೆಡ್ ಕಚೇರಿ ಕೋರಮಂಗಲದಲ್ಲಿದೆ. ಅದೇ ಪ್ರದೇಶದಲ್ಲಿ ವಾಸವಾಗಿರುವ ಮಾಲೀಕ ಆನಂದರೆಡ್ಡಿ ಫೋನ್ ಕರೆ ಮಾಡಿದರೆ ಸಂಪರ್ಕಕ್ಕೆ ಸಿಗುತ್ತಿಲ್ಲ ಮನೆ ಖರೀದಿದಾರರು ಅವರ ನಿವಾಸದ ಹೊರಗೆ ಪದೇ ಪದೇ ಪ್ರತಿಭಟನೆ ನಡೆಸುತ್ತಾ ಅಸಹಾಯಕತೆ ತೋರಿಸುತ್ತಿದ್ದಾರೆ.

ಕೆ–ಆರ್‌ಇಆರ್‌ಎ, ಗ್ರಾಹಕ ನ್ಯಾಯಾಲಯ ಮತ್ತು ಸ್ಥಳೀಯ ಪೊಲೀಸ್ ಠಾಣೆಯಲ್ಲಿ ಪ್ರಕರಣಗಳನ್ನು ದಾಖಲಿಸಲಾಗಿದೆ ಆದರೆ ಸಮಸ್ಯೆಗೆ ಪರಿಹಾರದ ಭರವಸೆಯಿಲ್ಲ. ಹತಾಶ ಮಾಲೀಕರಲ್ಲಿ ಒಬ್ಬರಾದ ಹಿಮಿಕಾ ದಾಸ್ ಮತ್ತು ಅವರ ಪತಿ ಹಿಮಾಂಶು ಲಷ್ಕರ್, ನಾವು 3ಬಿಹೆಚ್ ಕೆ ಅಪಾರ್ಟ್‌ಮೆಂಟ್ ನ್ನು ಖರೀದಿಸಲು ಏಪ್ರಿಲ್ 2018 ರಲ್ಲಿ ಸುಮಾರು 1 ಕೋಟಿ ರೂಪಾಯಿಗಳ ಸಂಪೂರ್ಣ ಪಾವತಿಯನ್ನು ಮಾಡಿದ್ದೇವೆ, ಜೂನ್ 2019 ರೊಳಗೆ ಹಸ್ತಾಂತರಕ್ಕೆ ಭರವಸೆ ನೀಡಿದ್ದರು. ಆರಂಭದಲ್ಲಿ ಕೋವಿಡ್ ಮತ್ತು ಕಾರ್ಮಿಕರ ಕೊರತೆಯಿಂದ ಪ್ರಾಜೆಕ್ಟ್ ಪೂರ್ಣಗೊಳಿಸಲು ಆಗುತ್ತಿಲ್ಲ ಎಂದು ಕಾರಣಗಳನ್ನು ನೀಡುತ್ತಾ ತಳ್ಳುತ್ತಾ ಹೋದರು. ಈಗ 2024 ರ ಅಂತ್ಯವಾಗಿದೆ ಆದರೆ ಇನ್ನೂ ನಮಗೆ ಮನೆ ಸಿಕ್ಕಿಲ್ಲ ಎನ್ನುತ್ತಾರೆ. ಸದಾನಂದ ಭಟ್ ಎಂಬುವವರು 75 ಲಕ್ಷ ರೂಪಾಯಿ ಪಾವತಿಸಿ 3ಬಿಹೆಚ್ ಕೆ ಅಪಾರ್ಟ್ ಮೆಂಟ್ ಖರೀದಿಸಿದ್ದರು. 2017ರಲ್ಲಿ ಖರೀದಿಸಿದ್ದೆ. ಇಲ್ಲಿಯವರೆಗೆ, ನಾನು 69 ಲಕ್ಷದವರೆಗೆ ಪಾವತಿಸಿದ್ದೇನೆ.



ಉದಯವಾಹಿನಿ ಚಿತ್ರ

> **ಬಿಲ್ಡರ್ ತಮ್ಮ ಪೂರ್ವ ಇಎಂಐ ಬಡ್ಡಿ ಶುಲ್ಕವನ್ನು ಪಾವತಿಸುವುದಾಗಿ ಭರವಸೆ ನೀಡಿದ್ದರು. ಅವರನ್ನು ನಂಬಿ, ಅನೇಕರು ಸಬ್ ವೆನ್ಶನ್ ಯೋಜನೆಯಡಿ ಬ್ಯಾಂಕ್‌ನಿಂದ ಸಾಲ ಪಡೆದು ತಮ್ಮ ಮನೆಗಳಿಗೆ ನೀಡಿದ್ದಾರೆ. ಕೆಲವು ಸಮಯದವರೆಗೆ, ಬಿಲ್ಡರ್ ಬಡ್ಡಿಯನ್ನು ಪಾವತಿಸಿ ನಂತರ ನಿಲ್ಲಿಸಿದ್ದಾರೆ. ಈಗ ಯಾವುದೇ ಇಎಂಐ ಮೊತ್ತವನ್ನು ಪಾವತಿಸದೆ ಬಡ್ಡಿಯನ್ನು ಪಾವತಿಸುತ್ತಿದ್ದಾರೆ.**

ಆರಂಭದಲ್ಲಿ ಇದನ್ನು ಗೌಂಡ್–ಪ್ಲಸ್ –11 ರಚನೆಯಾಗಿ ಯೋಜಿಸಲಾಗಿತ್ತು, ನಂತರ ಅದನ್ನು 15 ಮಹಡಿಗಳಾಗಿ ಮಾಡಲು ಯೋಜನೆಯನ್ನು ಮಾರ್ಪಡಿಸಲಾಯಿತು, ಆದರೆ ಇದುವರೆಗೆ ಮನೆ ನನ್ನ ಕೈ ಸೇರಿಲ್ಲ, ಹಸ್ತಾಂತರದಲ್ಲಿ ಭಾರೀ ವಿಳಂಬದಿಂದಾಗಿ, 40 ಮಾಲೀಕರು ಪ್ರತ್ಯೇಕವಾಗಿ ಗ್ರಾಹಕ ನ್ಯಾಯಾಲಯದಲ್ಲಿ ಪ್ರಕರಣಗಳನ್ನು ದಾಖಲಿಸಿದ್ದಾರೆ ಎಂದು ಹೇಳಿದರು.

> **ಫ್ಲಾಟ್ ಖರೀದಿಸಲು ಸದಾನಂದ ಭಟ್ ಬ್ಯಾಂಕ್ ನಲ್ಲಿ ಸಾಲ ಮಾಡಿದ್ದರು. ನಾನು ನನ್ನ ಇಎಂಐಯನ್ನು ನಿಯಮಿತವಾಗಿ ಪಾವತಿಸುತ್ತಿದ್ದೇನೆ. ಇದಲ್ಲದೇ ನಾನು ಸದ್ಯ ವಾಸವಾಗಿರುವ ಮನೆಗೆ ಬಾಡಿಗೆ ನೀಡುತ್ತಿದ್ದೇನೆ. ಇದರಿಂದ ಭಾರಿ ಆರ್ಥಿಕ ಹೊರೆಯಾಗುತ್ತಿದೆ ಎಂದರು. ಇನ್ನೂ ಅನೇಕರ ಸ್ಥಿತಿ ಇನ್ನೂ ದುಸ್ತರವಾಗಿದೆ ಎಂದರು.**

ಯೋಜನೆಯನ್ನು ಸಾಮಾನ್ಯ ಗೃಹ ಸಾಲವಾಗಿ ಪರಿವರ್ತಿಸಲು ಬ್ಯಾಂಕುಗಳು ನಿರಾಕರಿಸುತ್ತವೆ ಎಂದು ಸಮಸ್ಯೆಯನ್ನು ತೋಡಿಕೊಂಡರು.

ಅಕ್ಟೋಬರ್ 1, 2019 ರಂದು ತಮಗೆ ಫ್ಲಾಟ್ ಸಿಗುತ್ತದೆ ಎಂದು ಭರವಸೆಯಿಂದ ಹಣ ನೀಡಿ ಸಮಸ್ಯೆಗೆ ಸಿಲುಕಿರುವ ಆಶಿಶ್ ಕುಮಾರ್ ಪಾಂಡೆ ಮತ್ತು ನೀತಿ ಮಿಶ್ರಾ ಅವರು ಸಲ್ಲಿಸಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಸೆಪ್ಟೆಂಬರ್ 15, 2023 ರಂದು ನೀಡಲಾದ ರೇರಾ ತೀರ್ಪಿನ ಪ್ರತಿ ನ್ಯೂ ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕೆಗೆ ಸಿಕ್ಕಿದೆ.

ನ್ಯಾಯಾಲಯವು 69.41 ಲಕ್ಷ ರೂಪಾಯಿಗಳನ್ನು ಬಡ್ಡಿಯಾಗಿ ಮೇ 21, 2023 ರವರೆಗಿನ ವಿಳಂಬದ ಅವಧಿಯ ಬಡ್ಡಿದರವೆಂದು ಪಾವತಿಸುವಂತೆ ಕೇಳಿಕೊಂಡಿದೆ. 60 ದಿನಗಳ ಒಳಗೆ ಪಾವತಿಸಿ ಹಸ್ತಾಂತರಿಸಲು ನಿರ್ದೇಶಿಸಿದರೂ ಬಿಲ್ಡರ್ ನಿರ್ಲಕ್ಷಿಸಿದ್ದಾರೆ. ಖರೀದಿದಾರರಿಗೆ ಸಂಪರ್ಕ ಬಿಂದುವಾಗಿದ್ದ ಫ್ರಾಂಟಿಯರ್ ಶೆಲ್ಟರ್ಸ್ ಮಾರ್ಕೆಟಿಂಗ್ ಮ್ಯಾನೇಜರ್ ಅರ್ನಾಬ್, ಜೊತೆ ಮಾತನಾಡಿ, ನನಗೂ ಕಂಪನಿಗೂ ಯಾವುದೇ ಸಂಬಂಧವಿಲ್ಲ ಎಂದರು. ಪದೇ ಪದೇ ಕರೆಗಳು ಮತ್ತು ಸಂದೇಶಗಳನ್ನು ಕಳುಹಿಸಿದರೂ ಪ್ರತಿಕ್ರಿಯೆಗೆ ಮಾಲೀಕ ಆನಂದರೆಡ್ಡಿ ಸಂಪರ್ಕಕ್ಕೆ ಬರಲಿಲ್ಲ.

# ಗೋಮಾಳ, ಅರಣ್ಯ ಭೂಮಿ ಮಂಜೂರು ಅಸಾಧ್ಯ: ಸಚಿವ

## ಪಟ್ಟಣದಲ್ಲಿ ಬಗರ್ ಹುಕುಂ ಸಾಗುವಳಿ ಚೀಟಿ ವಿತರಣೆ, ಪಹಣಿ ಪತ್ರಿಕೆ, ಪೋಡಿ ದಾಖಲೆ ಮತ್ತು ಕಂದಾಯ ಗ್ರಾಮಗಳ ಹಕ್ಕು ಪತ್ರ

• **ಉದಯವಾಹಿನಿ, ಗುಂಡ್ಲುಪೇಟೆ**

'ರಾಜ್ಯದಲ್ಲಿ ಲಕ್ಷಾಂತರ ಬಗರ್ ಹುಕುಂ ಫಲಾನುಭವಿಗಳು ಅರ್ಜಿ ಹಾಕಿದ್ದಾರೆ. ಎಲ್ಲರಿಗೂ ಕೊಡಲು ಆಗುವುದಿಲ್ಲ. 1.58 ಲಕ್ಷ ಅರ್ಜಿಗಳು ಅರಣ್ಯ ವ್ಯಾಪ್ತಿಯಲ್ಲಿ ಅರ್ಜಿ ಹಾಕಿದ್ದಾರೆ. ಜಿಲ್ಲೆಯಲ್ಲಿ 30 ವರ್ಷದ ಹಿಂದೆ ಕೊಟ್ಟಿರುವ ಸಾಗುವಳಿಯನ್ನೇ ಅರಣ್ಯ ಇಲಾಖೆ ಒಪ್ಪುತ್ತಿಲ್ಲ. ಇಂಥ ಜಮೀನು ಕೊಡಲು ಬರುವುದಿಲ್ಲ' ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ತಿಳಿಸಿದರು.

ಪಟ್ಟಣದಲ್ಲಿ ಬಗರ್ ಹುಕುಂ ಸಾಗುವಳಿ ಚೀಟಿ ವಿತರಣೆ, ಪಹಣಿ ಪತ್ರಿಕೆ, ಪೋಡಿ ದಾಖಲೆ ಮತ್ತು ಕಂದಾಯ ಗ್ರಾಮಗಳ ಹಕ್ಕು ಪತ್ರ ವಿತರಣಾ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು. ಕಂದಾಯ ಇಲಾಖೆ, ಜಿಲ್ಲಾಡಳಿತದಿಂದ ಹಮ್ಮಿಕೊಳ್ಳಲಾಗಿತ್ತು. 'ರೈತರು ಭೂಮಿಯನ್ನು ಮಾರಾಟ ಮಾಡದೆ, ಕೃಷಿ ಚಟುವಟಿಕೆಯಲ್ಲಿ ತೊಡಗಿ ಅಭಿವೃದ್ಧಿ ಹೊಂದಬೇಕು' ಎಂದು ತಿಳಿಸಿದರು. 'ಬಗರ್‌ಹುಕುಂ ಸಾಗುವಳಿಗಾಗಿ 57ರಡಿ ಅರ್ಜಿ ಹಾಕಿರುವ ರೈತರಿಗೆ ಜಮೀನು ಮಂಜೂರು ಮಾಡುವ ಪ್ರಕ್ರಿಯೆಗೆ ರಾಜ್ಯದಲ್ಲಿ ಚಾಲನೆ ನೀಡಲಾಗಿದೆ.


ಉದಯವಾಹಿನಿ ಚಿತ್ರ

ಜಿಲ್ಲೆಯಲ್ಲಿ ಚಾಲನೆ ಕೊಡಲಾಗಿದ್ದು, ಕನಿಷ್ಠ 4 ಮಂದಿ ರೈತರಿಗೆ ಸಾಗುವಳಿ ಚೀಟಿ ನೀಡಬೇಕು ಎಂಬುದು ನಮ್ಮ ಉದ್ದೇಶ' ಎಂದರು.

'30–40 ವರ್ಷದ ಹಿಂದೆ ರೈತರಿಗೆ ಬಗರ್ ಹುಕುಂ ಉಳುವವನೇ ಭೂಮಿಯ ಒಡೆಯ ಸೇರಿದಂತೆ ನಾನಾ ಯೋಜನೆಗಳಲ್ಲಿ ಜಮೀನು ಮಂಜೂರಾಗಿದ್ದರೂ ಇಂದಿಗೂ ದುರಸ್ತು (ಪೋಡಿ) ಆಗಿಲ್ಲ. ಇದರಿಂದ ರೈತರು ಬ್ಯಾಂಕ್ ಸಾಲ ಪಡೆಯಲು, ಮಾರಾಟ ಮಾಡಲು, ಸವಲತ್ತು ಪಡೆಯಲು ಕಷ್ಟವಾಗಿದೆ. ಜಮೀನಿನ ಪಹಣಿಯಲ್ಲಿ ಹೆಸರಿದ್ದು ಕೇವಲ ಉಳುಮೆ ಮಾಡಬಹುದು ಎಂಬಂತಾಗಿದೆ. 60ರ ದಶಕದಲ್ಲಿ ಮಂಜೂರಾಗಿದ್ದರೂ ಸರ್ಕಾರ ಕೆಲಸ ಪೂರೈಸಿಲ್ಲ. ರೈತರು ತ್ರಿಶಂಕು ಪರಿಸ್ಥಿತಿಯಲ್ಲಿದ್ದಾರೆ' ಎಂದು ಬೇಸರ ವ್ಯಕ್ತಪಡಿಸಿದರು. 'ಜಿಲ್ಲೆಯಲ್ಲಿ ಇಂತಹ 68 ವಸತಿ ಪ್ರದೇಶವಿದೆ. ಅದರಡಿ 50 ಗ್ರಾಮಗಳ ಹಕ್ಕು ಪತ್ರ ತಯಾರು ಮಾಡಲಾಗಿದೆ. ಇವರಿಗೆ ಮನೆಗೆ ಬೇಕಾದ ಎಲ್ಲಾ ದಾಖಲೆಗಳನ್ನು ನೀಡಲು ಕ್ರಮ ವಹಿಸಲಾಗಿದೆ' ಎಂದು ಹೇಳಿದರು.

ಗುಂಡ್ಲುಪೇಟೆ ತಹಶೀಲ್ದಾರ್–ಶಾಸಕರಿಗೆ ಮೆಚ್ಚುಗೆ: ಬಗರ್ ಹುಕುಂ ಅಡಿಯಲ್ಲಿ ರೈತರಿಗೆ ಸಾಗುವಳಿ ನೀಡಲು ಗುಂಡ್ಲುಪೇಟೆ ತಹಶೀಲ್ದಾರ್ ಟಿ.ರಮೇಶ್ ಬಾಬು ಹಾಗೂ ಶಾಸಕ ಗಣೇಶಪ್ರಸಾದ್ ಶ್ರಮವಹಿಸಿ, ಸಭೆ ನಡೆಸಿ, ಸಾಗುವಳಿ ದಾಖಲೆ ವಿತರಣೆಗೆ ಕ್ರಮ ವಹಿಸಿದ್ದಾರೆ.

ಗುಂಡ್ಲುಪೇಟೆಯಲ್ಲಿ ತಹಶೀಲ್ದಾರ್ ಇಚ್ಛಾಶಕ್ತಿಯಿಂದ ಕರ್ತವ್ಯ ನಿರ್ವಹಿಸಿದ್ದಾರೆ ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ಮೆಚ್ಚುಗೆ ವ್ಯಕ್ತಪಡಿಸಿದರು. ಶಾಸಕ ಎಚ್.ಎಂ.ಗಣೇಶಪ್ರಸಾದ್ ಮಾತನಾಡಿ, ತಾಲ್ಲೂಕಿನಲ್ಲಿ ಹೆಚ್ಚು ಮಂದಿಗೆ ಸಾಗುವಳಿ ನೀಡಬೇಕು ಎಂಬ ಉದ್ದೇಶದಿಂದ ಹಲವು ಬಾರಿ ಸಭೆ ನಡೆಸಿ, ಮಂಜೂರಾತಿ ಪತ್ರ ವಿತರಿಸಲಾಗುತ್ತಿದೆ. ಗೋಮಾಳ, ಅರಣ್ಯ ಭೂಮಿಯಲ್ಲಿ ಸಾಗುವಳಿ ಮಂಜೂರು ಕೊಡಬೇಕು ಎಂಬ ಹಲವು ಅರ್ಜಿಗೆ, ಕಾನೂನಿನಲ್ಲಿ ಅವಕಾಶವಿಲ್ಲ. ಅವಕಾಶ ಇರುವ ಕಡೆ ಪ್ರಯತ್ನ ಮಾಡಲಾಗುವುದು ಎಂದು ಅಭಯ ನೀಡಿದರು.

**'ನಾಡ ಕಚೇರಿಗೂ 2 ಸಿಸ್ಟಂ' ಜಿಲ್ಲಾಧಿಕಾರಿ ಶಿಲ್ಪಾನಾಗ್ ಮಾತನಾಡಿ 'ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ಬಗರ್‌ಹುಕುಂ ಮೂಲಕ 94 ಮಂದಿಗೆ ಸಾಗುವಳಿ ಚೀಟಿ ವಿತರಣೆ ಮಾಡಲಾಗುತ್ತಿದೆ. ರಿಜಿಸ್ಟರ್ ಕಚೇರಿಯಲ್ಲಿ ನೋಂದಣಿ ಮಾಡಿಸಿ ಆರ್‌ಟಿಸಿ ಕೊಡಲಾಗುತ್ತಿದೆ. ಗುಂಡ್ಲುಪೇಟೆಯಲ್ಲಿ 1.5 ಅಡಿಯಲ್ಲಿ 23 ಮಂದಿಗೆ ಆರ್‌ಟಿಸಿ ನೀಡಲಾಗುತ್ತಿದೆ. ಜಿಲ್ಲೆಯಲ್ಲಿ 67 ಹೊಸ ಕಂದಾಯ ಗ್ರಾಮಗಳು ರಚನೆಯಾಗಿದ್ದು 285 ಹಕ್ಕು ಪತ್ರ ವಿತರಣೆಗೆ ಸಿದ್ಧವಾಗಿವೆ. ಎಂದು ಮಾಹಿತಿ ನೀಡಿದರು**

ಶಾಸಕ ಎ.ಆರ್.ಕೃಷ್ಣಮೂರ್ತಿ ಮಾತನಾಡಿದರು. ಜಿಲ್ಲೆಯ ಹಲವು ಮಂದಿ ರೈತರಿಗೆ ಬಗರ್‌ಹುಕುಂ ಸಾಗುವಳಿ ಚೀಟಿ ವಿತರಣೆ, ಪಹಣಿ ಪತ್ರಿಕೆ, ಪೋಡಿ ದಾಖಲೆ ಮತ್ತು ಕಂದಾಯ ಗ್ರಾಮಗಳ ಹಕ್ಕು ಪತ್ರ ವಿತರಣೆ ಮಾಡಲಾಯಿತು. ಪುರಸಭೆ ಅಧ್ಯಕ್ಷ ಜಿ.ಎಸ್.ಕಿರಣ್, ಉಪಾಧ್ಯಕ್ಷೆ ಹೀನಾ ಕೌಶರ್, ಬಗರ್ ಹುಕುಂ ಸಮಿತಿ ಸದಸ್ಯರಾದ ಮಹದೇವಪ್ಪ, ರೈತರು ಭಾಗವಹಿಸಿದ್ದರು.

**ಭೂ ಸುರಕ್ಷಾ ಯೋಜನೆಯಡಿ ಕಂದಾಯ ದಾಖಲೆಗಳನ್ನು ನಮೂದಿಸಲಾಗಿದೆ. ಜೊತೆಗೆ ಚಾಮರಾಜನಗರ ಇ–ಆಫೀಸ್‌ನಲ್ಲಿ ಮಂಜೂಣಿಯಲ್ಲಿದ್ದು ನಾಡಕಚೇರಿಗಳಿಗೂ ವಿಸ್ತರಣೆ ಮಾಡಲಾಗಿದೆ. ಜಿಲ್ಲಾಧಿಕಾರಿ ಅನುದಾನದಲ್ಲಿ ಕಂದಾಯ ಇಲಾಖೆ ವಿಎ ಗಳಿಗೆ ಅನುಕೂಲವಾಗಲಿ ಎಂಬ ಉದ್ದೇಶದಿಂದ ಎಲ್ಲಾ ನಾಡ ಕಚೇರಿಗಳಿಗೆ ಎರಡು ಸಿಸ್ಟಂ ನೀಡಲು ತಯಾರಿ ಮಾಡಿಕೊಳ್ಳಲಾಗಿದೆ'**

---

# ಜಲಮೂಲಗಳ ಪುನಶ್ಚೇತನಕ್ಕೆ ಒತ್ತು

• **ಉದಯವಾಹಿನಿ, ಗುಡಿಬಂಡೆ**

ಕೇಂದ್ರ ಪುರಸ್ಕೃತ ಯೋಜನೆಯಾದ ಅಮೃತ್ 2.0 ಯೋಜನೆಯಲ್ಲಿ ಕೈಗೊಳ್ಳಬೇಕಾದ ಜಲಮೂಲಗಳ ಪುನಶ್ಚೇತನ, ಹಸಿರು ಜಾಗ ಮತ್ತು ಉದ್ಯಾನವನ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಗುಡಿಬಂಡೆ ಪಟ್ಟಣ ಪಂಚಾಯಿತಿ ವಿಶೇಷ ಸಾಮಾನ್ಯಸಭೆ ಒಪ್ಪಿಗೆ ನೀಡಿತು. ಅಧ್ಯಕ್ಷ ಎ.ವಿಕಾಸ್ ಅಧ್ಯಕ್ಷತೆಯಲ್ಲಿ ಹಮ್ಮಿಕೊಂಡಿದ್ದ ಸಭೆಯಲ್ಲಿ ಹಲವು ವಿಚಾರಗಳನ್ನು ಚರ್ಚಿಸಲಾಯಿತು. ಪಪಂ 8ನೇ ವಾರ್ಡ್ ಸದಸ್ಯ ಬಾಬು ಮಾತನಾಡಿ, ಇತ್ತೀಚಿಗೆ ಸೋಷಿಯಲ್ ಮೀಡಿಯಗಳಲ್ಲಿ ಅಕ್ರಮ ಇ–ಖಾತೆಗಳು ಎಂದು ಸುದ್ದಿಗಳು ಹರಿದಾಡುತ್ತಿವೆ. ಇದರಲ್ಲಿ ಪಪಂ ಸದಸ್ಯರು ಹಣ ಪಡೆದಿದ್ದಾರೆ ಎಂದು ಆರೋಪಿಸಲಾಗಿದೆ. ಇ–ಖಾತೆಗೆ ಸಂಬಂಧಿಸಿದ ವಿಚಾರಗಳ ಬಗ್ಗೆ ಮುಖ್ಯಾಧಿಕಾರಿಗಳು ಸೂಕ್ತ ಕ್ರಮ ತೆಗೆದುಕೊಳ್ಳಬೇಕು ಎಂದು ಆಗ್ರಹಿಸಿದರು. ಸ್ವಚ್ಛತೆ, ಬೀದಿದೀಪ ನಿರ್ವಹಣೆ ಸೇರಿ ಹಲವು ವಿಚಾರಗಳ ಬಗ್ಗೆ ಚರ್ಚೆ ನಡೆಸಲಾಯಿತು. ಇದೇ ಸಮಯದಲ್ಲಿ ಸರ್ಕಾರದಿಂದ ನೇಮಕ ಗೊಂಡ ನೂತನ ನಾಮನಿರ್ದೇಶಿತ ಸದಸ್ಯರಾದ ಅಂಬರೀಷ್, ಬಾಲಾಜಿ ಅವರನ್ನು ಸ್ವಾಗತಿಸಲಾಯಿತು.

ಪಪಂ ಉಪಾಧ್ಯಕ್ಷ ಗಂಗರಾಜು, ಸದಸ್ಯರಾದ ಬಷೀರ್, ರಾಜೇಶ್, ವೀಣಾ, ಮಂಜುಳಾ, ನಗೀನ್ ತಾಜ್,ಅನುಷಾ, ಜಿ. ರಾಜೇಶ್, ಸಿಬ್ಬಂದಿಗಳಾ ಚಕ್ರಪಾಣಿ, ಬಾಲಪ್ಪ ಮುಂತಾದವರು ಇದ್ದರು. ದಾಖಲೆ ನೀಡದ ಅಧಿಕಾರಿ ಸರ್ಕಾರಿ ಜಾಗಗಳಿಗೆ ಇತ್ತೀಚೆಗೆ ನಕಲಿ ದಾಖಲೆಗಳನ್ನು ಸೃಷ್ಟಿಸಿ ಇ–ಖಾತೆ ಮಾಡುತ್ತಿರುವ ಬಗ್ಗೆ ದೂರುಗಳು ಬಂದಿದ್ದು, ಕೆಲವು ದಾಖಲೆಗಳನ್ನು ತೋರಿಸಿ ಅಸಲಿಯೋ, ನಕಲಿಯೋ ಎಂದು ಮುಖ್ಯಾಧಿಕಾರಿಗಳನ್ನು ಪ್ರಶ್ನಿಸಿದಾಗ, ನಮ್ಮ ಬಳಿ ದಾಖಲೆಗಳು ಇಲ್ಲ. ಈಗ ಎಲ್ಲರೂ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸುತ್ತಾರೆ.


ಉದಯವಾಹಿನಿ ಚಿತ್ರ

**ಅದರ ಪ್ರಕಾರ ಇ–ಖಾತೆ ಮಾಡಲಾಗುವುದು ಎಂದು ಉತ್ತರಿಸಿದರು.ಯಾವುದಕ್ಕೆ ಅನುಮೋದನೆ ಪಪಂಗೆ ಬಿಡುಗಡೆಯಾದ ವಿವಿಧ ಅನುದಾನದಲ್ಲಿ ಉಳಿಕೆಯಾದ ಮೊತ್ತಕ್ಕೆ ಕಾಮಗಾರಿಗಳನ್ನು ಕೈಗೊಳ್ಳಲು ಕ್ರಿಯಾಯೋಜನೆ ತಯಾರಿಸುವುದು, ಎಸ್‌ಎಫ್‌ಸಿ ಮುಕ್ತನಿಧಿ ಅನುದಾನದ ಶೇ. 22.75, ಶೇ. 7.25 ಹಾಗೂ ಶೇ.5 ಯೋಜನೆಯಡಿ ನಿಗದಿಪಡಿಸಿದ ಅನುದಾನಕ್ಕೆ ಫಲಾನುಭವಿಗಳನ್ನು ಆಯ್ಕೆ ಮಾಡುವುದು, ಕೇಂದ್ರ ಸರ್ಕಾರದ ಅಮೃತ್ 2.0 ಯೋಜನೆಯಲ್ಲಿ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಕಚೇರಿ ಕಟ್ಟಡ ನಿರ್ಮಾಣಕ್ಕೆ ಅನುದಾನ ಸೇರಿ ಹಲವು ವಿಚಾರಗಳನ್ನು ಚರ್ಚಿಸಿ ಆಡಳಿತ ಮಂಡಳಿಯಿಂದ ಅನುಮೋದನೆ ಪಡೆಯಲಾಯಿತು.**

---

# ಸಾಹಿತ್ಯ ಸಮ್ಮೇಳನದಲ್ಲಿ ಬೇಳೆ ಜೊತೆ ಮೂಳೆಯೂ ಇರಲಿ

• **ಉದಯವಾಹಿನಿ, ಮಂಡ್ಯ**

87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಸಸ್ಯಾಹಾರದ ಜೊತೆಗೆ ಮಾಂಸಾಹಾರವನ್ನೂ ನೀಡಬೇಕು ಎಂದು ಆಗ್ರಹಿಸಿ, ಜಿಲ್ಲಾಧಿಕಾರಿ ಕಚೇರಿ ಎದುರು ಮೊಟ್ಟೆ ತಿನ್ನುವ ಮೂಲಕ ವಿನೂತನವಾಗಿ ಪ್ರಗತಿಪರ ಸಂಘಟನೆಗಳ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.'ಬೇಳೆಯ ಜೊತೆ ಮೂಳೆಯೂ ಇರಲಿ, ಹಪ್ಪಳದ ಜೊತೆ ಕಬಾಬ್ ಇರಲಿ, ಕೋಸಂಬರಿ ಜೊತೆ ಎಗ್‌ಬುರ್ಜಿ ಇರಲಿ, ಮುದ್ದೆ ಜೊತೆ ಬೋಟಿ ಇರಲಿ' ಎಂಬ ಘೋಷಣೆಗಳನ್ನು ಕೂಗಿ ಮಾಂಸಾಹಾರ ಕೊಡಬೇಕೆಂದು ಆಗ್ರಹಿಸಿದರು.

ಆಡಂಬರದ ಕೆಲವು ಸಸ್ಯಾಹಾರದ ತಿನಿಸುಗಳನ್ನು ಕೈಬಿಟ್ಟು, ಕೋಳಿ ಮಾಂಸದ ತುಂಡು ಮತ್ತು ಮೊಟ್ಟೆಯನ್ನು ಕಡ್ಡಾಯವಾಗಿ ಒದಗಿಸಬೇಕು. ಇಲ್ಲದೇ ಹೋದರೆ,


ಉದಯವಾಹಿನಿ ಚಿತ್ರ

ನಾವು ಸಾರ್ವಜನಿಕರಿಂದ ಕೋಳಿ, ಮೊಟ್ಟೆ ಮತ್ತು ಪಡಿತರವನ್ನು ಸಂಗ್ರಹಿಸಿ ಜನರಿಗೆ ಮಾಂಸಾಹಾರ ವಿತರಿಸುವ ದೊಡ್ಡ ಪ್ರತಿಭಟನೆಯನ್ನು ಸಾಹಿತ್ಯ ಸಮ್ಮೇಳನದಲ್ಲಿ ಹಮ್ಮಿಕೊಳ್ಳುತ್ತೇವೆ. ವಿಚಾರದಲ್ಲಿ ರಾಜಿಯಾಗಲು ಸಾಧ್ಯವೇ ಇಲ್ಲ. ಇದು ನಾಗರಿಕರ ಆಹಾರ ಮತ್ತು ಆಯ್ಕೆ ಹಕ್ಕು' ಎಂದು ಪ್ರತಿಪಾದಿಸಿದರು.

ಸಿಐಟಿಯು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸಿ. ಕುಮಾರಿ ಮಾತನಾಡಿ, ಸಾಹಿತ್ಯ ಸಮ್ಮೇಳನದ ವಾಣಿಜ್ಯ ಮಳಿಗೆಗಳಲ್ಲಿ ಮಾಂಸಾಹಾರಕ್ಕೆ ನಿಷೇಧ ವಿಧಿಸಿ ಸಮ್ಮೇಳನಕ್ಕೆ ಆಗಮಿಸುವ ಲಕ್ಷಾಂತರ ಜನತೆಗೆ ಸಸ್ಯಾಹಾರ ನೀಡಲು ಮುಂದಾಗುವ ಮೂಲಕ ಜನರ ಆಹಾರದ ಹಕ್ಕನ್ನು ಉಲ್ಲಂಘಿಸಲಾಗುತ್ತಿದೆ. ಜನರ ಭಾವನೆಗಳ ಜೊತೆ ಮಹೇಶ ಜೋಶಿ ಆಟ ಆಡುತ್ತಿದ್ದಾರೆ' ಎಂದು ದೂರಿದರು.

**ಸಿಪಿಐಎಂ ಜಿಲ್ಲಾ ಕಾರ್ಯದರ್ಶಿ ಟಿ.ಎಲ್. ಕೃಷ್ಣಗೌಡ ಮಾತನಾಡಿ, 'ಮಂಡ್ಯ ಜಿಲ್ಲೆಯ ಹಬ್ಬ, ಸಂಭ್ರಮ, ಸಮ್ಮೇಳನಗಳು ಮಾಂಸಾಹಾರಿ ಊಟೋಪಚಾರಕ್ಕೆ ಹೆಸರುವಾಸಿಯಾಗಿವೆ. ಅಲ್ಲದೇ ಸಮ್ಮೇಳನದಲ್ಲಿ ಭಾಗವಹಿಸುವ ಬಹುಸಂಖ್ಯಾತರು ಮಾಂಸಾಹಾರಿಗಳೇ ಆಗಿರುವಾಗ ನಿಷೇಧ ಏತಕ್ಕಾಗಿ ಎಂಬುದನ್ನು ತಿಳಿಸಬೇಕು' ಎಂದು ಒತ್ತಾಯಿಸಿದರು.**

---

# ಸಚಿವರ ಮನೆಗೆ ಮುತ್ತಿಗೆಗೆ ಯತ್ನ

• **ಉದಯವಾಹಿನಿ, ತುಮಕೂರು**

ಎಕ್ಸ್‌ಪ್ರೆಸ್ ಲಿಂಕ್ ಕೆನಾಲ್ ಮೂಲಕ (ಪೈಪ್‌ಲೈನ್ ಮುಖಾಂತರ) ಕುಣಿಗಲ್ ತಾಲ್ಲೂಕಿಗೆ ಹೇಮಾವತಿ ನೀರು ಹರಿಸುವ ಯೋಜನೆ ಕೈ ಬಿಡುವಂತೆ ಆಗ್ರಹಿಸಿ ಎನ್‌ಡಿಎ ನೇತೃತ್ವದಲ್ಲಿ ಹಮ್ಮಿಕೊಂಡಿದ್ದ ಪಾದಯಾತ್ರೆ, ನಗರದ ಜಿಲ್ಲಾಧಿಕಾರಿ ಕಚೇರಿ ತಲುಪಿತು. ಗುಬ್ಬಿ ತಾಲ್ಲೂಕಿನ ಕಳ್ಳಿಪಾಳ್ಯ ಗೇಟ್ ಬಳಿಯಿಂದ ಪಾದಯಾತ್ರೆ ಆರಂಭವಾಯಿತು. ಜೆಡಿಎಸ್–ಬಿಜೆಪಿ ಶಾಸಕರು, ಮುಖಂಡರು ಹೆಗ್ಗೆರೆಯಲ್ಲಿನ ಜಿಲ್ಲಾ ಉಸ್ತುವಾರಿ ಸಚಿವ ಜಿ.ಪರಮೇಶ್ವರ ಅವರ ಮನೆಗೆ ಮುತ್ತಿಗೆ ಹಾಕಲು ಯತ್ನಿಸಿದರು.

ಸರ್ಕಾರ, ಪರಮೇಶ್ವರ ವಿರುದ್ಧ ಧಿಕ್ಕಾರ ಕೂಗಿದರು. 'ರೈತರ ಹೋರಾಟ ಹತ್ತಿಕ್ಕುತ್ತಿರುವ ಸರ್ಕಾರಕ್ಕೆ ಧಿಕ್ಕಾರ ಎಂದು ಆಕ್ರೋಶ ವ್ಯಕ್ತಪಡಿಸಿದರು. ಸ್ಥಳದಲ್ಲಿ ಕೆಲ ಕಾಲ ಬಿಗುವಿನ ವಾತಾವರಣ ನಿರ್ಮಾಣವಾಗಿತ್ತು. ಪೊಲೀಸರು ಪ್ರತಿಭಟನಕಾರರನ್ನು ಚದುರಿಸಿ, ಮುಂದಕ್ಕೆ ಕಳುಹಿಸಿದರು. ಗುಬ್ಬಿ ಗೇಟ್, ಕಾಲ್‌ಟ್ಯಾಕ್ಸ್ ವೃತ್ತ, ಬಿಜಿಎಸ್ ವೃತ್ತ, ಎಂ.ಜಿ.ರಸ್ತೆಯಲ್ಲಿ ಸಾಗಿ, ಜಿಲ್ಲಾಧಿಕಾರಿ ಕಚೇರಿ ಬಳಿ ಕೊನೆಯಾಯಿತು.

ಮಹಿಳೆಯರು ಖಾಲಿ ಕೊಡ ಹೊತ್ತು ಸಾಗಿದರು. ಅನಿರ್ದಿಷ್ಟಾವಧಿ ಸತ್ಯಾಗ್ರಹ ನಡೆಯಲಿದೆ.

ಶಾಸಕ ಬಿ.ಸುರೇಶ್‌ಗೌಡ ಮಾತನಾಡಿ, 'ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ದುರಹಂಕಾರದಲ್ಲಿ ಮಾತಾನಾಡುತ್ತಾರೆ. ವಿರೋಧ ಪಕ್ಷದ ಶಾಸಕರ ಮೇಲೆ ಆರೋಪ ಮಾಡುವಾಗ ಜವಾಬ್ದಾರಿಯಿಂದ ವರ್ತಿಸಬೇಕು. ಅವರು ಮಾಡಿದ ಆರೋಪ ಸಾಬೀತಾದರೆ ನಾನು ರಾಜಕೀಯ ನಿವೃತ್ತಿ ಪಡೆಯುತ್ತೇನೆ' ಎಂದು ಸವಾಲು ಹಾಕಿದರು.

ಶಿವಕುಮಾರ್ ತಮ್ಮ ಸಂಬಂಧಿಕರಿಗೆ ಅನುಕೂಲ ಮಾಡಲು ಇಡೀ ಜಿಲ್ಲೆಯ ರೈತರಿಗೆ ಮಣ್ಣು ಹಾಕುತ್ತಿದ್ದಾರೆ. ಕಾಂಗ್ರೆಸ್ ಸರ್ಕಾರ ಅಧಿಕಾರದಲ್ಲಿದೆ, ಜಲಾಶಯದಿಂದಲೇ ನೇರವಾಗಿ ರಾಮನಗರಕ್ಕೆ ನೀರು ತೆಗೆದುಕೊಂಡು ಹೋಗಬಹುದು. ಕುಣಿಗಲ್‌ಗೆ ನೀರು ಹರಿಸಲು ನಮ್ಮ ವಿರೋಧವಿಲ್ಲ. ಆದರೆ, ರಾಮನಗರಕ್ಕೆ ನೀರು ಹೋಗಲು ಬಿಡುವುದಿಲ್ಲ ಎಂದರು.

---

# ಸಂವಿಧಾನ ರಕ್ಷಣೆ ನಮ್ಮೆಲ್ಲರ ಹೊಣೆ: ಶಾಸಕ ಡಾ.ಮಂತರ್‌ಗೌಡ

• **ಉದಯವಾಹಿನಿ, ಮಡಿಕೇರಿ**

ಸಂವಿಧಾನವನ್ನು ರಕ್ಷಿಸುವುದು ನಮ್ಮೆಲ್ಲರ ಜವಾಬ್ದಾರಿ' ಎಂದು ಶಾಸಕ ಡಾ.ಮಂತರ್‌ಗೌಡ ತಿಳಿಸಿದರು. 'ಸಂವಿಧಾನ ಓದು ಅಭಿಯಾನ–ಕರ್ನಾಟಕ'ವು ಇಲ್ಲಿನ ಅಂಬೇಡ್ಕರ್ ಭವನದಲ್ಲಿ ಏರ್ಪಡಿಸಿರುವ, ಜಿಲ್ಲಾಮಟ್ಟದ ಎರಡು ದಿನದ 'ಸಂವಿಧಾನ ಓದು ಅಧ್ಯಯನ ಶಿಬಿರ'ದ ಅಂತಿಮ ದಿನವಾದ ಭಾನುವಾರ ಕಾರ್ಯಕ್ರಮದಲ್ಲಿ ಭಾಗಿಯಾಗಿ ಮಾತನಾಡಿದರು. ಸಮಾನತೆ ಇನ್ನೂ ಸಿಕ್ಕಿಲ್ಲ. ಸಂವಿಧಾನದಿಂದ ಹುದ್ದೆಗಳನ್ನು ಪಡೆದು ಮೇಲೆ ಬಂದವರೂ ಸಂವಿಧಾನವನ್ನು ನೆನಪಿಸಿಕೊಳ್ಳುವುದಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಸಂವಿಧಾನದ ಕುರಿತು ಅರಿವು ಮೂಡಿಸುವ ಇಂತಹ ಕಾರ್ಯಕ್ರಮಗಳು ತಾಲ್ಲೂಕು ಮಟ್ಟ ಹಾಗೂ ಗ್ರಾಮಮಟ್ಟದಲ್ಲೂ ನಡೆಯಬೇಕಿದೆ ಎಂದು ಅಭಿಪ್ರಾಯಪಟ್ಟರು. ಇದಕ್ಕೂ ಮುನ್ನ 'ಸಂವಿಧಾನ ಮತ್ತು ಸಾಮಾಜಿಕ ನ್ಯಾಯ' ಕುರಿತು ಮಾತನಾಡಿದ ಬಿ.ರಾಜಶೇಖರಮೂರ್ತಿ, 'ನಮ್ಮನ್ನು ಆಳುವ ಸರ್ಕಾರಗಳು ಸಾಮಾಜಿಕ ನ್ಯಾಯದ ವಿರುದ್ಧದ ಕಾಯ್ದೆಯಗಳನ್ನೇ ಜಾರಿಗೆ ತರುತ್ತಿವೆ' ಎಂದು ಅವರು ಉದಾಹರಣೆಗಳ ಸಮೇತ ವಿವರಿಸಿದರು. 'ಕೇವಲ ಮೀಸಲಾತಿಯಷ್ಟೇ ಸಾಮಾಜಿಕ ನ್ಯಾಯ


ಉದಯವಾಹಿನಿ ಚಿತ್ರ

ಅಲ್ಲ' ಎಂದು ಪ್ರತಿಪಾದಿಸಿದ ಅವರು, 'ಶಿಕ್ಷಣ, ಆಹಾರ, ಉದ್ಯೋಗ, ವಸತಿ, ಆರೋಗ್ಯವನ್ನು ಮೂಲಭೂತಹಕ್ಕುಗಳನ್ನಾಗಿ ಮಾಡಬೇಕು' ಎಂದು ಒತ್ತಾಯಿಸಿದರು. ಸಾಮಾಜಿಕ ಅನ್ಯಾಯದ ಸ್ವರೂಪವನ್ನು ಹೇಳಿದ ಅವರು, ಪುರಾಣಗಳು, ಮಹಾಕಾವ್ಯಗಳು, ಇತಿಹಾಸ ದಲ್ಲಿ ದೇಶದಲ್ಲಿ ರಾಜ್ಯದಲ್ಲಿ ಹಾಗೂ ಕೊಡಗು ಜಿಲ್ಲೆಯಲ್ಲಿ ಉಂಟಾಗಿರುವ ಸಾಮಾಜಿಕ ಅನ್ಯಾಯ ಕುರಿತು ಸುದೀರ್ಘವಾಗಿ ಮಾತನಾಡಿದರು. ನಮ್ಮ ಸುತ್ತಮುತ್ತಲು ನಡೆಯುತ್ತಿರುವ ಸಣ್ಣಪುಟ್ಟ ಘಟನೆಗಳೂ ಹೇಗೆ ಸಾಮಾಜಿಕ ನ್ಯಾಯವನ್ನು ವಿರೋಧಿಸುತ್ತಿವೆ ಎಂಬುದನ್ನು ಅವರು ವಿದ್ಯಾರ್ಥಿಗಳಿಗೆ ಮನವರಿಕೆ ಮಾಡಿಕೊಟ್ಟರು. ಬಡತನ ರೇಖೆಗಿಂತ ಕೆಳಗಿರುವ ಪರಿಶಿಷ್ಟಜಾತಿ, ಪಂಗಡದವರನ್ನು ಮೇಲೆತ್ತಲೆಂದು ಜಾರಿಗೊಳಿಸಿದ 'ಎಸ್‌ಇಎಸ್‌ಇಪಿ–ಟಿಎಸ್‌ಪಿ' ಕಾಯ್ದೆ ಜಾರಿಯಾದಾಗಿನಿಂದ ಇಲ್ಲಿಯವರೆಗೂ ಅನ್ಯ ಉದ್ದೇಶಕ್ಕೆ ಬಳಕೆಯಾಗುತ್ತಿದೆ. ಈ ಕಾಯ್ದೆಯ ಮೂಲ ಉದ್ದೇಶಕ್ಕೆ ವಿರುದ್ಧವಾಗಿಯೇ ಬಳಕೆಯಾಗುತ್ತಿದ್ದು ಕಾಯ್ದೆಯ ಜಾರಿ ಸ್ವರೂಪವೇ ಬುಡಮೇಲಾಗಿದೆ ಎಂದು ಕಿಡಿಕಾರಿದರು. ಒಂದಷ್ಟು ಸಮರ್ಪಕವಾಗಿ ಜಾರಿಗೆ ಬಂದಿರುವ ಉದಾಹರಣೆಗಳಿದ್ದರೂ ಅವೂ ಸಹ ಪರಿಶಿಷ್ಟಜಾತಿ, ಪಂಗಡದ ಬಲಾಢ್ಯರ ಪಾಲಾಗಿದೆ ಎಂದು ಬೇಸರ ವ್ಯಕ್ತಪಡಿಸಿದರು.

**ಎಲ್ಲಾ ಧರ್ಮಗಳಲ್ಲೂ ಅಸಮಾನತೆ ಇದೆ ಎಂದು ಸಾಚಾರ್ ಸಮಿತಿ ಹೇಳಿದೆ. ಮಧ್ಯಕಾಲೀನ ಕರ್ನಾಟಕದಲ್ಲಿ ಭೂಮಾಲೀ ಕರು ತಮ್ಮ ಭೂಮಿಯನ್ನು ಮಾರಾಟ ಮಾಡುವುದರ ಜೊತೆಗೆ ಆ ಭೂಮಿಯಲ್ಲಿ ದುಡಿಯುತ್ತಿದ್ದ ಜನರನ್ನೂ ಮಾರಾಟ ಮಾಡುತ್ತಿದ್ದರು ಎಂದು ಸಂಶೋಧಕ ಎಂ. ಚಿದಾನಂದಮೂರ್ತಿ ತಮ್ಮ ಪುಸ್ತಕದಲ್ಲಿ ದಾಖಲಿಸಿದ್ದಾರೆ ಎಂದು ಹಲವು ಉಲ್ಲೇಖ ಗಳನ್ನು ಶಿಬಿರದಲ್ಲಿ ಪ್ರಸ್ತಾಪಿಸಿದ ಅವರು ಜಾತಿ ಅಸಮಾನತೆ ಇರುವವರೆಗೂ ಮೀಸಲಾತಿ ಇರಲೇಬೇಕು ಎಂದು ಒತ್ತಾಯಿಸಿದರು.**

---

# 2ನೇ ಅತಿ ದೊಡ್ಡ ಕೈಗಾರಿಕಾ ಪ್ರದೇಶಕ್ಕೆ ಬಸ್ ಇಲ್ಲ

• **ಉದಯವಾಹಿನಿ, ಹಾರೋಹಳ್ಳಿ**

ಏಷ್ಯಾದ 2ನೇ ಅತಿ ದೊಡ್ಡ ಕೈಗಾರಿಕಾ ಪ್ರದೇಶವಾಗಿರುವ ಹಾರೋಹಳ್ಳಿ ಕೈಗಾರಿಕಾ ಪ್ರದೇಶಕ್ಕೆ ಬಸ್ ವ್ಯವಸ್ಥೆ ಇಲ್ಲದೆ ನಿತ್ಯ ಕೆಲಸಕ್ಕೆ ಹೋಗುವ ಕಾರ್ಮಿಕರು ಹೈರಾಣಾಗಿದ್ದಾರೆ. ಹಾರೋಹಳ್ಳಿ ಕೈಗಾರಿಕಾ ಪ್ರದೇಶದ 3 ಹಂತಗಳಲ್ಲಿ ಈಗಾಗಲೇ 500ಕ್ಕೂ ಹೆಚ್ಚು ಕಾರ್ಖಾನೆಗಳು ಕಾರ್ಯನಿರ್ವಹಿಸುತ್ತಿವೆ. 15ಸಾವಿರಕ್ಕೂ ಹೆಚ್ಚು ಕಾರ್ಮಿಕರು ಕೆಲಸ ಮಾಡುತ್ತಿದ್ದಾರೆ.

ಕೆಲವು ಕಾರ್ಖಾನೆಗಳ ಕಾರ್ಮಿಕರು ಬಸ್ ವ್ಯವಸ್ಥೆ ಇಲ್ಲದೇ ಪರದಾಡುತ್ತಿದ್ದಾರೆ. ಹಾರೋಹಳ್ಳಿಯಿಂದ ಕೈಗಾರಿಕೆ ಪ್ರದೇಶಕ್ಕೆ ಐದು ಕಿ.ಮೀ ದೂರವಿದೆ. ಹಾರೋಹಳ್ಳಿ, ಕನಕಪುರ ಮತ್ತು ಜಿಲ್ಲಾ ಕೇಂದ್ರ ರಾಮನಗರದಿಂದ ನೂರಾರು ಕಾರ್ಮಿಕರು ಕೆಲಸಕ್ಕೆ ಬರುತ್ತಾರೆ. ಈ ಸ್ಥಳಗಳಿಂದ ಬಸ್ ನಿಯೋಜಿಸಬೇಕೆಂಬುದು ಕಾರ್ಮಿಕರ ಆಗ್ರಹ.

**ಖಾಸಗಿ ವಾಹನಗಳ ಅವಲಂಬನೆ:** ಕೈಗಾರಿಕಾ ಪ್ರದೇಶಕ್ಕೆ ಹೋಗುವ ಕಾರ್ಮಿಕರು ಖಾಸಗಿ ಟ್ಯಾಕ್ಸಿ, ಆಟೋಗಳನ್ನು ಅವಲಂಭಿಸಿದ್ದಾರೆ. ದುಡಿದ ಹಣದದಲ್ಲಿ ಒಂದಿಷ್ಟು ಹಣವನ್ನು ಖಾಸಗಿ ವಾಹನಗಳಿಗೆ ನೀಡುವಂತಾಗಿದೆ. ರಾತ್ರಿ ಪಾಳಿಯಲ್ಲಿ ಕೆಲಸ ಮಾಡುವ ಕಾರ್ಮಿಕರು ಕೂಡ ಖಾಸಗಿ ವಾಹನಗಳಿಗೆ ಹೆಚ್ಚಿನ ಹಣ ಪಾವತಿ ಮಾಡಿ ಹೋಗಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ಪ್ರತಿದಿನ ಗೂಡ್ಸ್ ವಾಹನ, ಆಟೋ ರಿಕ್ಷಾಗಳಲ್ಲಿ ಕಾರ್ಮಿಕರು ಕೈಗಾರಿಕೆ ಸೇರಿಕೊಳ್ಳುತ್ತಿದ್ದಾರೆ. ಸಾವಿರಾರು ಕಾರ್ಮಿಕರು ನಿತ್ಯ ಸಂಚರಿಸುವ ಈ ಪ್ರದೇಶಕ್ಕೆ ಬಸ್ ಸೌಕರ್ಯ ಕಲ್ಪಿಸಲು ಸಾರಿಗೆ ಸಂಸ್ಥೆ ಹಿಂದೇಟು ಹಾಕುತ್ತಿರುವುದು ನೋವಿನ ಸಂಗತಿ ಎಂದು ಕಾರ್ಮಿಕರು ಬೇಸರ ವ್ಯಕ್ತಪಡಿಸುತ್ತಾರೆ.


ಉದಯವಾಹಿನಿ ಚಿತ್ರ

### ಅಕ್ಕಪಕ್ಕದ ಗ್ರಾಮಗಳಿಗೆ ಅನುಕೂಲ

**ರಾಮನಗರ ಜಿಲ್ಲಾ ಕೇಂದ್ರದಿಂದ ಬೆಳಿಗೆ, ಸಂಜೆ ರಾಮನಗರ ಮಾರ್ಗವಾಗಿ ಕೈಗಾರಿಕಾ ಪ್ರದೇಶಕ್ಕೆ ಬಸ್ ವ್ಯವಸ್ಥೆ ಕಲ್ಪಿಸಿದರೆ ಕಾರ್ಮಿಕರು, ಶಾಲಾ ಮಕ್ಕಳು, ಆಸ್ಪತ್ರೆ, ರೈತಾಪಿ ವರ್ಗ, ಮಾರುಕಟ್ಟೆ ತೆರಳುವರಿಗೆ ಅನುಕೂಲವಾಗುತ್ತದೆ ಎನ್ನುತ್ತಾರೆ ಸ್ಥಳೀಯರು.**

---

# ಸಿ.ಪಿ. ಯೋಗೇಶ್ವರ್ ಮುಂದೆ ಸಾಲು ಸಾಲು ಸವಾಲು

## ತಾಲ್ಲೂಕು ಆಡಳಿತವನ್ನು ಸರಿದಾರಿಗೆ ತಂದು ನನೆಗುದಿಗೆ ಬಿದ್ದಿರುವ ಕಾಮಗಾರಿಗಳಿಗೆ ಚಾಲನೆ

• **ಉದಯವಾಹಿನಿ, ಚನ್ನಪಟ್ಟಣ:**

ಕ್ಷೇತ್ರದ ಮುಂದಿನ ಮೂರೂವರೆ ವರ್ಷದ ಅವಧಿಯ ನೂತನ ಶಾಸಕರಾಗಿ ಆಯ್ಕೆಯಾಗಿರುವ ಸಿ.ಪಿ. ಯೋಗೇಶ್ವರ್ ಅವರು, ತಾವು ಗೆದ್ದ ಹದಿನೈದು ದಿನಗಳಲ್ಲೇ ತಾಲ್ಲೂಕಿನ ಆಡಳಿತ ಚುಕ್ಕಾಣಿಯನ್ನು ಬಿಗಿಪಡಿಸುವತ್ತ ಚಿತ್ತ ಹರಿಸಿದ್ದಾರೆ.

ತೀವ್ರ ಪೈಪೋಟಿಯ ಚುನಾವಣೆಯಲ್ಲಿ ಗೆಲುವಿನ ನಗೆ ಬೀರಿರುವ ಅವರ ಮುಂದೆ ಸಾಲು ಸಾಲು ಸವಾಲುಗಳು ಜೊತೆಗೆ ಜನರ ಅಭಿವೃದ್ಧಿ ನಿರೀಕ್ಷೆಯೂ ಹೆಚ್ಚಾಗಿದೆ. ಅಧಿಕಾರಿಗಳ ದರ್ಬಾರಿನಲ್ಲಿ ಅಭಿವೃದ್ಧಿ ಕಾರ್ಯಗಳು ನೇಪಥ್ಯಕ್ಕೆ ಸರಿದಿದ್ದು ನಿಜ. ಜನರ ಕೆಲಸ–ಕಾರ್ಯಗಳಿಗಿಂತ ಹೆಚ್ಚಾಗಿ ಚುನಾವಣೆಗೆ ಸಂಬಂಧಿಸಿದ ಕಾರ್ಯಭಾರದಲ್ಲಿ ತಾಲ್ಲೂಕು ಆಡಳಿತ ಮುಳುಗಿತ್ತು. ಇದೀಗ, ಚುನಾವಣೆ ಕಾವು ಮುಗಿದು ಹೊಸ ಜನಪ್ರತಿನಿಧಿಯೂ ಬಂದಿದ್ದಾರೆ. ಅವರಿಗೆ ತಾಲ್ಲೂಕು ಆಡಳಿತವನ್ನು ಸರಿದಾರಿಗೆ ತಂದು ನನೆಗುದಿಗೆ ಬಿದ್ದಿರುವ ಕಾಮಗಾರಿಗಳಿಗೆ ಚಾಲನೆ ನೀಡಬೇಕಾದ ಸವಾಲು ಯೋಗೇಶ್ವರ್ ಮುಂದಿದೆ.

**ಮೇಲಕ್ಕೇಳುವುದೇ ನಿಲ್ದಾಣ:** ಮುಖ್ಯವಾಗಿ ನಗರದಲ್ಲಿ ಹಲವು ವರ್ಷಗಳಿಂದ ಖಾಸಗಿ ಬಸ್ ನಿಲ್ದಾಣ ಕಾಮಗಾರಿ ನನೆಗುದಿಗೆ ಬಿದ್ದಿದೆ. ರಾಷ್ಟ್ರಪಿತ ಗಾಂಧೀಜಿ ಅವರ ನೆನಪಿನ ಬುತ್ತಿ ಇರುವ ಶಿಥಿಲಾವಸ್ಥೆಯ ಗಾಂಧಿ ಭವನಕ್ಕೆ ಹೊಸ ರೂಪ ನೀಡಬೇಕಿದೆ. ಸಾತನೂರು ವೃತ್ತದಲ್ಲಿರುವ ಡಾ. ಬಿ.ಆರ್. ಅಂಬೇಡ್ಕರ್ ಭವನ ಹೆಸರಿಗಷ್ಟೇ ಉದ್ಘಾಟನೆಯಾಗಿದ್ದರೂ, ಇನ್ನು ಕಾಮಗಾರಿ ಪೂರ್ಣಗೊಂಡಿಲ್ಲ.

ಕೆಲಸ ಪೂರ್ಣಗೊಳಿಸಿ ಬಳಕೆಗೆ ಮುಕ್ತವಾಗಿಸಬೇಕಿದೆ. ರೇಷ್ಮೆ ಮಾರುಕಟ್ಟೆ ನಿರ್ಮಾಣ ಕಾಮಗಾರಿ ಪೂರ್ಣಗೊಳ್ಳಬೇಕಿದೆ. ನಗರದ ಒಳಚರಂಡಿ (ಯುಜಿಡಿ) ಕಾಮಗಾರಿ ನಿಂತ ನೀರಾಗಿದೆ. ನಗರದಲ್ಲಿ ಘನತ್ಯಾಜ್ಯ ನಿರ್ವಹಣೆ ಸಮಸ್ಯೆ ಬೃಹದಾಕಾರವಾಗಿ ಬೆಳೆದಿದೆ. ನಗರವೂ ಸೇರಿದಂತೆ ಗ್ರಾಮೀಣ ಪ್ರದೇಶದ ಹಲವು ರಸ್ತೆಗಳು ಗುಂಡಿ ಬಿದ್ದು ಹದಗೆಟ್ಟಿವೆ. ಕೆಲವೇ ಕೆರೆಗಳನ್ನು ಬಿಟ್ಟರೆ ಉಳಿದ ಕೆರೆಗಳು ನೀರಿಲ್ಲದೆ ಭಣಗುಡುತ್ತಿವೆ. ರಸ್ತೆಗಳ ಇಕ್ಕೆಲಗಳಲ್ಲಿ ಗಿಡಗಂಟಿಗಳು ಬೆಳೆದು ನಿಂತಿವೆ. ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಸಹಭಾಗಿತ್ವದ ಮಹತ್ವಾಕಾಂಕ್ಷಿ ಯೋಜನೆಯಾದ ಜಲಜೀವನ್ ಮಿಷನ್ ಕಾಮಗಾರಿ ಹಳ್ಳ ಹಿಡಿದಿದೆ.

**ಕಾಡಾನೆ ಹಾವಳಿ, ಭ್ರಷ್ಟಾಚಾರ:** ತಾಲ್ಲೂಕಿನಲ್ಲಿ ಕಾಡಾನೆಗಳ ಹಾವಳಿ ಮಿತಿ ಮೀರಿದೆ. ಕಂದಾಯ ಇಲಾಖೆ, ಉಪ ನೋಂದಣಾಧಿಕಾರಿ ಕಚೇರಿ, ಪೊಲೀಸ್ ಠಾಣೆ, ನಗರಸಭೆ ಸೇರಿದಂತೆ ಹಲವೆಡೆ ಭ್ರಷ್ಟಾಚಾರ ತಾಂಡವವಾಡುತ್ತಿದೆ ಎಂಬ ಆರೋಪಗಳು ಸಾರ್ವತ್ರಿಕವಾಗಿವೆ. ಆರೋಗ್ಯ ಇಲಾಖೆ, ಶಿಕ್ಷಣ ಇಲಾಖೆ ಸೇರಿದಂತೆ ಬಹುತೇಕ ಇಲಾಖೆಗಳಲ್ಲಿ ಹುದ್ದೆಗಳು ಭರ್ತಿಯಾಗದೆ ಖಾಲಿ ಉಳಿದಿವೆ. ಸರ್ಕಾರಿ ಕಚೇರಿಗಳಲ್ಲಿ ಭ್ರಷ್ಟಾಚಾರ ಹಾಸು ಹೊಕ್ಕಾಗಿದೆ. ಜನಸಾಮಾನ್ಯರನ್ನು ಸಣ್ಣಪುಟ್ಟ ಕೆಲಸಕ್ಕೂ ಅಲೆದಾಡಿಸುವುದು ಹೆಚ್ಚಾಗಿದೆ. ಯಾವುದೇ ಇಲಾಖೆಯಲ್ಲೂ ಸುಲಭದ ಕೆಲಸವೂ ಬೆಟ್ಟದಂತೆ ಗೋಚರವಾಗುತ್ತಿದೆ. ನಗರಸಭೆಯಲ್ಲಿ ಇ–ಖಾತೆ ಸೇರಿದಂತೆ ಹಲವು ಸಾರ್ವಜನಿಕ ಕೆಲಸಗಳನ್ನು ಮಾಡಿಸಿಕೊಳ್ಳುವುದು ಸವಾಲಾಗಿದೆ. ಹಣ ಕೊಡದಿದ್ದರೆ ಯಾವ ಕೆಲಸವೂ ಆಗದು ಎಂಬುದು ಸಾಮಾನ್ಯವಾಗಿದೆ. ಸಾರ್ವಜನಿಕ ಸ್ನೇಹಿಯಾಗಬೇಕಾದ ಗ್ರಾಮ ಪಂಚಾಯಿತಿಗಳಲ್ಲೂ ಭ್ರಷ್ಟಾಚಾರ ತಾಂಡವಾಡುತ್ತಿದೆ.

**ನಗರಸಭೆ ಆಡಳಿತಕ್ಕೆ ಚಿಕಿತ್ಸೆ:** ಜಡವಾಗಿರುವ ನಗರಸಭೆ ಆಡಲಿತಕ್ಕೆ ಮೊದಲು ಚಿಕಿತ್ಸೆ ನೀಡಲು ಮುಂದಾಗಿರುವ ಯೋಗೇಶ್ವರ್, ಈಗಾಗಲೇ ನಗರಸಭೆ ಅಧಿಕಾರಿಗಳು ಮತ್ತು ಸದಸ್ಯರ ಜೊತೆ ಸಭೆ ನಡೆಸಿ ನಗರದ ಸಮಸ್ಯೆಗಳ ಮುಕ್ತಿಗೆ ಅಂತ್ಯ ಕಾಣಿಸುವ ಮಾತುಗಳನ್ನಾಡಿದ್ದಾರೆ. ಹಾಗೆಯೇ ತಾಲ್ಲೂಕು ಮಟ್ಟದ ಅಧಿಕಾರಿಗಳ ಸಭೆ ನಡೆಸಿ ಅಧಿಕಾರಿಗಳಿಗೆ ಚಳಿ ಬಿಡಿಸಿದ್ದಾರೆ. ಭ್ರಷ್ಟಾಚಾರದ ಆರೋಪ ಕೇಳಿ ಬಾರದಂತೆ ಜನರ ಕೆಲಸ ಮಾಡಬೇಕು. ಎಂದು ಎಚ್ಚರಿಕೆ ನೀಡಿದ್ದಾರೆ. ಆರೋಗ್ಯ ಇಲಾಖೆಯ ಅಧಿಕಾರಿಗಳು, ಕೆರೆಗಳಿಗೆ ನೀರು ತುಂಬಿಸುವ ನಿಟ್ಟಿನಲ್ಲಿ ಕಾವೇರಿ ನೀರಾವರಿ ನಿಗಮದ ಅಧಿಕಾರಿಗಳ ಜೊತೆಗೂ ಸಭೆ ನಡೆಸಿದ್ದಾರೆ. ಕೆರೆಗಳಿಗೆ ಆದಷ್ಟು ಬೇಗ ನೀರು ಹರಿಸಿ ರೈತರಿಗೆ ಅನುಕೂಲ ಕಲ್ಪಿಸುವಂತೆ ತಾಕೀತು ಮಾಡಿದ್ದಾರೆ.



**ಅಭಿವೃದ್ಧಿ ಹೆಸರಿನಲ್ಲಿ ಕ್ಷೇತ್ರದಲ್ಲಿ ಉಪ ಚುನಾವಣೆ ತಯಾರಿ ಆರಂಭಿಸಿದ್ದ ಅವರು ಹಲವು ಅಭಿವೃದ್ಧಿ ಕಾರ್ಯಗಳಿಗೆ ಚಾಲನೆ ನೀಡಿದ್ದರು. ತಾಲ್ಲೂಕಿನ ಹಲವೆಡೆ ಜನಸಂಪರ್ಕ ಸಭೆಗಳನ್ನು ನಡೆಸಿ ಸಾರ್ವಜನಿಕರಿಂದ ಅಹವಾಲು ಸ್ವೀಕರಿಸಿದ್ದ ಶಿವಕುಮಾರ್ ಚನ್ನಪಟ್ಟಣವನ್ನು ಚಿನ್ನದ ನಾಡು ಮಾಡುವ ಭರವಸೆ ನೀಡಿದರು.**

**ನನೆಗುದಿಗೆ ಬಿದ್ದಿರುವ ಕಾಮಗಾರಿಗಳನ್ನು ಪುನರಾರಂಭಿಸಲು ಸೂಚನೆ ನೀಡಿದ್ದಾರೆ. ಇದೆಲ್ಲದರ ಜೊತೆಗೆ ಹಳಿ ತಪ್ಪಿರುವ ತಾಲ್ಲೂಕು ಆಡಳಿತವನ್ನು ಸರಿದಾರಿಗೆ ತಂದು ಜನಸ್ನೇಹಿ ಆಡಳಿತ ನೀಡುವ ಸವಾಲು ಶಾಸಕರ ಮುಂದಿದೆ. ನನಸಾಗುವುದೇ ನಿವೇಶನ ಸೂರಿನ ಕನಸು ಕ್ಷೇತ್ರವನ್ನು ಹಿಂದೆ ಪ್ರತಿನಿಧಿಸುತ್ತಿದ್ದ ಎಚ್.ಡಿ. ಕುಮಾರಸ್ವಾಮಿ ಅವರು ಮಂಡ್ಯ ಸಂಸದರಾಗಿ ಆಯ್ಕೆಯಾಗಿ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡುತ್ತಿದ್ದಂತೆ ಕ್ಷೇತ್ರಕ್ಕೆ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಕಾಲಿಟ್ಟಿದ್ದರು.**

---

# ಮಿನಿ ನ್ಯೂಸ್

## ಸಿದ್ದಗಂಗಾ ಮಠದಲ್ಲಿ ಚಿರತೆ ಪ್ರತ್ಯಕ್ಷ

• **ಉದಯವಾಹಿನಿ, ತುಮಕೂರು**

ಸಿದ್ದಗಂಗಾ ಮಠದಲ್ಲಿ ಚಿರತೆ ಪ್ರತ್ಯಕ್ಷವಾಗಿದೆ. ತುಮಕೂರಿನ ಕ್ಯಾತಸಂದ್ರದಲ್ಲಿ ಇರುವ ಸಿದ್ದಗಂಗಾ ಹಳೆಮಠದ ಆವರಣದಲ್ಲಿ ಚಿರತೆ ಕಾಣಿಸಿದೆ. ಮಧ್ಯರಾತ್ರಿ 11:30ರ ವೇಳೆಗೆ ಚಿರತೆ ಆವರಣದಲ್ಲಿ ಓಡಾಡಿರುವ ದೃಶ್ಯ ಸಿಸಿ ಕ್ಯಾಮೆರಾದಲ್ಲಿ ಸೆರೆಯಾಗಿದೆ. ಮಠದ ಸ್ಮೃತಿ ವನದ ಬಳಿ ಚಿರತೆ ಕಾಣಿಸಿಕೊಂಡಿದ್ದು ಆವರಣದಲ್ಲಿದ್ದ ನಾಯಿಯೊಂದು ಬೊಗಳಿದ ನಂತರ ಅಲ್ಲಿಂದ ಓಡಿ ಹೋಗಿದೆ. ಸಿಸಿಟಿವಿ ದೃಶ್ಯಗಳನ್ನು ಪರಿಶೀಲಿಸಿದ ಮಠದ ಸಿಬ್ಬಂದಿ ಅರಣ್ಯ ಇಲಾಖೆ ಅಧಿಕಾರಿಗಳಿಗೆ ಮಾಹಿತಿ ನೀಡಿದ್ದಾರೆ. ಅರಣ್ಯ ಇಲಾಖೆ ಸಿಬ್ಬಂದಿ ಚಿರತೆ ಓಡಾಡಿದ ಸ್ಥಳ ಪರಿಶೀಲಿಸಿದ ನಂತರ ಸೆರೆಗೆ ಬೋನು ಅಳವಡಿಸಿದ್ದಾರೆ.ನಾಯಿ ಬೇಟೆಯಾಡಲು ಚಿರತೆ ಬಂದಿರುವ ಶಂಕೆ ವ್ಯಕ್ತವಾಗಿದೆ. ಈ ಭಾಗದಲ್ಲಿಆಗಾಗ ಚಿರತೆ, ಕರಡಿಗಳು ಗ್ರಾಮಗಳಿಗೆ ಬರುತ್ತಿರುತ್ತವೆ.ಬೆಳಗಿನ ಜಾವ ಸಪ್ತಗಿರಿ ಬಡಾವಣೆಯ ಟಿ.ಪಿ.ಕೈಲಾಸಂ ರಸ್ತೆಯಲ್ಲಿ ಚಿರತೆ ಸಂಚಾರ ನಡೆಸಿತ್ತು. ಹತ್ತಿರದ ಮನೆಯೊಂದರ ಸಿಸಿಟಿವಿ ಕ್ಯಾಮೆರಾದಲ್ಲಿ ಚಿರತೆ ಓಡಾಡಿರುವ ದೃಶ್ಯ ಸೆರೆಯಾಗಿತ್ತು.

## ಎಸ್‌ಟಿಪಿ ಘಟಕ ಕಾಮಗಾರಿ ಎರಡು ತಿಂಗಳಲ್ಲಿ ಪೂರ್ಣ: ಶಾಸಕ ರಮೇಶ

• **ಉದಯವಾಹಿನಿ, ಶ್ರೀರಂಗಪಟ್ಟಣ**

ಪಟ್ಟಣದ ಹೊರ ವಲಯದಲ್ಲಿ 12 ಕೋಟಿ ವೆಚ್ಚದಲ್ಲಿ ನಿರ್ಮಿಸಲು ಉದ್ದೇಶಿಸಿರುವ ಕೊಳಚೆ ನೀರು ಶುದ್ದೀಕರಣ (ಎಸ್‌ಟಿಪಿ) ಘಟಕದ ಕಾಮಗಾರಿ ಎರಡು ತಿಂಗಳಲ್ಲಿ ಪೂರ್ಣಗೊಳ್ಳಲಿದೆ ಎಂದು ಶಾಸಕ ರಮೇಶ ಬಂಡಿಸಿದ್ದೇಗೌಡ ತಿಳಿಸಿದರು. ನಗರ ನೀರು ಸರಬರಾಜು ಮಂಡಳಿ ಮತ್ತು ಸ್ಥಳೀಯ ಪುರಸಭೆ ಅಧಿಕಾರಿಗಳ ಜತೆಗೂಡಿ ಸ್ಥಳ ಪರಿಶೀಲಿಸದ ಬಳಿಕ ಅವರು ಮಾತನಾಡಿದರು.

'3 ಕಿ.ಮೀ. ಉದ್ದದಷ್ಟು ಪೈಪ್‌ಲೈನ್ ಅಳವಡಿಸುವ ಕಾರ್ಯ ಮುಗಿದಿದೆ. ನದಿಗೆ ಕೊಳಚೆ ನೀರು ಸೇರದಂತೆ 5 ಚೆಕ್ ಬಂಡ್‌ಗಳನ್ನು ನಿರ್ಮಿಸಲಾಗಿದೆ. ಕೊಳಚೆ ನೀರನ್ನು ಶುದ್ಧೀಕರಿಸುವ ಯಂತ್ರ ಜೋಡಣೆ ಕಾರ್ಯ ಪ್ರಗತಿಯಲ್ಲಿದೆ' ಎಂದು ಅವರು ಹೇಳಿದರು. ಪುರಸಭೆ ಮುಖ್ಯಾಧಿಕಾರಿ ಎಂ. ರಾಜಣ್ಣ ಮಾತನಾಡಿ, 'ಟೌನ್ ವ್ಯಾಪ್ತಿಯಲ್ಲಿ ಒಳಚರಂಡಿಗಳ ನೀರನ್ನು ಇಲ್ಲಿಗೆ ಪಂಪ್ ಮಾಡಲಾಗುತ್ತದೆ. ಈ ಘಟಕದಲ್ಲಿ ಸಂಗ್ರಹವಾಗುವ ಕೊಳಚೆ ನೀರನ್ನು ಶುದ್ದೀಕರಿಸಲಾಗುವುದು. ಕೊಳಚೆ ನೀರು ಶುದ್ದೀಕರಣ ಯಂತ್ರಗಳ ಸಾಮರ್ಥ್ಯವನ್ನು 3 ಎಂಎಲ್‌ಡಿಯಿಂದ 5 ಎಂಎಲ್‌ಡಿಗೆ ಹೆಚ್ಚಿಸಲಾಗಿದ್ದು, ಶುದ್ದೀಕರಿಸಿದ ನೀರನ್ನು ಮತ್ತೆ ನದಿಗೆ ಬಿಡಲಾಗುತ್ತದೆ' ಎಂದರು. ಕಾಮಗಾರಿ ತ್ವರಿತಗತಿಯಲ್ಲಿ ನಡೆಯುತ್ತಿದ್ದು, ನಿಗದಿತ ಅವಧಿಯಲ್ಲಿ ಮುಗಿಯಲಿದೆ. ಈ ಘಟಕ ಚಾಲನೆಗೊಂಡರೆ ನದಿಗೆ ಮಲಿನ ನೀರು ಸೇರುವುದನ್ನು ಸಂಪೂರ್ಣ ತಪ್ಪಿಸಬಹುದು ಎಂದು ಎಂ. ರಾಜಣ್ಣ ತಿಳಿಸಿದರು. ನಗರ ನೀರು ಸರಬರಾಜು ಮಂಡಳಿಯ ಕಾರ್ಯಪಾಲಕ ಎಂಜಿನಿಯರ್ ಪ್ರಭು, ಪುರಸಭೆ ಸದಸ್ಯ ಎಂ.ಎಲ್. ದಿನೇಶ್ ಇದ್ದರು.

## ವಿಪ್ರ ಕ್ರೀಡೋತ್ಸವದಲ್ಲಿ ನೂರಾರು ಮಂದಿ ಭಾಗಿ ಸಂಭ್ರಮ

• **ಉದಯವಾಹಿನಿ, ಮಡಿಕೇರಿ**

ಇಲ್ಲಿನ ಜನರಲ್ ತಿಮ್ಮಯ್ಯ ಕ್ರೀಡಾಂಗಣದಲ್ಲಿ ಭಾನುವಾರ ಕೊಡಗು ಬ್ರಾಹ್ಮಣ ವಿದ್ಯಾಭಿವೃದ್ಧಿ ನಿಧಿ ವತಿಯಿಂದ ನಡೆದ 3ನೇ ವರ್ಷದ 'ವಿಪ್ರ ಕ್ರೀಡೋತ್ಸವ'ದಲ್ಲಿ ನೂರಾರು ಮಂದಿ ಭಾಗಿಯಾಗಿ ಸಂಭ್ರಮಿಸಿದರು. ಸುಡುವ ಬಿಸಿಲಿನಲ್ಲೂ ಕ್ರಿಕೆಟ್ ಹಾಗೂ ಹಗ್ಗಜಗ್ಗಾಟ ಸ್ಪರ್ಧೆಗಳಲ್ಲಿ ಭಾಗಿಯಾದ ಅವರು, ಕ್ರೀಡಾ ಸ್ಫೂರ್ತಿ ಮೆರೆದರು. ಕ್ರಿಕೆಟ್‌ನಲ್ಲಿ ಒಟ್ಟು 8 ತಂಡಗಳು ಹಾಗೂ ಹಗ್ಗಜಗ್ಗಾಟದಲ್ಲಿ 9 ತಂಡಗಳು ಸೇರಿದಂತೆ ಸುಮಾರು 300ಕ್ಕೂ ಅಧಿಕ ಮಂದಿ ಭಾಗಿಯಾಗುವ ಮೂಲಕ ಕ್ರೀಡಾಕೂಟ ಗಮನ ಸೆಳೆಯುವಲ್ಲಿ ಸಫಲವಾಯಿತು. ಟೆನ್ನಿಸ್ ಬಾಲ್ ಕ್ರಿಕೆಟ್ ಪಂದ್ಯದಲ್ಲಿ 'ಕರಡ ಬುಲ್ಸ್' ತಂಡ ಚಾಂಪಿಯನ್ ಆಗಿ ಹೊರಹೊಮ್ಮಿತು. ರನ್ನರ್ಸ್ ಪ್ರಶಸ್ತಿಯನ್ನು 'ವಿರಾಜಪೇಟೆ ಈಗಲ್ಸ್' ತಂಡ ಪಡೆದುಕೊಂಡಿತು. ಅಂತಿಮ ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ 'ಕರಡ ಬುಲ್ಸ್' ತಂಡ ನಿಗದಿತ 6 ಓವರ್‌ಗಳಲ್ಲಿ 1 ವಿಕೆಟ್ ನಷ್ಟಕ್ಕೆ 103 ರನ್ ಗಳಿಸಿತು. ತಂಡದ ಪರ ಹರಿಪ್ರಸಾದ್ 5 ಸಿಕ್ಸರ್‌ಗಳೊಂದಿಗೆ 52 ಹಾಗೂ ಪ್ರದೀಪ್ 42 ರನ್‌ಗಳನ್ನು ಗಳಿಸಿದರು. ಇದನ್ನು ಬೆನ್ನಟ್ಟಿದ 'ವಿರಾಜಪೇಟೆ ಈಗಲ್ಸ್' ತಂಡ 6 ಓವರ್‌ಗಳಲ್ಲಿ 6 ವಿಕೆಟ್‌ಗಳನ್ನು ಕಳೆದುಕೊಂಡು 40 ರನ್‌ಗಳನಷ್ಟೇ ಗಳಿಸಿತು. 'ಕರಡ ತಂಡ'ವು ಈ ಮೂಲಕ ಸತತ 3ನೇ ಬಾರಿ ಚಾಂಪಿಯನ್ ಆಗಿ ಹೊರಹೊಮ್ಮಿತ್ತು ಜಿಲ್ಲೆಯ ಬ್ರಾಹ್ಮಣ ಮಹಿಳೆಯರಿಗೆ ಹಾಗೂ ಪುರುಷರಿಗೆ ನಡೆದ ಹಗ್ಗಜಗ್ಗಾಟದಲ್ಲಿ ಪುರುಷರ ವಿಭಾಗದಲ್ಲಿ 'ವಕೀಲ ಬ್ರಹ್ಮಾಸ್ ಮಡಿಕೇರಿ' ಹಾಗೂ ಮಹಿಳೆಯರ ವಿಭಾಗದಲ್ಲಿ 'ಗುಡ್ಡ ಹಿತ್ತು' ತಂಡ ಪ್ರಶಸ್ತಿ ಪಡೆದುಕೊಂಡಿತು.ಬ್ರಾಹ್ಮಣ ಕ್ಷೇಮಾಭಿವೃದ್ಧಿ ಸಂಘ ಗೋಣಿಕೊಪ್ಪ ಹಾಗೂ ಕುಶಾಲನಗರ, ಬ್ರಾಹ್ಮಣರ ಸಂಘ ಸೋಮವಾರಪೇಟೆ ಹಾಗೂ ವಿರಾಜಪೇಟೆ ಸಂಘಗಳು ಕ್ರೀಡಾಕೂಟಕ್ಕೆ ಸಹಕಾರ ನೀಡಿದವು.

## ರೈತ ಸಂಘದ ಸದಸ್ಯರ ಮೇಲೆ ಕೈ ಮುಖಂಡರಿಂದ ಹಲ್ಲೆ

• **ಉದಯವಾಹಿನಿ, ಕೋಲಾರ**

ಜಿಲ್ಲೆಯಲ್ಲಿ ಅರಣ್ಯ ಭೂಮಿ ಒತ್ತುವರಿ ತೆರವಿಗೆ ನಡೆಸಿದ್ದ ಪ್ರತಿಭಟನಾ ನಿರತ ರೈತ ಸಂಘದ ಮುಖಂಡರ ಮೇಲೆ ಕಾಂಗ್ರೆಸ್ ಮುಖಂಡರು ಹಲ್ಲೆ ನಡೆಸಿದ್ದಾರೆ.ಕೋಲಾರ ಜಿಲ್ಲೆಯ ಶ್ರೀನಿವಾಸಪುರದ ತಾಲ್ಲೂಕು ಕಚೇರಿ ಎದುರಿಗೆ ರೈತ ಸಂಘದಿಂದ ಪ್ರತಿಭಟನೆ ಹಮ್ಮಿಕೊಳ್ಳಲಾಗಿತ್ತು. ಈ ವೇಳೆ ಮಾಜಿ ಸ್ಪೀಕರ್ ರಮೇಶ್ ಕುಮಾರ್ ಬೆಂಬಲಿಗರು ಹಾಗೂ ರೈತ ಸಂಘದ ಮುಖಂಡರ ಮೇಲೆ ಗಲಾಟೆ ನಡೆದಿದೆ.ಕೆಲಕಾಲ ತಳ್ಳಾಟ ನೂಕಾಟ ನಡೆಸಿದ್ದು, ರೈತ ಮುಖಂಡ ನಾರಾಯಣಗೌಡ, ಮಂಜುನಾಥ್ ಸೇರಿದಂತೆ ಹಲವರ ಮೇಲೆ ಹಲ್ಲೆ ನಡೆಸಿದ್ದಾರೆ. ಪೊಲೀಸರ ಸಮ್ಮುಖದಲ್ಲಿಯೇ ಕಾಂಗ್ರೆಸ್ ಮುಖಂಡರು ಹಲ್ಲೆ ಮಾಡಿದ್ದಾರೆ. ಶ್ರೀನಿವಾಸಪುರ ಪೊಲೀಸ ಠಾಣಾ ವ್ಯಾಪ್ತಿಯಲ್ಲಿ ಈ ಘಟನೆ ನಡೆದಿದೆ. ಪ್ರತಿಭಟನೆ ಯಾಕೆ ಕೋಲಾರ ಜಿಲ್ಲೆಯ ಶ್ರೀನಿವಾಸಪುರದ ತಾಲ್ಲೂಕಿನ ಜಿನಗಲಕುಂಟೆ ಗ್ರಾಮದ ಬಳಿಯಿರುವ ಸರ್ವೇ ನಂ.1 ಮತ್ತು 2ರಲ್ಲಿ 122 ಎಕರೆಯನ್ನು ಮಾಜಿ ಸ್ಪೀಕರ್ ರಮೇಶ್ ಕುಮಾರ್ ಅರಣ್ಯ ಭೂಮಿ ಒತ್ತುವರಿ ಮಾಡಿದ್ದಾರೆ ಎಂದು ಆರೋಪಿಸಿದ್ದರು. ಏಳು ಜನ ಒತ್ತುವರಿದಾರರಲ್ಲಿ ರಮೇಶ್ ಕುಮಾರ್‌ಗೆ 61 ಎಕರೆ ಅರಣ್ಯ ಭೂಮಿ ಸೇರಿತ್ತು. ಈ ಹಿನ್ನೆಲೆ ನ.6ರಂದು ಕಂದಾಯ ಹಾಗೂ ಅರಣ್ಯ ಇಲಾಖೆಯಿಂದ ಸರ್ವೇ ನಡೆಸಲು ಸುಪ್ರೀಂ ಕೋರ್ಟ್ ಸೂಚನೆ ನೀಡಿತ್ತು. ಜೊತೆಗೆ ಸರ್ವೇ ಮಾಡಿ ವರದಿ ಸಲ್ಲಿಸುವಂತೆ ತಿಳಿಸಿತ್ತು.

## ದಿನ ಭವಿಷ್ಯ

| | | |
|---|---|---|
| ರಾಹುಕಾಲ | ಮಧ್ಯಾಹ್ನ | 03:00 ರಿಂದ 04:30 |
| ಗುಳಿಕ ಕಾಲ | ಮಧ್ಯಾಹ್ನ | 12:00 ರಿಂದ 01:30 |
| ಯಮಗಂಡ ಕಾಲ | ಬೆಳಿಗ್ಗೆ | 09:00 ರಿಂದ 10:30 |

**ಮೇಷ** ಹೊಸ ನೋಟ– ಹೊಸ ಉಡುಪು– ಹೊಸ ಸ್ನೇಹಿತರು ನೀವು ಇಂದು ನಿಮಗಾಗಿರಬಹುದು. ಕೆಲವರಿಗೆ ಸುಂದರ ಉಡುಗೊರೆಗಳು ಮತ್ತು ಹೂಗಳಿಂದ ತುಂಬಿದ ಪ್ರಣಯದ ಸಂಜೆ.

**ವೃಷಭ** ನಿಮ್ಮ ಮನೆಯ ಪರಿಸ್ಥಿತಿ ಸ್ವಲ್ಪ ಅನಿರೀಕ್ಷಿತವಾಗಿರುತ್ತದೆ. ನೀವು ಪ್ರಣಯದ ಮನೋಭಾವ ಹೊಂದಿರುತ್ತೀರಿ– ನೀವು ಮತ್ತು ನಿಮ್ಮ ಪ್ರೀತಿಪಾತ್ರರಿಗಾಗಿ ವಿಶೇಷ ಯೋಜನೆಗಳನ್ನು ಮಾಡಲು ಮರೆಯಬೇಡಿ.

**ಮಿಥುನ** ವಿಧಿಯನ್ನು ಆಧರಿಸದಿರಿ ಮತ್ತು ನಿಮ್ಮ ಆರೋಗ್ಯ ಸುಧಾರಿಸಲು ಪ್ರಯತ್ನಿಸಿ ಏಕೆಂದರೆ ಅದೃಷ್ಟವು ಒಂದು ಸೋಮಾರಿ ದೇವತೆಯಾಗಿದ್ದು ಇದು ಎಂದಿಗೂ ತಾನಾಗಿಯೇ ನಿಮ್ಮ ಬಳಿ ಬರುವುದಿಲ್ಲ.

**ಕರ್ಕಾಟಕ** ನೀವು ಯೋಗ ಧ್ಯಾನದೊಂದಿಗೆ ದಿನವನ್ನು ಪ್ರಾರಂಭಿಸಬಹುದು. ಇದನ್ನು ಮಾಡುವುದರಿಂದ ನಿಮಗೆ ಪ್ರಯೋಜನಕಾರಿಯಾಗುತ್ತದೆ ಮತ್ತು ದಿನವಿಡೀ ನಿಮ್ಮಲ್ಲಿ ಶಕ್ತಿ ಉಳಿದಿರುತ್ತದೆ.

**ಸಿಂಹ** ತುಂಬಾ ಚಿಂತೆ ಮಾನಸಿಕ ಶಾಂತಿಗೆ ಭಂಗ ತರಬಹುದು. ಆತಂಕ, ಉದ್ವೇಗದ ಪ್ರತೀ ತುಣುಕೂ ದೇಹದ ಮೇಲೆ ಪ್ರತಿಕೂಲ ಪರಿಣಾಮ ಬೀರುವುದರಿಂದ ಇದನ್ನು ತಡೆಯಿರಿ.

**ಕನ್ಯಾ** ದ್ವೇಷದ ಭಾವನೆ ದುಬಾರಿಯೆನಿಸಬಹುದು. ಇದು ನಿಮ್ಮ ಸಹನೆಯನ್ನು ಕುಂಠಿತಗೊಳಿಸುವುದಷ್ಟೇ ಅಲ್ಲದೇ ನಿಮ್ಮ ವಿವೇಚನಾಶಕ್ತಿಯನ್ನೂ ಕುಂಠಿತಗೊಳಿಸುತ್ತದೆ. ಸಂಬಂಧದಲ್ಲಿ ಶಾಶ್ವತ ಬಿರುಕನ್ನು ಸೃಷ್ಟಿಸುತ್ತದೆ.

**ತುಲಾ** ಈ ರಾಶಿಚಕ್ರದ ಉದ್ಯಮಿಗಳು, ಇಂದು ನಿಮ್ಮ ಬಳಿ ಹಣವನ್ನು ಕೇಳುತ್ತಾರೆ ಮತ್ತು ನಂತರ ಮರುಪಾವತಿ ಮಾಡದೇ ಇರುವಂತಹ ನಿಮ್ಮ ಮನೆಯ ಸದಸ್ಯರಿಂದ ದೂರವಿರಬೇಕು.

**ವೃಶ್ಚಿಕ** ಅನಾವಶ್ಯಕವಾಗಿ ವಾದ ಮಾಡಿ ನಿಮ್ಮ ಶಕ್ತಿಯನ್ನು ವ್ಯರ್ಥ ಮಾಡಬೇಡಿ. ನೀವು ಒಂದು ವಾದದಿಂದ ಏನನ್ನೂ ಪಡೆಯದಿದ್ದರೂ ಏನಾದರೂ ಕಳೆದುಕೊಳ್ಳುತ್ತೀರೆಂದು ನೆನಪಿಟ್ಟುಕೊಳ್ಳಿ.

**ಧನಸ್ಸು** ಉದ್ಯೋಗಕ್ಕೆ ಸಂಬಂಧಿಸಿರುವ ಜನರಿಗೆ ಇಂದು ಹಣದ ಬಹಳಷ್ಟು ಅಗತ್ಯವಿರುತ್ತದೆ ಆದರೆ ಹಿಂದಿನ ದಿನಗಳಲ್ಲಿ ಮಾಡಲಾಗಿರುವ ಅನಗತ್ಯ ಖರ್ಚುಗಳ ಕಾರಣದಿಂದಾಗಿ ಅವರ ಹತ್ತಿರ ಸಾಕಷ್ಟು ಹಣ ಇರುವುದಿಲ್ಲ.

**ಮಕರ** ಇಂದು ನೀವು ನಿಮ್ಮ ಹಣವನ್ನು ಧಾರ್ಮಿಕ ಚಟುವಟಿಕೆಗಳಲ್ಲಿ ಹೂಡಿಕೆ ಮಾಡಬಹುದು, ಇದರಿಂದ ನೀವು ಮಾನಸಿಕ ಶಾಂತಿಯನ್ನು ಪಡೆಯುವ ಸಂಪೂರ್ಣ ಸಾಧ್ಯತೆ ಇದೆ.

**ಕುಂಭ** ನೀವು ಮಾನಸಿಕವಾಗಿ ಮತ್ತು ದೈಹಿಕವಾಗಿ ಸ್ವಲ್ಪ ಸುಸ್ತನ್ನು ಅನುಭವಿಸಬಹುದು. ನಿಮ್ಮ ಚೈತನ್ಯವನ್ನು ಹೆಚ್ಚಿಸಲು ಸ್ವಲ್ಪ ವಿಶ್ರಾಂತಿ ಮತ್ತು ಪೌಷ್ಟಿಕ ಆಹಾರ ಬಹಳ ಸಹಾಯ ಮಾಡುತ್ತದೆ.

**ಮೀನ** ಕೋಪದ ಬಡಿದೆಬ್ಬಿಸುವಿಕೆ ವಾದ ಮತ್ತು ಘರ್ಷಣೆಗೆ ಕಾರಣವಾಗಬಹುದು. ಲೋನ್ ತೆಗೆದುಕೊಂಡಿರುವ ಜನರಿಗೆ ಲೋನ್‌ನ ಮೊತ್ತವನ್ನು ಮರುಪಾವತಿಸುವಲ್ಲಿ ತೊಂದರೆಗಳು ಉಂಟಾಗಬಹುದು.

# ಜೀವ ಹೋದರೆ ಹೋಗಲಿ, ಮೊಬೈಲ್ ಮಾತ್ರ ಬಿಡೆವು

• ಮೊಬೈಲ್‌ನಲ್ಲಿ ಮಾತಾಡುವುದರಲ್ಲಿ ತಲ್ಲೀನರಾಗಿ ಬೈಕ್ ಓಡಿಸುವುದು ಜಿಲ್ಲೆಯಲ್ಲಿ ಒಂದು ರೀತಿಯ ಫ್ಯಾಶನ್

• ಉದಯವಾಹಿನಿ ಬೀದರ್

ಜೀವ ಹೋದರೆ ಹೋಗಲಿ, ಮೊಬೈಲ್ ಮಾತ್ರ ಬಿಡೆವು, ಬೀದರ್ ಜಿಲ್ಲೆಯ ಬಹುತೇಕ ಬೈಕ್ ಸವಾರರ ಸಂಕಲ್ಪ ಇದು, ಮೊಬೈಲ್‌ನಲ್ಲಿ ಮಾತಾಡುವುದರಲ್ಲಿ ತಲ್ಲೀನರಾಗಿ ಬೈಕ್ ಓಡಿಸುವುದು ಜಿಲ್ಲೆಯಲ್ಲಿ ಒಂದು ರೀತಿಯ ಫ್ಯಾಶನ್ ಆದಂತಿದೆ.

**ಇದು ಬೈಕ್ ಸವಾರರ ಸಂಕಲ್ಪ**

ಬೀದರ್ ನಗರ ಸೇರಿದಂತೆ ಜಿಲ್ಲೆಯ ಯಾವುದೇ ಭಾಗಕ್ಕೆ ಹೋದರೂ ಈ ದೃಶ್ಯ ಸಾಮಾನ್ಯವಾಗಿ ಕಾಣಿಸುತ್ತದೆ. ಈ ವಯೋಮಾನದವರು, ಆ ವಯೋಮಾನದವರು ಎಂಬ ಭೇದಭಾವ ಇಲ್ಲ. ಎಲ್ಲಾ ವಯೋಮಾನದವರಿಗೂ ಬೈಕ್ ಓಡಿಸುತ್ತಲೇ ಮೊಬೈಲ್‌ನಲ್ಲಿ ಮಾತಾಡುವುದು ಒಂದು ರೀತಿಯ ಖುಷಿಯ ಸಂಗತಿ ಇದ್ದಂತಿದೆ. ರಸ್ತೆಗಳು ಖಾಲಿ ಇರಲಿ, ಟ್ರಾಫಿಕ್ ಹೆಚ್ಚಿರಲಿ ಅದ್ಯಾವುದನ್ನೂ ಅವರು ಲೆಕ್ಕಕ್ಕೆ ತೆಗೆದುಕೊಳ್ಳುವುದಿಲ್ಲ. ಇಷ್ಟೇಕೆ, ಹಿಂದಿನ ವಾಹನಗಳವರು ಎಷ್ಟೇ 'ಹಾರ್ನ್' ಹಾಕಿದರೂ ಅದರ ಬಗ್ಗೆ ತಲೆ ಕೆಡಿಸಿಕೊಳ್ಳುವುದಿಲ್ಲ.

ಈ ಎಲ್ಲಾ ಕಾರಣಗಳಿಂದಾಗಿ ಜಿಲ್ಲೆಯಲ್ಲಿ ಸಾಕಷ್ಟು ಅಪಘಾತಗಳು ಸಂಭವಿಸುತ್ತಿವೆ. ಆದರೆ, ಅದರಿಂದ ಪಾಠ ಕಲಿತು ಎಚ್ಚೆತ್ತುಕೊಂಡಂತೆ ಕಾಣಿಸುತ್ತಿಲ್ಲ. ಮೊಬೈಲ್‌ನಲ್ಲಿ ಮಾತನಾಡುತ್ತ ಬೈಕ್ ಓಡಿಸುವುದು ಕೂಡ ಸಂಚಾರ ನಿಯಮ ಉಲ್ಲಂಘನೆಯ ಭಾಗ. ಇದರ ಬಗ್ಗೆ ಗೊತ್ತಿದ್ದೂ ದ್ವಿಚಕ್ರ ವಾಹನ ಸವಾರರು ಮಾಡುತ್ತಿದ್ದಾರೆ.

ಇದರಿಂದ ಬೈಕ್ ಸವಾರರ ಪ್ರಾಣಕ್ಕೆ ಕಂಟಕ ಇದೆ. ಆದರೆ, ಏನೂ ತಪ್ಪು ಮಾಡದವರು ಕೂಡ ಇವರಿಂದ ತೊಂದರೆ ಅನುಭವಿಸುವಂಥ ಪರಿಸ್ಥಿತಿ ಇದೆ. ಅಧಿಕ ಜನದಟ್ಟಣೆ ಇರುವ ರಸ್ತೆಗಳಲ್ಲಿ ತಿರುವುಗಳಲ್ಲಿ ಹೀಗೆ ಎಲ್ಲೆಂದರಲ್ಲಿ ಇಂಥವರು ಓಡಾಡುವುದು ಬೀದರ್‌ನಲ್ಲಿ ಸಾಮಾನ್ಯ. ರಸ್ತೆ ನಿಯಮಗಳನ್ನು ಸರಿಯಾಗಿ ಪಾಲಿಸುತ್ತ ಓಡಾಡುತ್ತಿರುವವರಿಗೆ ಇವರಿಂದ ಹೆಚ್ಚಿನ ತೊಂದರೆ ಉಂಟಾಗುತ್ತಿದೆ.

ನಾನು ಆಫೀಸಿಗೆ ಕಾರು ತೆಗೆದುಕೊಂಡು ಹೋಗುತ್ತೇನೆ. ನಾನೇ ಡ್ರೈವ್ ಮಾಡುತ್ತೇನೆ. ಕೆಟ್ಟ ರಸ್ತೆ, ಹಂಪ್ಸ್‌ಗಳಿಗಿಂತ ಮೊಬೈಲ್‌ನಲ್ಲಿ ಮಾತನಾಡುತ್ತ ಬೇಕಾಬಿಟ್ಟಿ ಬೈಕ್ ಓಡಿಸುವವರಿಂದ ಬಹಳ ಕಿರಿಕಿರಿ ಅನಿಸುತ್ತದೆ. ಇದನ್ನು ತಡೆಯಲು ಪೊಲೀಸರು ಮುಂದಾಗಬೇಕು' ಎಂದು ಶಿವನಗರ ನಿವಾಸಿ ರಾಧಾ ಆಗ್ರಹಿಸಿದರು.


ಉದಯವಾಹಿನಿ ಚಿತ್ರ

ಬೇಕಿದೆ ಸಂಚಾರ ನಿಯಮದ ಪಾಠ ಬೀದರ್ ನಗರದಲ್ಲಿ ಪ್ರಮುಖ ವೃತ್ತಗಳಲ್ಲಿ ತಿರುವುಗಳಲ್ಲಿ ವಾಹನಗಳು ಬೇಕಾಬಿಟ್ಟಿ ಸಂಚರಿಸುತ್ತವೆ.

ಲೆಫ್ಟ್ ಅಂಡ್ ರೈಟ್ ಯಾವ ಕ್ರಮದಲ್ಲಿ ವಾಹನಗಳನ್ನು ಕೊಂಡೊಯ್ಯಬೇಕೆಂಬ ಅರಿವಿನ ಕೊರತೆ ಹೆಚ್ಚಿದಂತೆ ಕಾಣಿಸುತ್ತದೆ. ಇದನ್ನು ಜನ ಪ್ರಜ್ಞಾಪೂರ್ವಕವಾಗಿ ಮಾಡುತ್ತಾರೋ ಅಥವಾ ತಿಳಿಯದೆಯೋ ಮಾಡುತ್ತಾರೆ ಗೊತ್ತಿಲ್ಲ. ಆದರೆ ಸಂಚಾರ ನಿಯಮಗಳ ಪಾಲನೆ ಕುರಿತು ಜನಸಾಮಾನ್ಯರಲ್ಲಿ ಅರಿವು ಮೂಡಿಸಬೇಕಾದ ಅಗತ್ಯ ಎದ್ದು ಕಾಣಿಸುತ್ತದೆ.

ಇನ್ನು ಪ್ರಮುಖ ಜನದಟ್ಟಣೆ ಇರುವ ವೃತ್ತಗಳಲ್ಲಿ ಟ್ರಾಫಿಕ್ ಪೊಲೀಸರನ್ನು ನಿಯೋಜಿಸಿ ತಿರುವುಗಳಲ್ಲಿ ಹೇಗೆ ಡ್ರೈವ್ ಮಾಡಬೇಕೆಂಬ ಕನಿಷ್ಠ ತಿಳಿವಳಿಕೆ ಮೂಡಿಸಬೇಕಾದ ಅಗತ್ಯ ಎದ್ದು ಕಾಣಿಸು ಪ್ರದೀಪ್ ಗುಂಟಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ, ಬೀದರ್‌ಸಂಚಾರ ನಿಯಮ ಉಲ್ಲಂಘಿಸುವವರ ವಿರುದ್ಧ ಈಗಾಗಲೇ ಕಠಿಣ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ. ಇದನ್ನು ಇನ್ನಷ್ಟು ಬಿಗಿಗೊಳಿಸಲಾಗುವುದು.

> ನಾನು ನಿತ್ಯ ಬೈಕ್‌ನಲ್ಲಿಯೇ ಕೆಲಸಕ್ಕೆ ಹೋಗುತ್ತೇನೆ. 100ರಲ್ಲಿ ಶೇ 95ರಷ್ಟು ಜನ ಮೊಬೈಲ್‌ನಲ್ಲಿ ಮಾತಾಡುತ್ತಲೇ ಬೈಕ್ ಓಡಿಸುತ್ತಾರೆ. ಮೊಬೈಲ್‌ನಲ್ಲಿ ಮಾತಾಡುವುದರಲ್ಲಿ ಎಷ್ಟು ಮಗ್ನರಾಗಿರುತ್ತಾರೆ ಎಂದರೆ ಅವರ ಅಕ್ಕಪಕ್ಕ ಯಾವ ವಾಹನಗಳು ಬರುತ್ತಿವೆ ಎನ್ನುವುದು ಅವರಿಗೆ ಗೊತ್ತಾಗುವುದಿಲ್ಲ. ಅದರಲ್ಲೂ ತಿರುವುಗಳಲ್ಲಿ ಅವರು ಯಾವ ಕಡೆಗೆ ಹೋಗುತ್ತಾರೆ ಎನ್ನುವುದೇ ಗೊತ್ತಾಗುವುದಿಲ್ಲ. ತಿರುವಿನಲ್ಲಿ ಎಡಭಾಗದಿಂದ ಒಮ್ಮೆಲೇ ಬಲಭಾಗಕ್ಕೆ ಹೋಗುತ್ತಾರೆ. ಹಿಂದೆ ಯಾರಿದ್ದಾರೆ ಎನ್ನುವುದನ್ನೂ ನೋಡುವುದಿಲ್ಲ. ಇವರಿಂದ ಬೇರೆಯವರಿಗೆ ಬಹಳ ಸಮಸ್ಯೆಯಾಗುತ್ತಿದೆ. ಇದನ್ನು ತಡೆಯಲು ಪೊಲೀಸರು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು –ರಾಜೇಶ

**ಪ್ರಜ್ಞಾವಂತ ನಾಗರಿಕರ ಆರೋಪ**

ಹೋದ ವರ್ಷ ಅಂದಿನ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಚನ್ನಬಸವಣ್ಣ ಎಸ್.ಎಲ್.ಅವರೊಂದಿಗೆ ಏರ್ಪಡಿಸಿದ್ದ 'ಫೋನ್ ಇನ್' ಕಾರ್ಯಕ್ರಮದಲ್ಲೂ ಈ ಕುರಿತು ಸಾರ್ವಜನಿಕರು ಸಾಕಷ್ಟು ದೂರುಗಳನ್ನು ನೀಡಿದ್ದರು. ಬೈಕ್ ಸವಾರರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವ ಮಾತುಗಳನ್ನು ಆಡಿದ್ದರು. ಕೆಲವು ದಿನಗಳವರೆಗೆ ಅದು ಜಾರಿಗೂ ಬಂದಿತ್ತು. ಆದರೆ, ಮತ್ತೆ ರಾಜಾರೋಷವಾಗಿ ಉಲ್ಲಂಘಿಸಲಾಗುತ್ತಿದೆ. ಆದರೆ, ಸಂಚಾರ ಪೊಲೀಸರು ಯಾವುದೇ ಕ್ರಮ ಜರುಗಿಸುತ್ತಿಲ್ಲ ಎನ್ನುವುದು ಪ್ರಜ್ಞಾವಂತ ನಾಗರಿಕರ ಆರೋಪ.

## ಮೂಲಭೂತ ಸೌಕರ್ಯ ಕಲ್ಪಿಸುವಂತೆ ಗ್ರಾಮಸ್ಥರ ಆಗ್ರಹ

• ಉದಯವಾಹಿನಿ ಮುದ್ದೇಬಿಹಾಳ

ತಾಲ್ಲೂಕಿನ ಹಿರೇಮುರಾಳ ಗ್ರಾಪಂಯಲ್ಲಿ ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆ ಸಾಮಾಜಿಕ ಲೆಕ್ಕಪರಿಶೋಧನೆ 2023/25ನೇ ಸಾಲಿನ ವಿಶೇಷ ಗ್ರಾಮಸಭೆ ನಡೆಯಿತು ಸಭೆಯಲ್ಲಿ ಹಿರೇಮುರಾಳ ಗ್ರಾಪಂ ವ್ಯಾಪ್ತಿಯ ಗ್ರಾಮಗಳ ಗ್ರಾಮಸ್ಥರು ಸಭೆಯಲ್ಲಿ ತಮ್ಮ ಗ್ರಾಮಗಳಲ್ಲಿ ಮೂಲ ಭೂತ ಸೌಕರ್ಯ ಒದಗಿಸುವ ಕುರಿತು ಸುಧೀರ್ಘ ಚರ್ಚೆ ನಡೆಯಿತು 12 ಗಂಟೆಗೆ ಶುರುವಾದ ಸಭೆ ಮಧ್ಯಾಹ್ನ 3;30. ವರಗೆ ನಡೆಯಿತು.

ಸಭೆಯಲ್ಲಿ ಪಿಡಿಒ ಕೆ ಎಚ್ ಕುಂಬಾರ ಹಾಗೂ ಸಾಮಾಜಿಕ ಲೆಕ್ಕ ಪರಿಶೋಧಕ ಅಧಿಕಾರಿ ಚಿದಾನಂದ ಕೋಲಾರಿ ಸೇರಿದಂತೆ ಕೃಷಿ, ತೋಟಗಾರಿಕೆ ಶಿಶು ಅಭಿವೃದ್ಧಿ ಇಲಾಖೆಯ ಅಧಿಕಾರಿಗಳು ಗ್ರಾಮಸ್ಥರ ಪ್ರಶ್ನೆಗಳಿಗೆ ಉತ್ತರಿಸಿದರು

ಮುಖಂಡರಾದ ಆದೇಶ ನಾಗರತ್ತಿ, ತಿಪ್ಪಣ್ಣ ದೂಡಮನಿ, ಅಪ್ಪು ದನ್ನೂರ, ನಿಂಗಣ್ಣ ಜಾಲವಾದಿ, ಬಸವರಾಜ ಜೈನಾಪುರ, ಬಸವರಾಜ ಸರೂರ ಸೇರಿದಂತೆ ವಿವಿಧ ಗ್ರಾಮಗಳ ರೈತರು ಮುಖಂಡರು ತಮ್ಮ ಗ್ರಾಮಗಳಲ್ಲಿಯ ಅಂಗನವಾಡಿಗಳಿಗೆ ಮೂಲಭೂತ ಸೌಕರ್ಯ, ಹೂಲ ರಸ್ತೆ ಸುಧಾರಣೆ, ತೊಗರಿ ಬೆಳೆ ಹಾನಿಗೆ ಪರಿಹಾರ, ಮುಖ್ಯ ರಸ್ತೆಗಳ ಅಪೂರ್ಣ ಕಾಮಗಾರಿ ಪೂರ್ಣಗೊಳಿಸುವಂತೆ ಒತ್ತಾಯಿಸಿ ನೈಜ ಸಮಸ್ಯೆಗಳ ಕುರಿತು ಬೆಳಕು ಚೆಲ್ಲಿದರು ಸಭೆಯಲ್ಲಿ ಗ್ರಾಮಸ್ಥರಿಂದ ಅಹವಾಲು ಸ್ವೀಕರಿಸಲಾಯಿತು ಸವಿತಾ ಪಾಟೀಲ್ ವರದಿ ಮಂಡನೆ ಮಾಡಿದರು ಪ್ರಾಸ್ತಾವಿಕ ಚಿದಾನಂದ ಕೋಲಾರಿ ಮಾತನಾಡಿದರು ಸಭೆಯಲ್ಲಿ

193ಎನ್ ಆರ್ ಜಿ ಕಾಮಗಾರಿ ಹಾಗೂ 15 ಹಣಕಾಸು ಯೋಜನೆಯಲ್ಲಿ 28 ಕಾಮಗಾರಿಗಳನ್ನು ಅನುಷ್ಠಾನ ಗೊಳಿಸಲಾಯಿತು. ಸಭೆಯಲ್ಲಿ ಗ್ರಾಪಂ ಅಧ್ಯಕ್ಷ ದೇವೇಂದ್ರಪ್ಪ ಬೆಳ್ಳಿಕಟ್ಟಿ, ಉಪಾಧ್ಯಕ್ಷೆ ಗುಂಡಮ್ಮ ಮುಳವಾಡ, ನೋಡಲ್ ಅಧಿಕಾರಿ ಎ ಬಿ ಬಗಲಿ, ಗ್ರಾಮ ಲೆಕ್ಕಾಧಿಕಾರಿ ಸಿ ಬಿ ಚವ್ಹಾಣ, ತೋಟಗಾರಿಕೆ ಇಲಾಖೆಯ ವಿಲಾಸ ರಾಠೋಡ, ಜಿಪಂ ಇಂಜಿನಿಯರ್ ಬಿ ಎಂ ಹಳ್ಳೂರ, ಶಿಶು ಅಭಿವೃದ್ಧಿ ಮೇಲ್ವಿಚಾರಕಿ ಶಾರದಾ ಪೂಜಾರಿ,ಗ್ರಾಪಂ ಕಾರ್ಯದರ್ಶಿ ನಿಂಗಣ್ಣ ಬಿರಾದಾರ ಸೇರಿದಂತೆ ಗ್ರಾಪಂ ಸದಸ್ಯರು ಅಂಗನವಾಡಿ, ಆಶಾ ಕಾರ್ಯಕರ್ತೆಯರು ಗ್ರಾಪಂ ಸಿಬ್ಬಂದಿಗಳು ಉಪಸ್ಥಿತರಿದ್ದರು.


ಉದಯವಾಹಿನಿ ಚಿತ್ರ

> ಜಂಗಮುರಾಳ, ಅರೆಮುರಾಳ ಶಾಲೆಯ ಹೈಟೆಕ್ ಶೌಚಾಲಯ ನಾಮಫಲಕ್ಕೆ 3240 ಪಾವತಿಸಲಾಗಿದ್ದು ಪರಿಶೀಲಿಸಿದಾಗ ನಾಮಫಲಕವಿರದೆ ಗೋಡೆ ಬರಹವಿದ್ದ ಕಾರಣ ಮರಳಿ 2500 ರೂ ಭರಣ ಮಾಡಲು ಸೂಚಿಸಲಾಯಿತು, ನರೇಗಾದಲ್ಲಿ ಮೃತ ವ್ಯಕ್ತಿ ಕಾಶಪ್ಪಗೌಡ ಪಾಟೀಲ್ ಹೆಸರಿನಲ್ಲಿ 6. ದಿನದ ಕೂಲಿ ಮರು ಭರಣ, ನೆರಬೆಂಚಿ ದೊಡ್ಡ ಬಸಯ್ಯ ಸಂಗಯ್ಯಾ ಮೂಕಿಹಾಳ ಗ್ರಾಪಂ ಡಾಟಾ ಆಪರೇಟರ್ ಕೆಲಸ ಮಾಡುತ್ತಿದ್ದು ಇವರು ನರೇಗಾದಲ್ಲಿ 16 ದಿನ ಕೂಲಿ ಪಾವತಿಸಿದ್ದು ಅದನ್ನು ಮರು ಭರಣ ಮಾಡಲು ಲೆಕ್ಕ ಪರಿಶೋಧಕ ಚಿದಾನಂದ ಕೋಲಾರಿ ಸೂಚಿಸಿದರು.

## 200 ದಿನ ಕೆಲಸ ನೀಡಲು ಒತ್ತಾಯ

• ಉದಯವಾಹಿನಿ, ಚಿತ್ರದುರ್ಗ

ಮುಂಬರುವ ಕೇಂದ್ರ ಸರ್ಕಾರದ ಬಜೆಟ್‌ನಲ್ಲಿ ಉದ್ಯೋಗ ಖಾತ್ರಿ ಯೋಜನೆಗೆ 2 ಲಕ್ಷ ಕೋಟಿ ಹಣ ಮೀಸಲಿಡಬೇಕು. ಒಂದು ಕುಟುಂಬಕ್ಕೆ 200 ಮಾನವ ದಿನ ಕೆಲಸ ನಿಗದಿಗೊಳಿಸಬೇಕು.

ದಿನಕ್ಕೆ ಕನಿಷ್ಠ 600 ವೇತನ ನೀಡಬೇಕು ಎಂದು ಒತ್ತಾಯಿಸಿ ಗ್ರಾಮೀಣ ಕೂಲಿ ಕಾರ್ಮಿಕರ ಸಂಘಟನೆ ಸದಸ್ಯರು ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನೆ ನಡೆಸಿದರು.

**ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನೆ**

ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ಅಡಿ ಪ್ರತಿ ಕುಟುಂಬದ ಸದಸ್ಯರಿಗೆ 100 ಮಾನವ ದಿನಗಳ ಕೆಲಸದ ಗ್ಯಾರಂಟಿ ನೀಡಲಾಗಿದೆ. ಆದರೂ ಸಮರ್ಪಕವಾಗಿ ಕೆಲಸ ನೀಡುತ್ತಿಲ್ಲ ಈ ಯೋಜನೆಯಲ್ಲಿ ಹೆಚ್ಚಿನ ಸಂಖ್ಯೆಯ ತೊಡಗಿಕೊಂಡಿದ್ದಾರೆ. ನಗರಗಳಿಗೆ ವಲಸೆ ಹೋಗುವುದನ್ನು ತಪ್ಪಿಸುವುದಕ್ಕಾಗಿ ಮಾನವ ದಿನಗಳ ಸಂಖ್ಯೆಯನ್ನು 200ಕ್ಕೆ ಹೆಚ್ಚಳ ಮಾಡಬೇಕು. ಜೊತೆಗೆ ಸರಿಯಾದ ಸಮಯಕ್ಕೆ ಬಾಕಿ ಕೂಲಿ ಹಣವನ್ನು ನೀಡುತ್ತಿಲ್ಲ, ಬಾಕಿ ಹಣವನ್ನು ಕೂಡಲೇ ಬಿಡುಗಡೆ ಮಾಡಬೇಕು ಎಂದು ಪ್ರತಿಭಟನಕಾರರು ಆರೋಪಿಸಿದರು. ಕಾರ್ಮಿಕರು ಮರಣ ಹೊಂದಿದ ಸಂದರ್ಭದಲ್ಲಿ ಅವರ ಕುಟುಂಬ ಸದಸ್ಯರಿಗೆ 5 ಲಕ್ಷ ಪರಿಹಾರ ವಿತರಣೆ ಮಾಡಬೇಕು. ಕಳೆದ ಬಜೆಟ್‌ನಲ್ಲಿ ಉದ್ಯೋಗ ಖಾತ್ರಿ ಯೋಜನೆಯ ಅನುದಾನವನ್ನು ಕಡಿತಗೊಳಿಸಲಾಗಿದೆ.


ಉದಯವಾಹಿನಿ ಚಿತ್ರ

ಮುಂದಿನ ಬಜೆಟ್‌ನಲ್ಲಿ ಅನುದಾನವನ್ನು ಹೆಚ್ಚಳ ಮಾಡಬೇಕು. ಕೂಡಲೇ ಬೇಡಿಕೆ ಈಡೇರದಿದ್ದರೆ ಹೋರಾಟವನ್ನು ತೀವ್ರಗೊಳಿಸಲಾಗುವುದು ಎಂದು ಎಚ್ಚರಿಕೆ ನೀಡಿದರು. ಜಿಲ್ಲಾಧಿಕಾರಿ ಕಚೇರಿ ಸಿಬ್ಬಂದಿಗೆ ಮನವಿ ಪತ್ರ ನೀಡಲಾಯಿತು ಸಂಘಟನೆಯ ಕಾರ್ಯಕರ್ತರಾದ ತೇಜೇಶ್ವರಿ, ಎಚ್.ಬಸವರಾಜ್, ಆನಂದ, ಎಸ್.ನೇತ್ರಾವತಿ, ಕೆ.ವಿನುತಾ, ನಾಗರಾಜ, ಲಕ್ಷ್ಮಿ, ಮಂಜಪ್ಪ, ಶಿವಣ್ಣ ಹಾಜರಿದ್ದರು.

## ಜಮೀನು ವಿವಾದಕ್ಕೆ 2 ಕುಟುಂಬಗಳ ನಡುವೆ ಹೊಡೆದಾಟ : ಐವರಿಗೆ ಗಂಭೀರ ಗಾಯ

• ಉದಯವಾಹಿನಿ,ಬೆಳಗಾವಿ

ಜಮೀನು ವಿವಾದಕ್ಕೆ ಸಂಬಂಧಪಟ್ಟಂತೆ ಎರಡು ಕುಟುಂಬಗಳ ನಡುವೆ ಮಾರಕಾಸ್ತ್ರಗಳಿಂದ ಹೊಡೆದಾಟ ನಡೆದಿದ್ದು ಘಟನೆಯಲ್ಲಿ ಐವರಿಗೆ ಗಂಭೀರವಾಗಿ ಗಾಯಗಳಾಗಿರುವ ಘಟನೆ ಬೆಳಗಾವಿ ಜಿಲ್ಲೆಯ ರಾಯಭಾಗ ತಾಲ್ಲೂಕಿನ ಖನದಾಳ ಎಂಬ ಗ್ರಾಮದಲ್ಲಿ ನಡೆದಿದೆ. ಎರಡು ಕುಟುಂಬಗಳ ನಡುವೆ ಜಮೀನು ವಿವಾದಕ್ಕೆ ಸಂಬಂಧಪಟ್ಟಂತೆ ಗಲಾಟೆ ನಡೆಯಿತು. ಈ ವೇಳೆ ಎರಡು ಕುಟುಂಬದ ಸದಸ್ಯರು ಮಾರಕಸ್ತ್ರಗಳಿಂದ ಪರಸ್ಪರ ಹೊಡೆದಾಡಿಕೊಂಡಿದ್ದಾರೆ. ಈ ಒಂದು ಘಟನೆಯಲ್ಲಿ ಎರಡು ಕುಟುಂಬಗಳ ಸದಸ್ಯರ ಪೈಕಿ ಒಟ್ಟು 5 ಜನರು ಗಂಭೀರವಾಗಿ ಗಾಯಗೊಂಡಿದ್ದು, ಕೂಡಲೇ ಅವರನ್ನು ಮುಗಳಖೋಡ ಸರ್ಕಾರಿ ಆಸ್ಪತ್ರೆಗೆ ದಾಖಲಿಸಲಾಗಿದೆ. ಗಾಯಳುಗಳನ್ನ ರಂಗಪ್ಪ ನಾಯಿಕ, ಪ್ರಹ್ಲಾದ್ ನಾಯಿಕ, ಲಕ್ಷ್ಮೀಬಾಯಿ ನಾಯಿಕ, ಗುರುಸಿದ್ದಪ್ಪ ನಾಯಿಕ, ಸುಪ್ರೀತ ನಾಯಿಕ ಗಾಯಗೊಂಡ ಗಾಯಾಳುಗಳು ತಕ್ಷಣ ಎಲ್ಲರನ್ನು ಮುಗಳಖೋಡ ಸರಕಾರಿ ಆಸ್ಪತ್ರೆಗೆ ದಾಖಲಿಸಿ ಗಾಯಾಳುಗಳನ್ನು ಚಿಕಿತ್ಸೆ ಕೊಡಿಸಲಾಗಿದೆ. ಗೋಪಾಲ ನಾಯಿಕ, ಸುರೇಶ ನಾಯಿಕ ಎಂಬವರು ಹಲ್ಲೆ ನಡೆಸಿರುವ ಆರೋಪಗಳು ಕೇಳಿ ಬಂದಿವೆ.

## ಆತ್ಮಹತ್ಯೆಗೆ ಶರಣಾದ 10 ವರ್ಷದ ಬಾಲಕ

• ಉದಯವಾಹಿನಿ, ಶಿವಮೊಗ್ಗ

ಮಕ್ಕಳಿಗೆ ಪೋಷಕರು ಬುದ್ಧಿವಾದ ಹೇಳಲೂ ಯೋಚಿಸಬೇಕಾದ ಸ್ಥಿತಿ ಬಂದಿದೆ. ಇತ್ತೀಚೆಗೆ ಕ್ಷುಲ್ಲಕ ಕಾರಣಗಳಿಗೂ ಮಕ್ಕಳು ದುಡುಕಿನ ನಿರ್ಧಾರಗಳನ್ನು ಕೈಗೊಂಡು ಬದುಕನ್ನೇ ಅಂತ್ಯಗೊಳಿಸಿಕೊಳ್ಳುತ್ತಿರುವ ಪ್ರಕರಣಗಳು ಹೆಚ್ಚುತ್ತಿವೆ. ಇಲ್ಲೊರ್ವ ಬಾಲಕ ತಂದೆ–ತಾಯಿ ಬೈದರೆಂಬ ಕಾರಣಕ್ಕೆ ಆತ್ಮಹತ್ಯೆಗೆ ಶರಣಾಗಿರುವ ಘಟನೆ ನಡೆದಿದೆ. ಶಿವಮೊಗ್ಗದ ತೀರ್ಥಹಳ್ಳಿ ತಾಲ್ಲೂಕಿನ ಬೆಜ್ಜವಳ್ಳಿ ಗ್ರಾಮದಲ್ಲಿ 10 ವರ್ಷದ ಬಾಲಕ ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ಪ್ರೀತಮ್ (10) ಸಾವಿಗೆ ಶರಣಾದ ಬಾಲಕ. ಪೋಷಕರು ಬೈದರೆಂಬ ಕಾರಣಕ್ಕೆ ಮನೆಯಲ್ಲಿ ಯಾರೂ ಇಲ್ಲದ ವೇಳೆ ನೇಣಿಗೆ ಕೊರಳೊಡ್ಡಿದ್ದಾನೆ. ಮಾಳೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಹುಬ್ಬಳ್ಳಿಯಲ್ಲೂ ಬಾಣಂತಿಯರ, ಶಿಶುಗಳ ಮರಣ ಮೃದಂಗ ಬೆಳಕಿಗೆ

• ಉದಯವಾಹಿನಿ, ಹುಬ್ಬಳ್ಳಿ

ಬಳ್ಳಾರಿಯ ಆಸ್ಪತ್ರೆಯಲ್ಲಿ ಕಳೆದ ಒಂದು ತಿಂಗಳಲ್ಲಿ ಆರು ಜನ ಬಾಣಂತಿಯರು ಸಾವನ್ನಪ್ಪಿದ್ದರು. ಈ ಒಂದು ಪ್ರಕರಣ ಇನ್ನೂ ತನಿಖೆಯ ಹಂತದಲ್ಲಿದೆ. ಅಲ್ಲದೆ ಇತ್ತೀಚಿಗೆ ಬೆಳಗಾವಿಯಲ್ಲಿ ಕಳದ ಆರು ತಿಂಗಳಲ್ಲಿ 29 ಬಾಣಂತಿಯರು ಹಾಗೂ 322 ಶಿಶುಗಳು ಮೃತಪಟ್ಟಿರುವ ಸಂಗತಿ ಬಯಲಾಗಿತ್ತು. ಇದೀಗ ಹುಬ್ಬಳ್ಳಿಯ ಕಿಮ್ಸ್ ಆಸ್ಪತ್ರೆಯಲ್ಲಿ ಕೂಡ ಬಾಣಂತಿಯರ ಹಾಗೂ ಶಿಶುಗಳ ಸಾವಾಗಿರುವುದು ಬೆಳಕಿಗೆ ಬಂದಿದೆ.

ಹೌದು ಈ ಕುರಿತಂತೆ ಕಿಮ್ಸ್ ಆಸ್ಪತ್ರೆಯ ನಿರ್ದೇಶಕ ಡಾ.ಎಸ್.ಎಫ್. ಕಮ್ಮಾರ್ ಮಾಧ್ಯಮಗಳ ಜೊತೆ ಮಾತನಾಡಿ, ಜನವರಿಯಿಂದ ಈವರೆಗೆ 33 ಗರ್ಭಿಣಿಯರು, 148 ಶಿಶುಗಳ ಸಾವಾಗಿದೆ. ಬೇರೆ ಬೇರೆ ಕಾರಣಗಳಿಂದ ಗರ್ಭಿಣಿಯರು, ನವಜಾತ ಶಿಶುಗಳ ಸಾವಾಗಿದೆ. ಆದರೆ ಡ್ರಗ್ ಡಿಯಾಕ್ಟ್ ನಿಂದ ಯಾರೂ ಮೃತಪಟ್ಟಿಲ್ಲ. ನ್ಯಾಷನಲ್ ಲೇವಲ್ ಡೆತ್ ರೇಟ್ ಹೇಗಿದೆ, ಹಾಗೆ ಹುಬ್ಬಳ್ಳಿ ಕಿಮ್ಸ್ ನಲ್ಲಿ ಡೆತ್ ರೇಟ್ ಶೇಕಡ 3 ರಿಂದ 4 ರಷ್ಟಿದೆ ಎಂದು ಸ್ಪಷ್ಟನೆ ನೀಡಿದ್ದಾರೆ.

ಕಿಮ್ಸ್‌ನಲ್ಲಿ ಡ್ರಗ್ ರಿಯಾಕ್ಟ್‌ನಿಂದ ಮೃತಪಟ್ಟಿರುವ ವರದಿಯಾಗಿಲ್ಲ, ಆದರೂ ಮುಂಜಾಗ್ರತಾ ಕ್ರಮವಾಗಿ ಸಮಿತಿ ರಚನೆ ಮಾಡಿದ್ದೇವೆ. ಸೆಪ್ಟೆಂಬರ್‌ನಲ್ಲೂ ಅದೇ ಬ್ರಾಂಡ್‌ನ ಸಲಾಯಿನ್ ಬಳಸಲಾಗಿದೆ. ಎಲ್ಲಾ ವಾರ್ಡ್‌ಗಳಲ್ಲಿರುವ ರೋಗಿಗಳಿಗೆ ಸಲಾಯಿನ್ ನೀಡಲಾಗಿತ್ತು. ಸಲಾಯಿನ್ ಬಳಕೆಯಿಂದ ಯಾವ ರೋಗಿಯೂ ಮೃತಪಟ್ಟಿಲ್ಲ.ಯಾರಿಗಾದರೂ ಸಮಸ್ಯೆ ಆಗಿದ್ಯಾ ಎಂಬ ಬಗ್ಗೆ ಮಾಹಿತಿ ಸಂಗ್ರಹಕ್ಕೆ ಸಮಿತಿ ರಚಿಸಲಾಗಿದೆ ಎಂದಿದ್ದಾರೆ.

## 4.96 ಲಕ್ಷ ದೋಚಿದ್ದ ಐವರ ಬಂಧನ

• ಉದಯವಾಹಿನಿ, ಬೀದರ್

ಭಾಲ್ಕಿ ತಾಲ್ಲೂಕಿನ ಹಲಬರ್ಗಾ ಗ್ರಾಮದ ಸಿದ್ದೇಶ್ವರ ಪೆಟ್ರೋಲ್ ಬಂಕ್‌ನಲ್ಲಿ ಕೆಲಸ ಮಾಡುತ್ತಿದ್ದ ಜ್ಞಾನೇಶ್ವರ ಮೇತ್ರ ಅವರ ಬೈಕ್‌ಗೆ ಕಾರಿನಿಂದ ಡಿಕ್ಕಿ ಹೊಡೆದು 4.96 ಲಕ್ಷ ದೋಚಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ಐವರು ಆರೋಪಿಗಳನ್ನು ಬಂಧಿಸಲಾಗಿದೆ.

ಜ್ಞಾನೇಶ್ವರ ಮೇತ್ರೆ ಸ್ನೇಹಿತರ ಜೊತೆಗೂಡಿ ಕೃತ್ಯ ಎಸಗಿರುವುದು ಬೆಳಕಿಗೆ ಬಂದಿದೆ' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪ್ರದೀಪ ಗುಂಟಿ ತಿಳಿಸಿದ್ದಾರೆ. ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು,'ಹಲಬರ್ಗಾದ ಸಿದ್ದೇಶ್ವರ ಪೆಟ್ರೋಲ್ ಬಂಕ್‌ನಲ್ಲಿ ಕೆಲಸ ಮಾಡುತ್ತಿದ್ದ ಜ್ಞಾನೇಶ್ವರ ಮೇತ್ರ, ಬೀದರ್‌ನ ಶಿವನಗರದ ಎಸ್‌ಬಿಐ ಬ್ಯಾಂಕ್ ಖಾತೆಗೆ ಹಣ ತುಂಬಲು ಹೋಗುತ್ತಿರುವಾಗ ಹಿಂದಿನಿಂದ ಬಂದ ಕಾರು ಡಿಕ್ಕಿ ಹೊಡೆದು, ಕಾರಿನಲ್ಲಿದ್ದವರು ಕಣ್ಣಿಗೆ ಖಾರದ ಪುಡಿ ಎರಚಿ ಯಾರೋ ಹಣ ದೋಚಿಕೊಂಡು ಪರಾರಿಯಾಗಿದ್ದಾರೆ' ಎಂದು ಧನ್ನೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿತ್ತು' ಎಂದು ಹೇಳಿದರು. 'ತನಿಖೆ ವೇಳೆ ಜ್ಞಾನೇಶ್ವರ ಮೇತ್ರೆ ಸ್ನೇಹಿತರ ಜೊತೆ ಕೂಡಿ ಕೃತ್ಯ ಎಸಗಿರುವುದು ಬೆಳಕಿಗೆ ಬಂದಿದೆ. ಜ್ಞಾನೇಶ್ವರ ಕೆಲಸ ಮಾಡುವ ಪೆಟ್ರೋಲ್ ಬಂಕ್‌ನಲ್ಲಿ ಪ್ರತಿ ಶನಿವಾರ ಹಣವನ್ನು ಬೀದರ್‌ನ ಶಿವನಗರದ ಎಸ್‌ಬಿಐ ಬ್ಯಾಂಕ್ ಖಾತೆಗೆ ಜಮಾ ಮಾಡುವ ಬಗ್ಗೆ ಗೆಳೆಯರೊಂದಿಗೆ ಹಂಚಿಕೊಂಡಿದ್ದಾನೆ. ಎಲ್ಲರೂ ಸೇರಿ ಯೋಜನೆ ರೂಪಿಸಿ ಹಣ ದೋಚಿದ್ದಾರೆ' ಎಂದರು. ತಂಡದಲ್ಲಿ ಹೆಚ್ಚುವರಿ ಪೊಲೀಸ್ ಅಧೀಕ್ಷಕ ಮಹೇಶ ಮೇಘಣ್ಣನವರ, ಹೆಚ್ಚುವರಿ ಪೊಲೀಸ್ ಅಧೀಕ್ಷಕ ಚಂದ್ರಕಾಂತ ಪೂಜಾರಿ, ಭಾಲ್ಕಿಯ ಪೊಲೀಸ್ ಉಪಾಧೀಕ್ಷಕ ಶಿವಾನಂದ ಪವಾಡಶೆಟ್ಟಿ, ಗುರುಪಾದ ಬಿರಾದಾರ, ಧನ್ನೂರು ಪಿಎಸ್‌ಐ ವಿಶ್ವಾರಾಧ್ಯ, ಸಿಪಿಸಿಗಳಾದ ಗುರುನಾಥ, ಶಾಮರಾವ್, ಪ್ರಶಾಂತರೆಡ್ಡಿ, ಹರ್ಷವರ್ಧನ ಶಿವಶಂಕರ ಇದ್ದರು ಎಂದು ಹೇಳಿದರು.



ಉದಯವಾಹಿನಿ ಚಿತ್ರ


## ಡಿ. 12ರಂದು ವಕ್ಫ್ ಮಂಡಳಿ ವಿರುದ್ಧ ಬೃಹತ್ ಪ್ರತಿಭಟನೆ

• ಉದಯವಾಹಿನಿ ಸಿಂಧನೂರು

ಸಿಂಧನೂರ ನಗರದ ವಿವಿಧ ಕಡೆಗೆ ಹಾಗೂ ವಿವಿಧ ಗ್ರಾಮಗಳಲ್ಲಿ ಹೊಲ ಮನೆ ಹಾಗೂ ದೇವಸ್ಥಾನ ಸೇರಿದಂತೆ ಹಲವು ಪಹಣಿಗಳಲ್ಲಿ ವಕ್ಫ್ ಬೋರ್ಡ್ ಹೆಸರು ಎಂಬ ಹೆಸರು ಈಗಾಗಲೇ ನಮ್ಮ ನಮ್ಮ ದಾಖಲೆಗಳು ಸೃಷ್ಟಿಯಾಗಿದ್ದನ್ನು ಖಂಡಿಸಿ. ನಗರ ಹಾಗೂ ಗ್ರಾಮೀಣ ಪ್ರದೇಶದ ಎಲ್ಲಾ ಸಂತ್ರಸ್ತರ ಹೋರಾಟ ಸಮಿತಿ ವತಿಯಿಂದ ಎಪಿಎಂಸಿ ಗಣೇಶ ದೇವಸ್ಥಾನದಿಂದ ತಹಶೀಲ್ದಾರ್ ಕಛೇರಿ ವರಿಗೆ ಡಿ 12 ರಂದು ಬೃಹತ್ ಹೋರಾಟವನ್ನು ಹಮ್ಮಿಕೊಂಡಿದ್ದು. ಆದ್ದರಿಂದ ಎಲ್ಲಾ ಸಂತ್ರಸ್ಥರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಹೋರಾಟವನ್ನು ಯಶಸ್ವಿಗೊಳಿಸಬೇಕೆಂದು ಸರ್ವೋತ್ತಮ ರೆಡ್ಡಿ ಅವರು ಮನವಿ ಮಾಡಿದರು.

ನಗರದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು ತಾಲ್ಲೂಕಿನ ವಿವಿಧ ಗ್ರಾಮಗಳಲ್ಲಿ ಇರುವಂತಹ ನೂರಾರು ಎಕರೆ ರೈತರು ಭೂಮಿಗಳಿಗೊ ವಕ್ಫ್ ಬೋರ್ಡ್ ದಾಳಿ ಮಾಡಿದ್ದು. ವಕ್ಫ್ ನೋವು ಮಾಡದೂ ಹಿಂದೂ ಮುಸ್ಲಿಂ ದಲಿತ ಹಿಂದುಳಿದ ಎಲ್ಲಾ ವರ್ಗದ ರೈತರು ಈ ಹೋರಾಟದಲ್ಲಿ ಇರುತ್ತಾರೆ ಎಂದು ಹೇಳಿದರು. ಸಿಂಧನೂರು ನಗರದ ಪಿಡಬ್ಲ್ಯೂಡಿ ಕ್ಯಾಂಪಿನ ಡಾಲರ್ಸ್ ಕಾಲೋನಿ. ಅಯ್ಯಪ್ಪಸ್ವಾಮಿ ಸುತ್ತಲೂ ಇರುವ ಜಾಗ ಖಾದಿರ್ ಕಾಲೋನಿ ಸೇರಿದಂತೆ ವಿವಿಧ ವಕ್ಫ್ ಮಂಡಳಿ ಹೆಸರಿನಲ್ಲಿ ಎಂಟ್ರಿ ಮಾಡಿದ್ದಾರೆ. ಹಿಂದೆ ಜಾಗ ಖರೀದಿ ಮಾಡುವಾಗ ವಕ್ಫ್ ಮಂಡಳಿ ಹೆಸರು ಅದು ಯಾವುದೋ ಹೆಸರು ಇರಲಿಲ್ಲ. ಈಗ ಸುಮಾರು ತೆಗೆದುಕೊಂಡು 19–20 ವರ್ಷ ಕಳೆದು ಈಗ ವಕ್ಫ್ ಮಂಡಳಿ ಹೆಸರು ಇದೆ ಎಂದರೆ ನಾವು ಎಲ್ಲಿಗೆ ಹೋಗಬೇಕು ಎಂದು ನಾವೆಲ್ಲ ಸಂತ್ರಸ್ಥರು ನೋವಿನಲ್ಲಿ ಇದ್ದೇವೆ ಸಿಂಧನೂರು ನಲ್ಲಿ 2172 ಎಕರೆ ಇದ್ದು. 732 ಜಾಗ ಗುಂಟೆ ಜಮೀನು ಇದ್ದು. ಇದರ ಪೈಕಿ 300ಜನರು ಸಂತ್ರಸ್ಥರು ಇದ್ದಾರೆ. ಈಗಾಗಲೇ ಈ ಹೋರಾಟಕ್ಕೆ ವಿವಿಧ ಮಠಾಧೀಶರ ಶರಣರು ಹಾಗೂ 500–100 ಜನರು ಭಾಗವಹಿಸಲಿದ್ದಾರೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ, ಜಿ. ಕೆ ವಿಶ್ವನಾಥ್ ಚೌಧರಿ ದೊಡ್ಡ ಬಸನಗೌಡ, ಗುತ್ತೇದಾರ್ ಬಸವರಾಜ ಹಿರೇಮಠ ಸಂಗ್ರಾಮ ಕಿಲ್ಲೆದ್ ಸೇರಿದಂತೆ ಇತರರು ಇದ್ದರು.



ಉದಯವಾಹಿನಿ ಚಿತ್ರ

> ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಶೇಖರಿಸಿ ಹಂಚಿಕೆ ಮಾಡಿರುವ ಭೂಮಿಯು ಮತ್ತೊಂದು ಭಾಗ ವಾಗಿದೆ. ಗೋಮಾಳಗಳ ಗಾವಠಾಣಾಗಳು ಮತ್ತು ಆಲಯಗಳ ಸಹ ವಕ್ಫ್ ಮಂಡಳಿ ಮಾಡುತ್ತದೆ. ಸರ್ಕಾರಗಳು ಕಣ್ಣು ಮುಚ್ಚಿಕೊಂಡು ವಕ್ಫ್ ಪರವಾಗಿ ಆದೇಶವನ್ನು ನೀಡುತ್ತದೆ. ಆಗಾಗಿ ಕೊಡಲೇ ರೈತರು ನೆರವಿಗೆ ಈ ಸರ್ಕಾರ ಬರಬೇಕಾಗಿದೆ –ಸರ್ವೋತ್ತಮ ರೆಡ್ಡಿ

## ಚಿಕ್ಕಮಗಳೂರಲ್ಲಿ ಅಪಾಯಕಾರಿ ಹವಳದ ಹಾವು ಪತ್ತೆ

• ಉದಯವಾಹಿನಿ, ಚಿಕ್ಕಮಗಳೂರು

ಉರಗಗಳ ಸಂತತಿಯಲ್ಲೇ ಅಪರೂಪದ ಮೋಸ್ಟ್ ಡೆಂಜರ್ ಕೋರಲ್ ಸ್ನೇಕ್ ಕಳಸದ ಕಲ್ಮಕ್ಕಿ ಗ್ರಾಮದಲ್ಲಿ ಪತ್ತೆಯಾಗಿದೆ. ದೇಹದ ಮೇಲೆ ಕಪ್ಪು, ಕೆಳಭಾಗದಲ್ಲಿ ಕೆಂಪು ಬಣ್ಣದಿಂದ ಕೂಡಿರುವ ಈ ಹಾವನ್ನು, ಮಲೆನಾಡಲ್ಲಿ ರಕ್ತಕನ್ನಡಿ ಹಾವು, ಹಪ್ಪಟೆ, ಹವಳದ ಹಾವು ಎಂದು ಕರೆಯುತ್ತಾರೆ. ಕಳಸದ ಉರಗತಜ್ಞ ರಿಜ್ವಾನ್ ಎಂಬವರ ಮನೆ ಅಂಗಳದಲ್ಲಿ ಈ ಹಾವು ಕಾಣಿಸಿಕೊಂಡಿದೆ. ಈ ಹಾವು ಕಡಿದರೆ ಸಾಯೋದು ಕಡಿಮೆ, ಆದರೆ ದೇಹಕ್ಕೆ ನಾನಾ ಸಮಸ್ಯೆಗಳನ್ನು ತಂದು ಒಡ್ಡುತ್ತದೆ. ಈ ಹಾವಿನ ಹಲ್ಲು ಹೆಚ್ಚಾಗಿ ಬಾಗಿರುವುದರಿಂದ ವಿಷ ದೇಹ ಸೇರುವು ಕಡಿಮೆ. ವಿಷ ದೇಹ ಸೇರಿದರೆ ಹಲವಾರು ಸಮಸ್ಯೆಗಳು ಎದುರಾಗಲಿವೆ ಎಂದು ಉರಗ ತಜ್ಞ ರಿಜ್ವಾನ್ ತಿಳಿಸಿದ್ದಾರೆ. ಪಶ್ಚಿಮ ಘಟ್ಟಗಳ ಭಾಗದಲ್ಲಿ ಮಾತ್ರ ಈ ಅಪರೂಪದ ಹಾವುಗಳು ಕಾಣಸಿಗುತ್ತವೆ. ಇವು ನಿಶಾಚಾರಿಯಾಗಿದ್ದು, ರಾತ್ರಿ ವೇಳೆ ಹೆಚ್ಚಾಗಿ ಚಟುವಟಿಕೆಯಿಂದ ಇರುತ್ತವೆ.


ಉದಯವಾಹಿನಿ ಚಿತ್ರ

# ಸರ್ಫೇಸಿ ಕಾಯ್ದೆ: ಕಾಫಿ ಬೆಳೆಗಾರರಲ್ಲಿ ಮುಗಿಯದ ಗೊಂದಲ

• ಸರ್ಫೇಸಿ ಕಾಯ್ದೆ ವ್ಯಾಪ್ತಿಗೆ ಕಾಫಿ ಕೃಷಿ ಬರುವುದಿಲ್ಲ : ಕೇಂದ್ರ ವಾಣಿಜ್ಯ ಸಚಿವ ಪಿಯೂಷ್ ಗೋಯಲ್

• ಉದಯವಾಹಿನಿ, ಚಿಕ್ಕಮಗಳೂರು

ಸರ್ಫೇಸಿ ಕಾಯ್ದೆಯು ಕಾಫಿ ಬೆಳೆಗಾರರ ಪಾಲಿಗೆ ಕಂಟಕವಾಗಿ ಕಾಡುತ್ತಿದ್ದು, ಕಾಫಿ ಕೃಷಿ ಈ ವ್ಯಾಪ್ತಿಗೆ ಒಳಪಡುವುದಿಲ್ಲ ಎಂಬ ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವರ ಹೇಳಿಕೆ ಬೆಳೆಗಾರರಲ್ಲಿ ಕೊಂಚ ನಿಟ್ಟುಸಿರು ಬಿಡುವಂತಾಗಿದೆ. ಆದರೆ ಕೇಂದ್ರ ಸರ್ಕಾರ ಈ ಬಗ್ಗೆ ಬ್ಯಾಂಕುಗಳಿಗೆ ನಿರ್ದೇಶನ ನೀಡುವ ತನಕ ಬೆಳೆಗಾರರು ಗೊಂದಲ ಮುಂದುವರಿಯಲಿದೆ. ಮೊಕದ್ದಮೆಯೊಂದರ ತೀರ್ಪಿನ ಆಧಾರದಲ್ಲಿ ಎಲ್ಲಾ ಎಲ್ಲಾ ಕಾಫಿ ಬೆಳೆ ಮೇಲಿನ ಸಾಲಕ್ಕೂ ಬ್ಯಾಂಕ್‌ಗಳು ಸರ್ಫೇಸಿ ಕಾಯ್ದೆಯನ್ನು ಅನ್ವಯ ಮಾಡುತ್ತಿವೆ.

ಇ–ಹರಾಜು ಮೂಲಕ ಕಾಫಿ ತೋಟಗಳನ್ನು ಹರಾಜು ಮಾಡಲು ಸಜ್ಜಾಗಿವೆ. ಬೆಳೆಗಾರರಿಗೆ ನೋಟಿಸ್ ಸಹ ನೀಡಲಾಗಿದ್ದು, ತೋಟಗಳು ಕೈತಪ್ಪುವ ಆತಂಕ ಬೆಳೆಗಾರರನ್ನು ಕಾಡುತ್ತಿದೆ. ಇದರ ವಿರುದ್ಧ ಕಾಫಿ ಬೆಳೆಗಾರರು ನಿರಂತರವಾಗಿ ಹೋರಾಟ ನಡೆಸುತ್ತಿದ್ದಾರೆ.

ಚಿಕ್ಕಮಗಳೂರು, ಹಾಸನ ಹಾಗೂ ಕೊಡಗಿನಲ್ಲಿ ಅನೇಕ ಪ್ರತಿಭಟನಾ ಸಭೆಗಳು ನಡೆದಿವೆ. ಮೂಡಿಗೆರೆಯಲ್ಲೂ ಕೆನರಾ ಬ್ಯಾಂಕ್ ಎದುರು ಧರಣಿ, ಮಂಗಳೂರಿನಲ್ಲೂ ಕೆನರಾ ಬ್ಯಾಂಕ್ ವಿರುದ್ಧ ಪ್ರತಿಭಟನೆ ನಡೆದಿತ್ತು.

ಸಂಸದ ಕೋಟ ಶ್ರೀನಿವಾಸ ಪೂಜಾರಿ ಅವರ ಮಧ್ಯ ಪ್ರವೇಶಿಸಿ ಭರವಸೆ ನೀಡಿದ್ದರಿಂದ ಪ್ರತಿಭಟನೆಯನ್ನು ರೈತರು ಹಿಂಪಡೆದಿದ್ದರು. ಬ್ಯಾಂಕ್ ಅಧಿಕಾರಿಗಳ ಸಭೆಯನ್ನೂ ಚಿಕ್ಕಮಗಳೂರಿನಲ್ಲಿ ಸಂಸದರು ನಡೆಸಿದ್ದರು. ಸಂಸತ್ ಅಧಿವೇಶನದಲ್ಲೂ ಈ ಪ್ರಶ್ನೆಯನ್ನು ಅವರು ಕೇಳಿದ್ದರು. ಸರ್ಫಾಸಿ ಕಾಯ್ದೆ ವ್ಯಾಪ್ತಿಗೆ ಕಾಫಿ ಕೃಷಿ ಬರುವುದಿಲ್ಲ ಎಂಬ ಉತ್ತರವನ್ನು ಕೇಂದ್ರ ವಾಣಿಜ್ಯ ಸಚಿವ ಪಿಯೂಷ್ ಗೋಯಲ್ ನೀಡಿದ್ದಾರೆ. ಇದು ಬೆಳೆಗಾರರಲ್ಲಿ ಸಮಾಧಾನ ತಂದಿದೆ.

ಆದರೆ, ಸಂಸತ್‌ನಲ್ಲಿ ಸಚಿವರು ನೀಡಿರುವ ಉತ್ತರ ಆಧರಿಸಿ ಬ್ಯಾಂಕ್ ಅಧಿಕಾರಿಗಳು ಹರಾಜು ಪ್ರಕ್ರಿಯೆ ಕೈಬಿಡುವ ಸಾಧ್ಯತೆ ಇಲ್ಲ. ಕೇಂದ್ರ ಸರ್ಕಾರ ಆರ್‌ಬಿಐ ಮೂಲಕ ಬ್ಯಾಂಕ್‌ಗಳಿಗೆ ನಿರ್ದೇಶನ ಕೊಡಿಸಬೇಕು. ಆಗ ಮಾತ್ರ ಬೆಳೆಗಾರರ ತೋಟಗಳ ಹರಾಜು ಪ್ರಕ್ರಿಯೆ ಸ್ಥಗಿತವಾಗಬಹುದು ಎಂದು ಬೆಳೆಗಾರರ ಸಂಘಟನೆಗಳ ಹೋರಾಟಗಾರರು ಹೇಳುತ್ತಾರೆ. ಸರ್ಫೇಸಿ ವ್ಯಾಪ್ತಿಗೆ ಕಾಫಿ ಕೃಷಿ ಬರುವುದಿಲ್ಲ ಎಂದಾದರೆ ಬೇರೆ ಯಾವ ನಿರ್ದೇಶನವೂ ಅಗತ್ಯವಿಲ್ಲ ಎಂಬ ಅಭಿಪ್ರಾಯವೂ ಬೆಳೆಗಾರರಲ್ಲಿ ಇದೆ.

ಕೇಂದ್ರ ವಾಣಿಜ್ಯ ಸಚಿವರನ್ನು ಭೇಟಿ ಮಾಡಿ ಸ್ಪಷ್ಟನೆ ಪಡೆದುಕೊಳ್ಳಲು ಕಾಫಿ ಬೆಳೆಗಾರರ ಒಕ್ಕೂಟ ಆಲೋಚನೆ ನಡೆಸಿದೆ. ಹರಾಜು ಪ್ರಕ್ರಿಯೆ ಸ್ಥಗಿತಗೊಳಿಸಲು ಬ್ಯಾಂಕ್‌ಗಳಿಗೆ ಪತ್ರ ಬರೆಯಲು ಕಾಫಿ ಮಂಡಳಿ ಕೂಡ ಮುಂದಾಗಿದೆ. ಬ್ಯಾಂಕ್‌ಗಳಿಗೆ ಪತ್ರ: ದಿನೇಶ್ ದೇವವೃಂದ ಕಾಫಿ ಬೆಳೆಗೆ ಸರ್ಫೇಸಿ ಕಾಯ್ದೆ ಅನ್ವಯ ಆಗುವುದಿಲ್ಲ ಎಂದು ಕೇಂದ್ರ ವಾಣಿಜ್ಯ ಸಚಿವರು ಹೇಳಿದ್ದಾರೆ. ಆದ್ದರಿಂದ ಬೆಳೆಗಾರರ ಆಸ್ತಿ ಹರಾಜು ಪ್ರಕ್ರಿಯೆ ನಿಲ್ಲಿಸುವಂತೆ ಕಾಫಿ ಮಂಡಳಿಯಿಂದ ಬ್ಯಾಂಕ್‌ಗಳಿಗೆ ಪತ್ರ ಬರೆಯಲಾಗುವುದು ಎಂದು ಕಾಫಿ ಮಂಡಳಿ ಅಧ್ಯಕ್ಷ ದಿನೇಶ್ ದೇವವೃಂದ ತಿಳಿಸಿದರು.

ಯಾವುದೋ ಒಂದು ಪ್ರಕರಣ ಆಧರಿಸಿ ಎಲ್ಲಾ ಕಾಫಿ ಬೆಳೆಗಾರರ ಮೇಲೆ ಸರ್ಫೇಸಿ ಕಾಯ್ದೆಯನ್ನು ಬ್ಯಾಂಕ್‌ಗಳು ಅನ್ವಯ ಮಾಡುತ್ತಿವೆ.

ಕೇಂದ್ರ ಸರ್ಕಾರ ಸಂಸತ್ತಿನಲ್ಲೇ ಈ ವಿಷಯದ ಬಗ್ಗೆ ಸ್ಪಷ್ಟಪಡಿಸಿದೆ. ಆದ್ದರಿಂದ ಪತ್ರ ಬರೆಯಲಾಗುವುದು ಎಂದು ಹೇಳಿದರು.

> ಚಿಕ್ಕಮಗಳೂರಿನ ರಮೇಶ್ ರಾವ್ ಎಂಬುವರ ಪ್ರಕರಣದಲ್ಲಿ ನ್ಯಾಯಾಲಯದ ಆದೇಶ ಆಧರಿಸಿ ಬೇರೆಲ್ಲಾ ಬೆಳೆಗಾರರ ಮೇಲೆ ಸರ್ಫೇಸಿ ಕಾಯ್ದೆಯನ್ನು ಬ್ಯಾಂಕ್‌ಗಳು ಅನ್ವಯ ಮಾಡುತ್ತಿವೆ. ಈಗ ಕೇಂದ್ರ ಸಚಿವರು ಅನ್ವಯ ಆಗುವುದಿಲ್ಲ ಎಂದು ಹೇಳಿದ್ದಾರೆ. ಈ ಬಗ್ಗೆ ಹೆಚ್ಚಿನ ವಿವರಣೆ ನೀಡಿಲ್ಲ. ಅದನ್ನು ಪಡೆದುಕೊಳ್ಳುವ ಪ್ರಯತ್ನವನ್ನು ಈಗ ನಾವು ಮಾಡಬೇಕಿದೆ –ದಿನೇಶ್ ದೇವವೃಂದ, ಕಾಫಿ ಮಂಡಳಿ ಅಧ್ಯಕ್ಷ


ಉದಯವಾಹಿನಿ ಚಿತ್ರ

**ಸ್ಪಷ್ಟನೆ ಪಡೆಯಲು ಪ್ರಯತ್ನ**

ಎಚ್.ಟಿ.ಮೋಹನಕುಮಾರ್ ಕೇಂದ್ರ ಸಚಿವರು ಸಂಸತ್ ಅಧಿವೇಶನದಲ್ಲಿ ನೀಡಿದ ಉತ್ತರಕ್ಕೆ ಬ್ಯಾಂಕ್‌ಗಳು ಮನ್ನಣೆ ನೀಡುವ ಸಾಧ್ಯತೆ ಇಲ್ಲ. ಆದ್ದರಿಂದ ಕೇಂದ್ರ ಸಚಿವರನ್ನು ಮತ್ತೊಮ್ಮೆ ಭೇಟಿ ಮಾಡಲು ಆಲೋಚಿಸಲಾಗಿದೆ ಎಂದು ಕರ್ನಾಟಕ ಬೆಳೆಗಾರರ ಒಕ್ಕೂಟದ ಅಧ್ಯಕ್ಷ ಎಚ್.ಟಿ.ಮೋಹನಕುಮಾರ್ ಹೇಳಿದರು.

**ಕಾಫಿ ಬೆಳೆಗಾರರು ನಿರಂತರವಾಗಿ ಹೋರಾಟ**

# ಸಿರಿಯಾದಲ್ಲಿ 54 ವರ್ಷಗಳ ವಂಶಾಡಳಿತ ಅಂತ್ಯ: ರಷ್ಯಾಗೆ ಅಧ್ಯಕ್ಷ ಪರಾರಿ


• ಸಿರಿಯಾದಲ್ಲಿ ನಡೆಯುತ್ತಿದ್ದ ಅಂತರ್ಯುದ್ಧದಲ್ಲಿ ಸಂಪೂರ್ಣ ಪಾರಮ್ಯ ಸಾಧಿಸಿದ್ದಾರೆ ಬಂಡುಕೋರರು

**ಡಮಾಸ್ಕಸ್:** ಸಿರಿಯಾ ಅಂತರ್ಯುದ್ಧದಲ್ಲಿ ಬಂಡುಕೋರರು ಸಂಪೂರ್ಣ ಪಾರಮ್ಯ ಸಾಧಿಸಿದ್ದು, ಅಧ್ಯಕ್ಷ ಬಶರ್ ಅಲ್ ಅಸಾದ್ ಅವರ ಕುಟುಂಬದ 54 ವರ್ಷಗಳ ವಂಶಾಡಳಿತ ಕೊನೆಗೊಂಡಿದೆ. ಬಂಡುಕೋರರು ರಾಜಧಾನಿ ಡಮಾಸ್ಕಸ್ ನಗರವನ್ನು ವಶಪಡಿಸಿಕೊಂಡ ಬೆನ್ನಲ್ಲಿಯೇ ಅಧ್ಯಕ್ಷ ಅಸಾದ್ ದೇಶ ತೊರೆದಿದ್ದಾರೆ.

ಕೆಲವು ತಿಂಗಳ ಹಿಂದಷ್ಟೇ ಮೂಲಭೂತವಾದಿಗಳ ಕುಮ್ಮಕ್ಕಿನಿಂದ ಬಾಂಗ್ಲಾದೇಶದಲ್ಲಿ ನಡೆದ ಪ್ರತಿಭಟನೆಯು ಚುನಾಯಿತ ಸರಕಾರವನ್ನು ಅಸ್ಥಿರಗೊಳಿಸಿದಂತೆ ಸಿರಿಯಾದಲ್ಲೂ ಈಗ ಅಂಥದ್ದೇ ಪರಿಸ್ಥಿತಿ ಸೃಷ್ಟಿಯಾಗಿದೆ. ಕೆಲವು ವರ್ಷಗಳ ಹಿಂದೆ ಅಫಘಾನಿಸ್ತಾನದಲ್ಲಿ ತಾಲಿಬಾನಿಗಳು ಹಿಡಿತ ಸಾಧಿಸದಂತೆ ಈಗ ಸಿರಿಯಾ ಕೂಡ ಬಂಡುಕೋರರ ವಶಕ್ಕೆ ಜಾರಿದೆ.

ಹಯಾತ್ ತಹ್ರಿರ್ ಅಲ್-ಶಾಮ್ ಇಸ್ಲಾಮಿಸ್ಟ್ ಸಂಘಟನೆ ನೇತೃತ್ವದಲ್ಲಿ ಬಂಡುಕೋರರ ಪಡೆಯು ಸಿರಿಯಾ ರಾಜಧಾನಿ ಡಮಾಸ್ಕಸ್ ಅನ್ನು ಪೂರ್ಣ ಹತೋಟಿಗೆ ಪಡೆದಿದೆ.

- ಸಿರಿಯಾದಲ್ಲಿ ನಡೆಯುತ್ತಿದ್ದ ಅಂತರ್ಯುದ್ಧದಲ್ಲಿ ಸಂಪೂರ್ಣ ಪಾರಮ್ಯ ಸಾಧಿಸಿದ್ದಾರೆ ಬಂಡುಕೋರರು
- ಅಧ್ಯಕ್ಷ ಬಶರ್ ಅಲ್ ಅಸಾದ್ ಅವರ ಕುಟುಂಬದ 54 ವರ್ಷಗಳ ವಂಶಾಡಳಿತ ಅಂತ್ಯ
- ರಾಜಧಾನಿ ಡಮಾಸ್ಕಸ್ ನಗರವನ್ನು ವಶಪಡಿಸಿಕೊಂಡಿದ್ದಾರೆ ಬಂಡುಕೋರರು
- ಇದರ ಬೆನ್ನಲ್ಲಿಯೇ ದೇಶ ತೊರೆದ ಬಶರ್ ಅಲ್ ಅಸಾದ್ ಹಾಗೂ ಕುಟುಂಬ
- ಅಸಾದ್ ಮತ್ತು ಅವರ ಕುಟುಂಬಕ್ಕೆ ರಷ್ಯಾ ರಾಜಧಾನಿ ಮಾಸ್ಕೋದಲ್ಲಿ ಆಶ್ರಯ



### ರಷ್ಯಾದಲ್ಲಿ ಅಧ್ಯಕ್ಷ ಅಸಾದ್

ಬಂಡುಕೋರರಿಗೆ ಬೆದರಿ ಅಧ್ಯಕ್ಷ ಬಶರ್ ಅಲ್ ಅಸಾದ್ ದೇಶದಿಂದ ಪಲಾಯನಗೊಂಡಿದ್ದು, ಅವರು ರಷ್ಯಾ ಅಥವಾ ಜೋರ್ಡನ್ ಕಡೆಗೆ ಹೊರಟಿರಬಹುದು ಎನ್ನಲಾಗಿತ್ತು. ಇದೀಗ ಅವರು ರಷ್ಯಾದಲ್ಲಿರುವುದು ಖಚಿತಪಟ್ಟಿದೆ.

ಪ್ರಧಾನಿ ಮೊಹಮ್ಮದ್ ಘಾಜಿ ಆಲಿ ಜಲಾಲಿ ಅವರನ್ನು ಆಡಳಿತ ಕಚೇರಿಯಿಂದ ಹೊರಹಾಕಲಾಗಿದೆ.

### ಸಿರಿಯಾ ಸರಕಾರದ ಹಿಡಿತಕ್ಕೆ ಅಲೆಪ್ಪೊ ನಗರ

ಬಂಡುಕೋರರು ಡಮಾಸ್ಕಸ್ ಅನ್ನು ವಶಪಡಿಸಿಕೊಂಡ ನಂತರ ಸಿರಿಯಾದ ಪದಚ್ಯುತ ಅಧ್ಯಕ್ಷ ಬಶರ್ ಅಲ್ ಅಸಾದ್ ಭಾನುವಾರ ಮಾಸ್ಕೋಗೆ ಪಲಾಯನ ಮಾಡಿದ್ದಾರೆ. ಅಸಾದ್ ಮತ್ತು ಅವರ ಕುಟುಂಬಕ್ಕೆ ಮಾಸ್ಕೋದಲ್ಲಿ ಆಶ್ರಯ ನೀಡಲಾಗಿದೆ ಎಂದು ರಷ್ಯಾದ ಮಾಧ್ಯಮಗಳು ವರದಿ ಮಾಡಿವೆ. ಆದರೂ ರಷ್ಯಾ ಸರಕಾರ ಇದನ್ನು ದೃಢಪಡಿಸಿಲ್ಲ.

**ಬಂಡುಕೋರರ ತೆಕ್ಕೆಗೆ ರಾಜಧಾನಿ**

ನೂರಾರು ಬಂಡುಕೋರರು ಬಾವುಟ ಹಿಡಿದು ಡಮಾಸ್ಕಸ್‌ನ ಸೆಂಟರ್ ಸ್ಕ್ವೇರ್‌ನಲ್ಲಿ 'ನಮಗೆ ಸ್ವಾತಂತ್ರ್ಯ ಲಭಿಸಿದೆ' ಎಂದು ಘೋಷಿಸುತ್ತಾ ಸಂಭ್ರಮಿಸಿದ್ದಾರೆ. ಬಂಡುಕೋರರ ವಿಜಯದೊಂದಿಗೆ ಮಧ್ಯ ಪ್ರಾಚ್ಯದಲ್ಲಿ ಐಸಿಸ್ ಉಗ್ರರ ಉಪಟಳ ಮತ್ತೆ ಹೆಚ್ಚುವ ಆತಂಕವನ್ನು ಅಮೆರಿಕ ವ್ಯಕ್ತಪಡಿಸಿದೆ.

ಅಸಾದ್ ಪ್ರಯಾಣಿಸುತ್ತಿದ್ದ ವಿಮಾನ ರೇಡಾರ್ ವ್ಯಾಪ್ತಿಯಿಂದ ಏಕಾಏಕಿ ನಾಪತ್ತೆಯಾಗಿತ್ತು. ವಿಮಾನ ಹೊಡೆದುರುಳಿಸಿರಬಹುದು ಎಂದೂ ಶಂಕಿಸಲಾಗಿತ್ತು. ಸದ್ಯಕ್ಕೆ ಅಸಾದ್ ಎಲ್ಲಿದ್ದಾರೆ. ಅವರು ಜೀವಂತ ಇದ್ದಾರೆಯೊ ಇಲ್ಲವೊ ಎನ್ನುವುದು ನಿಗೂಢವಾಗಿತ್ತು.

**ಭಾರತೀಯರಿಗೆ ಸಲಹೆ:** ಸಿರಿಯಾ ಸಂಘರ್ಷ ತೀವ್ರಗೊಳ್ಳುತ್ತಿರುವ ಹಿನ್ನೆಲೆಯಲ್ಲಿ ಭಾರತೀಯ ವಿದೇಶಾಂಗ ವ್ಯವಹಾರಗಳ ಸಚಿವಾಲಯವು ಮುಂದಿನ ಸೂಚನೆ ನೀಡುವವರೆಗೂ ಈ ದೇಶಕ್ಕೆ ಪ್ರವಾಸ ಕೈಗೊಳ್ಳದಂತೆ ಭಾರತೀಯರಿಗೆ ಸೂಚನೆ ನೀಡಿದೆ. ಸದ್ಯಕ್ಕೆ ಸಿರಿಯಾದಲ್ಲಿರುವ ಭಾರತೀಯರು ಸುರಕ್ಷಿತವಾಗಿದ್ದಾರೆ ಎಂದು ತಿಳಿಸಿದೆ.

## ಭಾರತೀಯರಿಗೆ ಕೆಟ್ಟ ಕನಸಾಗಿ ಬದಲಾದ ಅಮೆರಿಕ

**ವಾಷಿಂಗ್ಟನ್ ಡಿಸಿ:** ಅಮೆರಿಕದಲ್ಲಿ ಡೊನಾಲ್ಡ್ ಟ್ರಂಪ್ ಗೆಲುವಿನೊಂದಿಗೆ ಲಕ್ಷಾಂತರ ಭಾರತೀಯರಲ್ಲಿ ಆತಂಕ ಮನೆ ಮಾಡಿದೆ. ಟ್ರಂಪ್ ಅವರ ಕಠಿಣ ವಲಸೆ ನೀತಿ ಜಾರಿಗೂ ಮುನ್ನವೇ ಭಾರತೀಯರ ಅಮೆರಿಕ ಎಂಬ ಕನಸು ಅತಿ ಕೆಟ್ಟ ಕನಸಾಗಿ ಬದಲಾಗುತ್ತಿದೆ.

ಅಮೆರಿಕದಲ್ಲಿ ಸಮರ್ಪಕ ದಾಖಲೆಗಳಿಲ್ಲದೇ ಇರುವ ಸಾವಿರಾರು ಭಾರತೀಯರು ಈಗ ಅತಂತ್ರರಾಗಿದ್ದಾರೆ. ಆಡಳಿತದ ವಿಳಂಬ ಧೋರಣೆ, ಬಂಧನ ಹಾಗೂ ಗಡಿಪಾರಿನ ನಿರಂತರ ಆತಂಕದಿಂದ ಅಮೆರಿಕದಲ್ಲಿರುವ ಭಾರತೀಯರಿಗೆ ಈಗ ನರಕದಲ್ಲಿ ಬದುಕುತ್ತಿರುವಂತೆ ಭಾಸವಾಗುತ್ತಿದೆ. ಅಮೆರಿಕದಲ್ಲಿ ಆಶ್ರಯ ಪಡೆಯಲು ಬೇಕಿರುವ ಐಸಿಇ ಕ್ಲಿಯರೆನ್ಸ್ ಸಿಗುವುದು ವರ್ಷಗಳಷ್ಟು ತಡವಾಗುತ್ತಿದೆ. ಇದರಿಂದ ಯಾವಾಗ ಅಮೆರಿಕ ಸರ್ಕಾರ ನಮ್ಮನ್ನು ಬಂಧಿಸುತ್ತೋ, ಗಡಿಪಾರು ಮಾಡುತ್ತೋ ಎಂಬ ಆತಂಕ ಭಾರತೀಯರನ್ನು ಸದಾ ಕಾಡುತ್ತಿದೆ.


ಹೌದು, ಡೊನಾಲ್ಡ್ ಟ್ರಂಪ್ ಗೆದ್ದ ಬಳಿಕ ಅಮೆರಿಕದ ವಲಸೆ ನೀತಿ ಬಗ್ಗೆ ಭಾರೀ ಚರ್ಚೆ ಆಗುತ್ತಿದೆ. ಇದರ ಮಧ್ಯೆಯೇ ನಿರಾಶ್ರಿತರಿಗೆ ಅಗತ್ಯವಾಗಿ ಬೇಕಿರುವ ಇಮಿಗ್ರೇಷನ್ಸ್ ಹಾಗೂ ಕಸ್ಟಮ್ಸ್ ಎನ್‌ಫೋರ್ಸ್‌ಮೆಂಟ್‌ನ ಕ್ಲಿಯರೆನ್ಸ್ ಸಿಗುವುದು ಬಹಳ ಅಂದ್ರೇ ಬಹಳ ತಡವಾಗುತ್ತಿದೆ. ಆಶ್ರಯಕ್ಕಾಗಿ ಅರ್ಜಿ ಸಲ್ಲಿಸಿದವರನ್ನು ಕರೆದು ವಿಚಾರಣೆ ನಡೆಸಿ, ಬಳಿಕ ಕ್ಲಿಯರೆನ್ಸ್ ಪ್ರಮಾಣ ಪತ್ರವನ್ನು ಐಸಿಇ ನೀಡುತ್ತದೆ. ಐಸಿಇ ನೀಡಿದ ಪ್ರಮಾಣ ಪತ್ರದ ಬಳಿಕ ಅಮೆರಿಕ ಸರ್ಕಾರ ಅವರನ್ನು ನಿರಾಶ್ರಿತರೆಂದು ಒಪ್ಪಿ ತನ್ನ ದೇಶದಲ್ಲಿ ಉಳಿಯಲು ಅವಕಾಶ ನೀಡುತ್ತದೆ.

ಈ ಪ್ರಮಾಣ ಪತ್ರ ಸಿಗದವರನ್ನು ಅಮೆರಿಕ ಸರ್ಕಾರ ಬಂಧಿಸುತ್ತದೆ, ಅಥವಾ ಗಡಿಪಾರು ಮಾಡುತ್ತದೆ. ಆದ್ದರಿಂದ ಈ ಐಸಿಇ ಕ್ಲಿಯರೆನ್ಸ್ ಭಾರತೀಯರಿಗೆ ಅನಿವಾರ್ಯವಾಗಿದೆ.

ಇದು ಭಾರತೀಯರ ತಲೆನೋವಿಗೆ ಕಾರಣವಾಗಿದೆ. 2023ರಲ್ಲಿ 41 ಸಾವಿರ ಭಾರತೀಯರು ಅಮೆರಿಕದಲ್ಲಿ ಆಶ್ರಯ ಪಡೆಯಲು ಅರ್ಜಿ ಸಲ್ಲಿಸಿದ್ದಾರೆ. ಆದರೆ, ಬಹಳಷ್ಟು ಜನ ಐಸಿಇ ವಿಚಾರಣೆಗಾಗಿ ಹಲವು ವರ್ಷಗಳು ಕಾಯಬೇಕಿದೆ.

### ಕ್ಲಿಯರೆನ್ಸ್ ಪಡೆಯಲು ಪರದಾಟ

ಐಸಿಇ ಕ್ಲಿಯರೆನ್ಸ್ ಸರ್ಟಿಫಿಕೇಟ್ ಪಡೆಯಲು ಅರ್ಜಿ ಸಲ್ಲಿಸಿದ ಕೆಲವರಿಗೆ 2027ರಲ್ಲಿ ವಿಚಾರಣೆಗೆ ಸಮಯವನ್ನು ನಿಗದಿಪಡಿಸಲಾಗುತ್ತಿದೆ. ಇನ್ನು ಕೆಲವರನ್ನು ಗಡಿಯಲ್ಲಿಯೇ ಬಂಧಿಸಲಾಗುತ್ತಿದೆ. ಕೆಲವರು ಅಕ್ರಮ ವಲಸಿಗರ ಕ್ಯಾಂಪ್‌ನಲ್ಲಿ ಸಿಲುಕಿಕೊಂಡಿದ್ದಾರೆ. ಇವರೆಲ್ಲಾ ಅಕ್ರಮವಾಗಿ ಅಮೆರಿಕದಲ್ಲಿ ನೆಲೆಸಿದ್ದಾರೆ ಎಂದು ಸಾಬೀತಾದರೆ ಗಡಿಪಾರು ಆಗುವ ಸಾಧ್ಯತೆ ಇದೆ.



ಐಸಿಇ ವಿಚಾರಣೆ ನಡೆಸಿ ರಾಷ್ಟ್ರೀಯ ಭದ್ರತೆಗೆ ಹಾಗೂ ಸಾರ್ವಜನಿಕರ ಸುರಕ್ಷತೆಗೆ ಧಕ್ಕೆ ಬರಲ್ಲ ಎಂದು ಗೊತ್ತಾದ ಬಳಿಕ ಎನ್‌ಒಸಿಯನ್ನು ನೀಡಲಿದೆ. ಅಲ್ಲಿಯವರೆಗೂ ಭಾರತೀಯರು ಅತಂತ್ರರಾಗಿರಲಿದ್ದಾರೆ.

## ಬಾಂಗ್ಲಾದೇಶದಲ್ಲಿ ಭಾರತದ ವಿದೇಶಾಂಗ ಕಾರ್ಯದರ್ಶಿ

**ಢಾಕಾ:** ಭಾರತ ಮತ್ತು ಬಾಂಗ್ಲಾದೇಶ ನಡುವಿನ ದ್ವಿಪಕ್ಷೀಯ ಸಂಬಂಧಗಳ ಕುರಿತು ಚರ್ಚಿಸಲು ವಿದೇಶಾಂಗ ಕಾರ್ಯದರ್ಶಿ ವಿಕ್ರಮ್ ಮಿಶ್ರೀ ಬೆಳಗ್ಗೆ ಢಾಕಾಗೆ ಆಗಮಿಸಿದ್ದಾರೆ.

ಬಾಂಗ್ಲಾದೇಶದಲ್ಲಿ ಮುಹಮದ್ ಯೂನಸ್ ನೇತೃತ್ವದ ಮಧ್ಯಂತರ ಸರ್ಕಾರ ಅಧಿಕಾರ ವಹಿಸಿಕೊಂಡ ನಂತರ ಇದು ಮೊದಲ ಉನ್ನತ ಮಟ್ಟದ ಅಧಿಕೃತ ಭೇಟಿಯಾಗಿದೆ. ಬಾಂಗ್ಲಾದೇಶದಲ್ಲಿ ಅಲ್ಪಸಂಖ್ಯಾತರ ವಿರುದ್ಧ ಹಿಂಸಾಚಾರ ಹೆಚ್ಚುತ್ತಿರುವ ವರದಿಗಳು ಮತ್ತು ಚಿತ್ತಗಾಂಗ್‌ನಲ್ಲಿ ಆಧ್ಯಾತಿಕ ನಾಯಕ ಚಿನ್ಮೋಯ್ ಕಷ್ಣ ದಾಸ್ ಅವರ ಬಂಧನದ ನಡುವೆ ಈ ಭೇಟಿ ಬಂದಿದೆ. ಉಭಯ ದೇಶಗಳ ವಿದೇಶಾಂಗ ಕಾರ್ಯದರ್ಶಿಗಳ ನೇತೃತ್ವದ ನಿಯೋಗವು ಉಭಯ ದೇಶಗಳ ನಡುವೆ ಸ್ಥಾಪಿಸಲಾದ ವಿದೇಶಾಂಗ ಕಚೇರಿ ಸಮಾಲೋಚನೆ (ಎಫ್‌ಒಸಿ) ಕಾರ್ಯವಿಧಾನದಲ್ಲಿ ಭಾಗವಹಿಸುವ ಮೂಲಕ ದ್ವಿಪಕ್ಷೀಯ ಸಂಬಂಧಗಳ ಒಟ್ಟಾರೆ ಸಮಸ್ಯೆಗಳನ್ನು ಚರ್ಚಿಸುವ ನಿರೀಕ್ಷೆಯಿದೆ.

ಡಿಸೆಂಬರ್ 4 ರಂದು, ಬಾಂಗ್ಲಾದೇಶದ ಮಧ್ಯಂತರ ಸರ್ಕಾರದ ಮುಖ್ಯ ಸಲಹೆಗಾರ ಶಫೀಕುಲ್ ಆಲಂ



ಅವರ ಪತ್ರಿಕಾ ಕಾರ್ಯದರ್ಶಿ, ಉಭಯ ದೇಶಗಳ ವಿದೇಶಾಂಗ ಕಾರ್ಯದರ್ಶಿಗಳು ಪರಸ್ಪರ ಹಿತಾಸಕ್ತಿಯ ವಿಷಯಗಳ ಕುರಿತು ಮಾತುಕತೆ ನಡೆಸಲಿದ್ದಾರೆ ಎಂದು ಹೇಳಿದರು.

ಈ ವರ್ಷದ ಸೆಪ್ಟೆಂಬರ್‌ನಲ್ಲಿ, ಬಾಂಗ್ಲಾದೇಶದ ಮಧ್ಯಂತರ ಸರ್ಕಾರದ ವಿದೇಶಾಂಗ ಸಲಹೆಗಾರ (ಸಚಿವ) ತೌಹಿದ್ ಹೊಸೈನ್ ಅವರು ನ್ಯೂಯಾರ್ಕ್‌ನಲ್ಲಿ ನಡೆದ ವಿಶ್ವಸಂಸ್ಥೆಯ ಸಾಮಾನ್ಯ ಸಭೆಯ ಭಾಗದಲ್ಲಿ ಭಾರತೀಯ ವಿದೇಶಾಂಗ ಸಚಿವ ಎಸ್ ಜೈಶಂಕರ್ ಅವರನ್ನು ಭೇಟಿ ಮಾಡಿದ್ದರು. ಅವರು ಉತ್ತಮ ಕಾರ್ಯ ಸಂಬಂಧವನ್ನು ಕಾಪಾಡಿಕೊಳ್ಳಲು ನಿರ್ಧರಿಸಿದರು ಮತ್ತು ಭಾರತ ಮತ್ತು ಬಾಂಗ್ಲಾದೇಶದ ನಡುವೆ ಸಭೆ ನಡೆಸಲು ನಿರ್ಧರಿಸಿದರು.

## ಸೇನಾರಹಿತ ಬಫರ್ ವಲಯ ವಶಕ್ಕೆ ಸೂಚನೆ

**ಜೆರುಸಲೇಂ:** ಡಮಾಸ್ಕಸ್‌ನಲ್ಲಿ ಸಿರಿಯಾದ ಸರ್ವಾಧಿಕಾರಿ ಬಶರ್ ಅಲ್-ಅಸ್ಸಾದ್ ಅವರನ್ನು ಪದಚ್ಯುತಗೊಳಿಸಿದ ನಂತರ ಸಿರಿಯಾದ ಗಡಿಯಲ್ಲಿರುವ ಸೇನಾರಹಿತ ಬಫರ್ ವಲಯವನ್ನು ವಶಪಡಿಸಿಕೊಳ್ಳುವಂತೆ ಇಸ್ರೇಲ್ ಮಿಲಿಟರಿಗೆ ಪ್ರಧಾನಿ ಬೆಂಜಮಿನ್ ನೆತನ್ಯಾಹು ಆದೇಶ ನೀಡಿದ್ದಾರೆ.



**ಒಪ್ಪಂದ ಮುರಿದು ಬಿದ್ದಿದೆ**

ಉಭಯ ದೇಶಗಳ ನಡುವಿನ 50 ವರ್ಷಗಳ ಹಿಂದಿನ ''ಒಪ್ಪಂದ'' ಮುರಿದುಬಿದ್ದಿದೆ. ಮತ್ತು ''ಸಿರಿಯನ್ ಪಡೆಗಳು ತಮ್ಮ ಸ್ಥಾನಗಳನ್ನು ತ್ಯಜಿಸಿವೆ'' ಎಂದು ಹೇಳಿದ್ದಾರೆ.

ಬಫರ್ ವಲಯ ಮತ್ತು ಹತ್ತಿರದ ಕಮಾಂಡಿಂಗ್ ಸ್ಥಾನಗಳನ್ನು ವಶಪಡಿಸಿಕೊಳ್ಳಲು ಸೇನೆಗೆ ನಿರ್ದೇಶನ ನೀಡಿದ್ದೇನೆ. ನಮ್ಮ ಗಡಿಯಲ್ಲಿ ಯಾವುದೇ ಪ್ರತಿಕೂಲ ಶಕ್ತಿಯು ಸ್ಥಾಪಿಸಲು ಅನುಮತಿಸುವುದಿಲ್ಲ ಎಂದು ಗುಡುಗಿದ್ದಾರೆ. ಇಸ್ರೇಲಿ ಆಕ್ರಮಿತ ಗೋಲನ್ ಹೈಟ್ಸ್‌ಗೆ ಭೇಟಿ ನೀಡಿದ ವೇಳೆ ಮಾತನಾಡಿದ ಪ್ರಧಾನಿ ಬೆಂಜಮಿನ್ ನೆತನ್ಯಾಹು ಅವರು ಬಫರ್ ಝೋನ್‌ಗೆ ಭೇಟಿ ನೀಡಿದಾಗ ಘೋಷಣೆಯನ್ನು ಮಾಡಲಾಗಿದ್ದು, ಆ ಪ್ರದೇಶಕ್ಕೆ ಪಡೆಗಳನ್ನು ನಿಯೋಜಿಸಲಾಗಿದೆ ಎಂದು ಮಿಲಿಟರಿ ಹೇಳಿದ ನಂತರ ಬಂದಿದೆ.

ಇಸ್ಲಾಮಿಸ್ಟ್ ನೇತೃತ್ವದ ಬಂಡುಕೋರರು ಸಿರಿಯಾದಾದ್ಯಂತ ವೇಗವಾಗಿ ಮುನ್ನಡೆಯುತ್ತಿದ್ದಂತೆ, ದಾಳಿ ಹಿಮ್ಮೆಟ್ಟಿಸಲು ಶಾಂತಿಪಾಲಕರಿಗೆ ಸಹಾಯ ಮಾಡಲು ತನ್ನ ಸೈನಿಕರು ಯುಎನ್ ಗಸ್ತು ಬಫರ್ ವಲಯವನ್ನು ಪ್ರವೇಶಿಸಿದರು ಎಂದು ಇಸ್ರೇಲ್ ಈಗಾಗಲೇ ಹಿಂದಿನ ದಿನ ಹೇಳಿದ್ದಾರೆ

ಸಿರಿಯಾದಲ್ಲಿನ ಇತ್ತೀಚಿನ ಘಟನೆಗಳನ್ನು ಅನುಸರಿಸಿ ಇಸ್ರೇಲ್ ಬಫರ್ ವಲಯದಲ್ಲಿ ಮತ್ತು ಅದರ ರಕ್ಷಣೆಗೆ ಅಗತ್ಯವಾದ ಹಲವಾರು ಸ್ಥಳಗಳಲ್ಲಿ ಪಡೆಗಳನ್ನು ನಿಯೋಜಿಸಿದೆ, ಗೋಲನ್ ಹೈಟ್ಸ್ ಸಮುದಾಯಗಳು ಮತ್ತು ಇಸ್ರೇಲ್ ನಾಗರಿಕರ ಸುರಕ್ಷತೆಯನ್ನು ಖಚಿತಪಡಿಸಿಕೊಳ್ಳಲು, ಮಿಲಿಟರಿ ಹೇಳಿಕೆ ತಿಳಿಸಿದೆ. ಇಸ್ರೇಲಿ ಪಡೆಗಳು ''ಬಫರ್ ವಲಯವನ್ನು ಸಂರಕ್ಷಿಸಲು ಮತ್ತು ಇಸ್ರೇಲ್ ಅನ್ನು ರಕ್ಷಿಸಲು ಅಗತ್ಯವಿರುವವರೆಗೆ ಕಾರ್ಯಾಚರಣೆಯನ್ನು ಮುಂದುವರಿಸುತ್ತದೆ ಎಂದು ಹೇಳಿಕೆಯಲ್ಲಿ ತಿಳಿಸಿದೆ.

## ಸಿರಿಯಾದ ಐಸಿಸ್ ನೆಲೆಗಳ ಮೇಲೆ ಅಮೆರಿಕ ದಾಳಿ

**ಡಮಾಸ್ಕಸ್:** ಸಿರಿಯಾ ಬಂಡುಕೋರರ ಕೈವಶವಾಗಿ ಅಧ್ಯಕ್ಷ ಬಶರ್ ಅಲ್ ಅಸ್ಸಾದ್ ದೇಶ ಬಿಟ್ಟು ಪರಾರಿಯಾಗುತ್ತಿದ್ದಂತೆ ಅಮೆರಿಕ ಅಲ್ಲಿನ ಐಸಿಸ್ ನೆಲೆಗಳ ಮೇಲೆ ತೀವ್ರ ದಾಳಿ ನಡೆಸಿದೆ.

ಅಸ್ಸಾದ್ ದೇಶ ತೊರೆದಿರುವುದನ್ನು ಸೇನೆ ಖಚಿತಪಡಿಸಿದ್ದು, ಅಧ್ಯಕ್ಷರ ಅಧಿಕಾರ ಕೊನೆಗೊಂಡಿದೆ ಎಂದು ಹೇಳಿದೆ. ಐಸಿಸ್ ಎಂದು ಕರೆಯಲ್ಪಡುವ ಇಸ್ಲಾಮಿಕ್ ಸ್ಟೇಟ್ ಉಗ್ರಗಾಮಿ ಗುಂಪು ಸಿರಿಯಾದಲ್ಲಿ ತನ್ನನ್ನು ತಾನು ಮರುಸ್ಥಾಪಿಸಲು ಪ್ರಸ್ತುತ ಪರಿಸ್ಥಿತಿಯ ಲಾಭವನ್ನು ಪಡೆಯಲು ಪ್ರಯತ್ನಿಸುತ್ತಿದೆ ಎಂದು ಅಮೆರಿಕ ಅಧ್ಯಕ್ಷ ಜೋ ಬೈಡನ್ ಆರೋಪಿಸಿದ್ದಾರೆ.

ನಿನ್ನೆ ಸಿರಿಯಾದೊಳಗೆ ಐಸಿಸ್ ವಿರುದ್ಧ ತನ್ನ ಪಡೆಗಳು ದಾಳಿ ನಡೆಸಿವೆ ಎಂದು ಅವರು ಶ್ವೇತಭವನಕ್ಕೆ ಮಾಹಿತಿ ನೀಡಿದ್ದಾರೆ. ತನ್ನ ಯುದ್ಧ ವಿಮಾನಗಳು ಇಸ್ಲಾಮಿಕ್ ಸ್ಟೇಟ್ ಭಯೋತ್ಪಾದಕರು ಮತ್ತು ಸ್ಥಾನಗಳನ್ನು ಗುರಿಯಾಗಿಸಿಕೊಂಡಿವೆ ಎಂದು ಅಮೆರಿಕ ಮಿಲಿಟರಿ ಪಡೆ ದೃಢಪಡಿಸಿದೆ.

ಕಳೆದ ಹಲವು ದಿನಗಳಿಂದ ಸಿರಿಯಾದಲ್ಲಿ ಬಂಡುಕೋರ ಗುಂಪುಗಳು ಮತ್ತು ಸೇನೆಯ ನಡುವೆ



ಅಮೆರಿಕ ತನ್ನ ಅತ್ಯಾಧುನಿಕ ವಾಯುಪಡೆಯ ವಿಮಾನಗಳನ್ನು ಬಳಸಿಕೊಂಡು ಮಧ್ಯ ಸಿರಿಯಾದಲ್ಲಿ 75 ಕ್ಕೂ ಹೆಚ್ಚು ಸ್ಥಳಗಳ ಮೇಲೆ ಮೇಲೆ ದಾಳಿ ಮಾಡಲಾಗಿದೆ ಎಂದು ಅಮೆರಿಕ ಸೆಂಟ್ರಲ್ ಕಮಾಂಡ್ ತಿಳಿಸಿದೆ. ಇಸ್ಲಾಮಿಕ್ ಸ್ಟೇಟ್ ಹೋರಾಟಗಾರರ ವಿರುದ್ಧ ಹೋರಾಡಲು ಯುಎಸ್ ಆಗ್ನೇಯ ಸಿರಿಯಾಕ್ಕೆ ಸುಮಾರು 900 ಸೈನಿಕರ ತುಕಡಿಯನ್ನು ನಿಯೋಜಿಸಿದೆ.


ಹೋರಾಟ ನಡೆಯುತ್ತಿತ್ತು. ಅಂತಿಮವಾಗಿ, ಇಸ್ಲಾಮಿ ಹಯಾತ್ ತಹ್ರೀರ್ ಅಲ್-ಶಾಮ್ ಗುಂಪು ಅಸ್ಸಾದ್ ಕುಟುಂಬದ ಐದು ದಶಕಗಳ ಆಳ್ವಿಕೆಗೆ ಸವಾಲು ಹಾಕಿದ 11 ದಿನಗಳ ನಂತರ ಸರ್ಕಾರವು ಪತನವಾಗಿದೆ. ಬಂಡುಕೋರ ಹೋರಾಟಗಾರರು ಭಾನುವಾರ ರಾಜಧಾನಿ ಡಮಾಸ್ಕಸ್ನನ್ನೂ ವಶಪಡಿಸಿಕೊಂಡಿದ್ದು, ಬೀದಿಗಳಲ್ಲಿ ಗುಂಡಿನ ದಾಳಿ ನಡೆಸಿ ವಿಜಯೋತ್ಸವ ಆಚರಿಸುತ್ತಿದ್ದಾರೆ. 2011 ರಲ್ಲಿ ಪ್ರಾರಂಭವಾದ ಸಿರಿಯಾದ ಅಂತರ್ಯುದ್ಧದಲ್ಲಿ 500,000 ಕ್ಕೂ ಹೆಚ್ಚು ಜನರು ಸಾವನ್ನಪ್ಪಿದ್ದಾರೆ ಮತ್ತು ಅರ್ಧದಷ್ಟು ಜನರು ಓಡಿಹೋಗಿದ್ದಾರೆ.

ಅಮೆರಿಕ, ರಷ್ಯಾ, ಇರಾನ್ ಮತ್ತು ಸೌದಿ ಅರೇಬಿಯಾ ಸೇರಿಕೊಂಡ ನಂತರ ಈ ಸಂಘರ್ಷ ಮತ್ತಷ್ಟು ಹೆಚ್ಚಾಯಿತು. ಇದೇ ವೇಳೆ ಭಯೋತ್ಪಾದಕ ಸಂಘಟನೆ ಐಸಿಸ್ ಕೂಡ ಸಿರಿಯಾದಲ್ಲಿ ತನ್ನ ರೆಕ್ಕೆಗಳನ್ನು ಚಾಚಿತ್ತು. 2020ರ ಕದನ ವಿರಾಮ ಒಪ್ಪಂದದ ನಂತರ ಇಲ್ಲಿ ಅಲ್ಲಲ್ಲಿ ಘರ್ಷಣೆಗಳು ಮಾತ್ರ ನಡೆದಿವೆ. ವಿಶ್ವಸಂಸ್ಥೆಯ ವರದಿಯ ಪ್ರಕಾರ, ದಶಕದ ಅಂತರ್ಯುದ್ಧದಲ್ಲಿ 3 ಲಕ್ಷಕ್ಕೂ ಹೆಚ್ಚು ಜನರು ಸಾವನ್ನಪ್ಪಿದ್ದಾರೆ. ಇದಲ್ಲದೇ ಲಕ್ಷಾಂತರ ಜನರು ನಿರಾಶ್ರಿತರಾಗಬೇಕಾಯಿತು.

## ಪತ್ನಿ ಆತ್ಮಹತ್ಯೆ -ಪತಿ, ಸ್ನೇಹಿತನ ಬಂಧನ

**ಪಾಲೋಡ್:** ತಿರುವನಂತಪುರಂ ಜಿಲ್ಲೆಯ ಪಾಲೋಡ್‌ನಲ್ಲಿರುವ ಅತ್ತೆಯ ಮನೆಯಲ್ಲಿ ನವವಿವಾಹಿತೆ ಶವವಾಗಿ ಪತ್ತೆಯಾದ ಎರಡು ದಿನಗಳ ನಂತರ, ಆತ್ಮಹತ್ಯೆಗೆ ಪ್ರಚೋದನೆ, ದೈಹಿಕ ಮತ್ತು ಮಾನಸಿಕ ಕಿರುಕುಳ ಮತ್ತು ಕೌಟುಂಬಿಕ ಹಿಂಸೆಗೆ ನೀಡಿದ ಆರೋಪದ ಮೇಲೆ ಆಕೆಯ ಪತಿ ಮತ್ತು ಆತನ ಸ್ನೇಹಿತನನ್ನು ಪೊಲೀಸರು ಬಂಧಿಸಿದ್ದಾರೆ. ಅಭಿಜಿತ್ ದೇವನ್ ಡಿಪಿ (25) ಮತ್ತು ಆತನ ಸ್ನೇಹಿತ ಅಜಾಸ್ ಟಿಎ (26) ಬಂಧಿತ ಆರೋಪಿಗಳು ಎನ್ನಲಾಗಿದೆ.

ಪೆರಿಂಗಮ್ಮಲ ಎಡಿಂಜಾರ್ ಕೊನ್ನಮಡು ಗಿರಿಜನ ನಗರದ ಶಶಿಧರನ್ ಕಣಿ ಮತ್ತು ಶೀಜಾ ದಂಪತಿ ಪುತ್ರಿ ನರ್ಸ್ ಕೆಲಸದಲ್ಲಿ ಮಾಡುತ್ತಿದ್ದ ಇಂದುಜಾ (25) ಪ್ರೀತಿಸಿ ವಿವಾಹವಾಗಿದ್ದಾರೆ. ಆದರೆ ಡಿ.6ರಂದು ನೇಣು ಬಿಗಿದುಕೊಂಡ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಈ ಕುರಿತು ಹಿರಿಯ ಪಾಲೊಡ್



ಪೊಲೀಸ್ ಅಧಿಕಾರಿಯೊಬ್ಬರು ಮಹಿಳಾ ನರ್ಸ್ ಒಬ್ಬರು ಡಿಸೆಂಬರ್ 6 ರಂದು ಪಲೋಡ್‌ನಲ್ಲಿರುವ ತನ್ನ ಗಂಡನ ಮನೆಯಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದಾಳೆ. ನಾವು ಆರಂಭದಲ್ಲಿ ಅಸ್ವಾಭಾವಿಕ ಸಾವಿನ ಪ್ರಕರಣ ಎಂದು ಭಾವಿಸಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ ಆದರೆ ಹೆಚ್ಚಿನ ತನಿಖೆಯಲ್ಲಿ ಅಭಿಜಿತ್ ಮತ್ತು ಪತ್ನಿ ಇಂದುಜಾ ನಡುವೆ ಆಗಾಗ್ಗೆ ವಾದಗಳು-ವಿವಾದಗಳು, ಕಲಹಗಳು ನಡೆಯುತ್ತಿದ್ದವು ಎಂದು ತಿಳಿದುಬಂದಿದೆ. ಈ ಸಮಯದಲ್ಲಿ ಪತಿಯ ಅವಳ ಕುಟುಂಬ ಮತ್ತು ಸ್ನೇಹಿತರು ಸೇರಿ ಜಾಜಾ ಹಲ್ಲೆ ನಡೆಸಿದ್ದಾರೆ.

ಅಭಿಜಿತ್ ಮತ್ತು ಅವನ ಸ್ನೇಹಿತ ಅಜಾಸ್ ಇಂದ್ರಾಜಾಗೆ ತೀವ್ರ ದೈಹಿಕ ಮತ್ತು ಮಾನಸಿಕ ಹಿಂಸೆ ನೀಡಿ ಆತ್ಮಹತ್ಯೆಗೆ ಪ್ರಚೋದನೆ ನೀಡಿದ್ದಾರೆ ಎಂದು ಅಧಿಕಾರಿ ಹೇಳಿದ್ದಾರೆ.

ಪತ್ನಿ ಬುಡಕಟ್ಟು ಸಮುದಾಯಕ್ಕೆ ಸೇರಿದವರು, ಆಕೆಯ ಪತಿ ಮೇಲ್ಜಾತಿಗೆ ಸೇರಿದವರು ಇದು ಪ್ರೇಮ ವಿವಾಹವಾಗಿದ್ದರೂ, ಸಹ ಜಾತಿ ಭೇದಗಳು ಅವರ ನಡುವೆ ಕಲಹಕ್ಕೆ ಕಾರಣವಾಗಿವೆ ಎಂದು ಅಧಿಕಾರಿ ಹೇಳಿದ್ದಾರೆ.

## ಶೌಚಾಲಯ ಪೈಪ್‌ನಲ್ಲಿ 6 ತಿಂಗಳ ಭ್ರೂಣ ಪತ್ತೆ

**ಗಾಜಿಯಾಬಾದ್:** ಉತ್ತರ ಪ್ರದೇಶದ ಗಾಜಿಯಾಬಾದ್‌ನ ಮನೆಯೊಂದರ ಶೌಚಾಲಯದ ಪೈಪ್‌ನಿಂದ ಆರು ತಿಂಗಳ ಭ್ರೂಣ ಪತ್ತೆಯಾಗಿದೆ. ಈ ಬಗ್ಗೆ ಸ್ಥಳೀಯ ಪೊಲೀಸರು ಮಾಹಿತಿ ನೀಡಿದ್ದಾರೆ. ಮನೆಯ ಮಾಲೀಕ ದೇವೇಂದ್ರ ಅಲಿಯಾಸ್ ದೇವ ಎಂದು ಗುರುತಿಸಲಾಗಿದೆ. ನೀರಿನ ಸಮಸ್ಯೆ ನಿವಾರಣೆಗೆ ಪೈಪ್ ಒಡೆದು ನೋಡಿದಾಗ ಭ್ರೂಣ ಪತ್ತೆಯಾಗಿದೆ.

ಈ ಬಗ್ಗೆ ಮಾಹಿತಿ ಪಡೆದ ಇಂದಿರಾಪುರಂ ಪೊಲೀಸರು ಸ್ಥಳಕ್ಕೆ ಆಗಮಿಸಿ ಜಮೀನುದಾರನನ್ನು ವಿಚಾರಣೆ ನಡೆಸಿದ್ದಾರೆ. ಬೆಳಗ್ಗೆ ಪೈಪ್ ಕಟ್ ಆಗಿದ್ದು, ಇದರಿಂದ ಈ ಭಯಾನಕ ಘಟನೆ ಬೆಳಕಿಗೆ ಬಂದಿದೆ ಎಂದು ಅವರು ಬಹಿರಂಗಪಡಿಸಿದ್ದಾರೆ. ಒಂಬತ್ತು ಬಾಡಿಗೆದಾರರು ಮನೆಯಲ್ಲಿ ವಾಸಿಸುತ್ತಿದ್ದಾರೆಂದು



ವರದಿಯಾಗಿದೆ, ಅವರೆಲ್ಲರನ್ನು ಅಧಿಕಾರಿಗಳು ತನಿಖೆಗೆ ಒಳಪಡಿಸಿದ್ದಾರೆ. ಮುಂದಿನ ಕಾನೂನು ಮತ್ತು ಫೋರೆನ್ಸಿಕ್ ತನಿಖೆಗಾಗಿ ಭ್ರೂಣವನ್ನು ಸಂರಕ್ಷಿಸಲಾಗಿದೆ. ಬಾಡಿಗೆದಾರರ ಡಿಎನ್‌ಎ ಮಾದರಿ ಗಳನ್ನು ಭ್ರೂಣದೊಂದಿಗೆ ಹೊಂದಾಣಿಕೆ ಮಾಡಲಾಗುವುದು ಇದರಿಂದ ತಪ್ಪಿತಸ್ಥರನ್ನು ಗುರುತಿಸಬಹುದು ಎಂದು ಎಸ್‌ಎಚ್‌ಒ ಸ್ವತಂತ್ರ ಕುಮಾರ್ ಸಿಂಗ್ ಹೇಳಿದ್ದಾರೆ.

# ಕೋಲ್ಕತ್ತಾ ವಿಮಾನ ನಿಲ್ದಾಣಕ್ಕೆ 100 ವರ್ಷಗಳ ಸಂಭ್ರಮಾಚರಣೆ

• 1924ರಲ್ಲಿ ವಿಮಾನ ನಿಲ್ದಾಣ ಆರಂಭವಾಗಿತ್ತು,ಇಂದು ಐತಿಹಾಸಿಕ ಪ್ರಯಾಣದ ಉತ್ಸಾಹವನ್ನು ಹಂಚಿಕೊಳ್ಳುತ್ತಿದೆ

**ಕೋಲ್ಕತ್ತಾ:** ಕೋಲ್ಕತ್ತಾದ ಐಕಾನಿಕ್ ನೇತಾಜಿ ಸುಭಾಸ್ ಚಂದ್ರ ಬೋಸ್ ಅಂತರಾಷ್ಟ್ರೀಯ ವಿಮಾನ ನಿಲ್ದಾಣವು ಒಂದು ಶತಮಾನದ ವಿಮಾನ ಕಾರ್ಯಾಚರಣೆಯನ್ನು ಆಚರಿಸಲು ಸಿದ್ಧವಾಗಿದೆ,

ಇದು ಸಿಟಿ ಆಫ್ ಜಾಯ್ ಅನ್ನು ಜಗತ್ತಿಗೆ ಸಂಪರ್ಕಿಸುವಲ್ಲಿ ನಂಬಲಾಗದ ಮೈಲಿಗಲ್ಲನ್ನು ಗುರುತಿಸುತ್ತದೆ ಎಂದು ಭಾರತೀಯ ವಿಮಾನ ನಿಲ್ದಾಣಗಳ ಪ್ರಾಧಿಕಾರ ಘೋಷಿಸಿತು, 1924 ರಲ್ಲಿ ವಿಮಾನ ನಿಲ್ದಾಣ ಆರಂಭವಾಗಿತ್ತು, ಐತಿಹಾಸಿಕ ಪ್ರಯಾಣದ ಉತ್ಸಾಹವನ್ನು ಹಂಚಿಕೊಳ್ಳುತ್ತದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಆಯಕಟ್ಟಿನ ನಿಲುಗಡೆಯಾಗಿ ಅದರ ವಿನಮ್ರ ಆರಂಭದಿಂದ ಪ್ರಮುಖ ಜಾಗತಿಕ ಕೇಂದ್ರವಾಗುವ ವರೆಗೆ, ಕೋಲ್ಕತ್ತಾ ವಿಮಾನ ನಿಲ್ದಾಣದ ಶತಮಾನೋತ್ಸವದ ಸಂಭ್ರಮಾಚರಣೆಯು ಭವವಾದ ವ್ಯವಹಾರವಾಗಿದೆ ಎಂದು ಭರವಸೆ ನೀಡಿದೆ, ಅದರ ಪರಂಪರೆ ಮತ್ತು ಉಜ್ವಲ ಭವಿಷ್ಯವನ್ನು ಗೌರವಿಸಲು ಕಾರ್ಯಕ್ರಮಗಳು ಸಾಲುಗಟ್ಟಿವೆ ಎಂದು ತಿಳಿಸಿದ್ದಾರೆ.

ಮೂಲಗಳ ಪ್ರಕಾರ,ಈ ತಿಂಗಳಿನ ಮೂರನೇ ವಾರದಲ್ಲಿ ಆಚರಣೆಗಳು ಪ್ರಾರಂಭವಾಗಲಿದ್ದು, ಮುಂದಿನ ವರ್ಷ ಮಾರ್ಚ್ ಅಂತ್ಯದವರೆಗೆ ನಡೆಯಲಿದೆ.

ಭಾರತದ ವಿಮಾನ ನಿಲ್ದಾಣಗಳ ಪ್ರಾಧಿಕಾರವು ಕೋಲ್ಕತ್ತಾ ಏರ್‌ಪೋರ್ಟ್ ನ 100 ವೈಭವಯುತ ವರ್ಷಗಳನ್ನು ಹೆಮ್ಮೆಯಿಂದ ಆಚರಿಸುತ್ತದೆ, ಇದು ಪಶ್ಚಿಮ ಬಂಗಾಳದ ಆತದೊಂದಿಗೆ ಜಗತ್ತನ್ನು ಮನಬಂದಂತೆ ಸೇತುವೆ ಮಾಡಿದ ಗೇಟ್‌ವೇ ಎಂದು ಕರೆಯಲಾಗುತ್ತದೆ, ಈ ಐಕಾನಿಕ್ ವಿಮಾನ ನಿಲ್ದಾಣ ಟೈಮ್‌ಲೆಸ್ ಬ್ರಿಲಿಯನ್‌ಸಗೆ ಸಾಕ್ಷಿಯಾಗಿ ನಿಂತಿದೆ ಎಂದಿದೆ.

ಈ ಕಾರ್ಯಕ್ರಮದಲ್ಲಿ ಪಶ್ಚಿಮ ಬಂಗಾಳದ ಮುಖ್ಯ ಮಂತ್ರಿ ಮಮತಾ ಬ್ಯಾನರ್ಜಿ ಅವರೊಂದಿಗೆ ಕೇಂದ್ರ ನಾಗರಿಕ ವಿಮಾನಯಾನ ಸಚಿವ ಕಿಂಜರಾಪು ರಾಮ್ ಮೋಹನ್ ನಾಯ್ಡು ಅವರು ಭಾಗವಹಿಸುವ ಸಾಧ್ಯತೆಯಿದೆ.

ಸಾಂಸ್ಕೃತಿಕ ಕಾರ್ಯಕ್ರಮಗಳು, ಸಹಿ ಅಭಿಯಾನಗಳು ಮತ್ತು ಚರ್ಚೆಗಳು ಸೇರಿದಂತೆ ಹಲವಾರು ಕಾರ್ಯಕ್ರಮಗಳನ್ನು ಆಚರಣೆಗಾಗಿ ಯೋಜಿಸಲಾಗಿದೆ ಎಂದು ವಿಮಾನ ನಿಲ್ದಾಣದ ನಿರ್ದೇಶಕ ಪ್ರವತ್ ರಂಜನ್ ಬ್ಯೂರಿಯಾ ಮಾಹಿತಿ




ಹಂಚಿಕೊಂಡಿದ್ದಾರೆ.

ವಿಮಾನ ನಿಲ್ದಾಣದ ಪ್ರಯಾಣವು 1900 ರ ದಶಕದ ಆರಂಭದಲ್ಲಿ ಕಲ್ಕತ್ತಾ ಏರೋಡ್ರೋಮ್ ಆಗಿ ಪ್ರಾರಂಭವಾಯಿತು. 1924 ರ ಹೊತ್ತಿಗೆ, ಇದು ಈಗಾಗಲೇ ಪ್ರಮುಖ ಅಂತರರಾಷ್ಟ್ರೀಯ ಕೇಂದ್ರವಾಗಿತ್ತು, ಏರ್‌ಲೈನ್‌ಸ ಆಮ್‌ಸ್ಟರ್‌ಡ್ಯಾಮ್‌ನಿಂದ ಬಟಾವಿಯಾ (ಈಗ ಜಕಾರ್ತಾ) ಗೆ ತಮ ಮಾರ್ಗದಲ್ಲಿ ನಿಗದಿತ ನಿಲ್ದಾಣಗಳನ್ನು ಮಾಡಿತು.

1924 ರ ವರ್ಷವು ರಾಯಲ್ ಏರ್ ಫೋರ್ಸ್ ವಿಮಾನದ ಲ್ಯಾಂಡಿಂಗ್ ಮತ್ತು ಮೇ 2 ರಂದು ಫ್ರೆಂಚ್ ಪೈಲಟ್ ಡಾಯ್ಸಿಯ ಆಗಮನ ಸೇರಿದಂತೆ ಹಲವಾರು ಐತಿಹಾಸಿಕ ಪ್ರಥಮಗಳನ್ನು ಕಂಡಿತು. ಅದೇ ವರ್ಷ, ದಮ್ ದಮ್ ವಿಮಾನ ನಿಲ್ದಾಣವು ಮೊದಲ ರಾತ್ರಿ ಲ್ಯಾಂಡಿಂಗ್ ಸೇರಿದಂತೆ ಅನೇಕ ಮಹತ್ವದ ಲ್ಯಾಂಡಿಂಗ್‌ಗಳನ್ನು ಆಯೋಜಿಸಿತು.

### ವಿಮಾನಗಳ ಪ್ರಮುಖ ತಾಣ

ಎರಡನೆಯ ಮಹಾಯುದ್ಧದ ನಂತರದ ಯುಗದಲ್ಲಿ, ಕೋಲ್ಕತ್ತಾ ವಾಣಿಜ್ಯ ವಿಮಾನಗಳ ಪ್ರಮುಖ ತಾಣವಾಯಿತು. 1940 ರಿಂದ 1960 ರ ದಶಕದ ಅವಧಿಯಲ್ಲಿ, ವಿಮಾನ ನಿಲ್ದಾಣವು ಏರೋಫ್ಲಾಟ್, ಏರ್ ಫ್ರಾನ್‌ಸ ಮತ್ತು ಪ್ಯಾನ್ ಆಮ್‌ನಂತಹ ಅಂತರರಾಷ್ಟ್ರೀಯ ವಿಮಾನಯಾನ ಸಂಸ್ಥೆಗಳಿಗೆ ಪ್ರಮುಖ ಕೇಂದ್ರವಾಯಿತು. ಆದಾಗ್ಯೂ, 1960 ರ ದಶಕದಲ್ಲಿ ದೀರ್ಘ-ಪ್ರಯಾಣದ ವಿಮಾನಗಳ ಆಗಮನದೊಂದಿಗೆ, ನಿಲುಗಡೆ ಕೇಂದ್ರವಾಗಿ ವಿಮಾನ ನಿಲ್ದಾಣದ ಪಾತ್ರವು ಕ್ಷೀಣಿಸಲು ಪ್ರಾರಂಭಿಸಿತು.

**ಜಗತ್ತಿಗೆ ಸಂಪರ್ಕಿಸುವಲ್ಲಿ ನಂಬಲಾಗದ ಮೈಲಿಗಲ್ಲು**

ಮೂಲತಃ ದಮ್ ದಮ್‌ನಲ್ಲಿರುವ ರಾಯಲ್ ಆರ್ಟಿಲರಿ ಆರ್ಮರಿಯ ಪಕ್ಕದಲ್ಲಿ ನೆಲೆಗೊಂಡಿರುವ ವಿಮಾನ ನಿಲ್ದಾಣವು ಬ್ರಿಟಿಷ್ ಆಳ್ವಿಕೆಯಲ್ಲಿ ಗಮನಾರ್ಹ ಬೆಳವಣಿಗೆಯನ್ನು ಕಂಡಿತು, ಅದು ಉತ್ತರ ಅಮೇರಿಕಾ, ಯುರೋಪ್ ಮತ್ತು ಏಷ್ಯಾವನ್ನು ಸಂಪರ್ಕಿಸುವ ವಿಮಾನಗಳಿಗೆ ಕಾರ್ಯತಂತ್ರದ ನಿಲುಗಡೆಯಾಯಿತು.

1929 ರಲ್ಲಿ ಬಂಗಾಳದ ಗವರ್ನರ್ ಆಗಿದ್ದ ಸರ್ ಸ್ಟಾನ್ಲಿ ಜಾಕ್ಸನ್ ಅವರು ದಮ್ ದಮ್ ಏರೋಡ್ರೋಮ್‌ನಲ್ಲಿ ಬಂಗಾಳ ಫ್ಲೈಯಿಂಗ್ ಕ್ಲಬ್ ಅನ್ನು ಉದ್ಘಾಟಿಸಿದರು ಮತ್ತು ವಿಮಾನ ನಿಲ್ದಾಣದ ಸ್ಥಿತಿಯನ್ನು ಇನ್ನಷ್ಟು ಗಟ್ಟಿಗೊಳಿಸಿದರು.

1990 ರ ಹೊತ್ತಿಗೆ, ಕೋಲ್ಕತ್ತಾದ ವಿಮಾನ ನಿಲ್ದಾಣವು ಪ್ರಯಾಣಿಕರ ಮತ್ತು ಸರಕು ಕಾರ್ಯಾಚರಣೆ ಗಳಿಗೆ ಪ್ರಮುಖ ಅಂತರರಾಷ್ಟ್ರೀಯ ಮತ್ತು ದೇಶೀಯ ಕೇಂದ್ರವಾಗಿ ಪ್ರಾಮುಖ್ಯತೆಯನ್ನು ಗಳಿಸಿತು. ಕ್ರಾಂತಿಕಾರಿ ನಾಯಕನ ಗೌರವಾರ್ಥವಾಗಿ ವಿಮಾನ ನಿಲ್ದಾಣವನ್ನು ನೇತಾಜಿ ಸುಭಾಸ್ ಚಂದ್ರ ಬೋಸ್ ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಎಂದು ಮರುನಾಮಕರಣ ಮಾಡಲಾಯಿತು.

ಉದಯ ವಾಹಿನಿ

ದೇಶ/ವಿದೇಶ

ಮಂಗಳವಾರ 10 ಡಿಸೆಂಬರ್ 2024

07

## ಮಿನಿ ನ್ಯೂಸ್

### ಸೋನಿಯಾಗಾಂಧಿಗೆ ಹುಟ್ಟುಹಬ್ಬದ ಶುಭಾಷಯ ಕೋರಿದ ಪ್ರಧಾನಿ ಮೋದಿ

**ನವದೆಹಲಿ:** ಕಾಂಗ್ರೆಸ್ ಪಕ್ಷದ ಮಾಜಿ ಅಧ್ಯಕ್ಷೆ ಸೋನಿಯಾ ಗಾಂಧಿ ಅವರ ಜನದಿನದಂದು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಶುಭಾಶಯಗಳನ್ನು ಕೋರಿದ್ದಾರೆ ಮತ್ತು ಅವರ ದೀರ್ಘಾಯುಷ್ಯ ಮತ್ತು ಉತ್ತಮ ಆರೋಗ್ಯಕ್ಕಾಗಿ ಪ್ರಾರ್ಥಿಸಿದ್ದಾರೆ.

ಸುದೀರ್ಘ ಕಾಲ ಕಾಂಗ್ರೆಸ್ ಅಧ್ಯಕ್ಷೆಯಾಗಿದ್ದ ಸೋನಿಯಾ ಗಾಂಧಿ ಆರೋಗ್ಯದ ಕಾರಣಗಳಿಗಾಗಿ ಕಳೆದ ಕೆಲವು ವರ್ಷಗಳಿಂದ ಸಕ್ರಿಯ ರಾಜಕಾರಣದಿಂದ ಹಿಂದೆ ಸರಿದಿದ್ದಾರೆ. ಅವರು ರಾಜ್ಯಸಭಾ ಸಂಸದೆ ಮತ್ತು ಕಾಂಗ್ರೆಸ್ ಸಂಸದೀಯ ಪಕ್ಷದ ಅಧ್ಯಕ್ಷೆ. ಅವರು ಇಂದು 78ನೇ ವರ್ಷಕ್ಕೆ ಕಾಲಿಟ್ಟಿದ್ದಾರೆ.

### ವಿಧಾನ ಸ್ಪೀಕರ್ ಆಗಿ ನಾರ್ವೇಕರ್ ಆಯ್ಕೆ

**ಮುಂಬೈ:** ಮಹಾರಾಷ್ಟ್ರ ವಿಧಾನಸಭೆಯ ಸ್ಪೀಕರ್ ಆಗಿ ಬಿಜೆಪಿ ನಾಯಕ ರಾಹುಲ್ ನಾರ್ವೇಕರ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಬಿಜೆಪಿ,ಎನ್‌ಸಿಪಿ ಮತ್ತು ಶಿವಸೇನೆಯ ಮೈತ್ರಿಕೂಟ ಮಹಾಯುತಿಗೆ ಬಾರಿ ಬಹುಮತ ಇರುವ ಹಿನ್ನೆಲೆಯಲ್ಲಿ ರಾಹುಲ್ ನಾರ್ವೇಕರ್ ಸ್ಪೀಕರ್ ಆಗಿ ಅವಿರೋಧ ಆಯ್ಕೆಯಾಗಿದ್ದಾರೆ. ವಿರೋಧ ಪಕ್ಷದ ಮಹಾ ವಿಕಾಸ್ ಅಘಾಡಿ-ಎಂವಿಎ ಯಾವುದೇ ಅಭ್ಯರ್ಥಿಯನ್ನು ಕಣಕ್ಕಿಳಿಸಿಲ್ಲ. ವಿಧಾನಸಭೆಯ ವಿಶೇಷ ಅಧಿವೇಶನದ ಮೂರನೇ ಮತ್ತು ಕೊನೆಯ ದಿನವಾಗಿದೆ, ಸ್ಪೀಕರ್ ಚುನಾವಣೆಯ ನಂತರ ಹೊಸ ಸರ್ಕಾರದ ಬಲಾಬಲ ಸಾಬೀತುಪಡಿಸಲು ಬಹುಮತದ ಪರೀಕ್ಷೆ ನಡೆಯಲಿದೆ. ಧ್ವನಿ ಮತದ ಮೂಲಕ ಸರ್ಕಾರ ತನ್ನ ಬಹುಮತ ಸಾಧಿಸುವ ನಿರೀಕ್ಷೆಯಿದೆ. ನಂತರ ರಾಜ್ಯಪಾಲ ಸಿಪಿ ರಾಧಾಕೃಷ್ಣನ್ ಅವರು ರಾಜ್ಯ ವಿಧಾನಮಂಡಲದ ಉಭಯ ಸದನಗಳ ಜಂಟಿ ಅಧಿವೇಶನ ಉದ್ದೇಶಿಸಿ ಭಾಷಣ ಮಾಡಲಿದ್ದಾರೆ. ಮಹಾರಾಷ್ಟ್ರ ವಿಧಾನಸಭೆಯಲ್ಲಿ ಸ್ಪೀಕರ್ ಹುದ್ದೆಗೆ ನಾರ್ವೇಕರ್ ನಾಮಪತ್ರ ಸಲ್ಲಿಸಿದರು. ಅವರೊಂದಿಗೆ ಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್ ಮತ್ತು ಉಪಮುಖ್ಯಮಂತ್ರಿಗಳಾದ ಏಕನಾಥ್ ಶಿಂಧೆ ಮತ್ತು ಅಜಿತ್ ಪವಾರ್, ರಾಜ್ಯ ಬಿಜೆಪಿ ಅಧ್ಯಕ್ಷ ಚಂದ್ರಶೇಖರ ಬಾವನಕುಳೆ, ಬಿಜೆಪಿ ಹಿರಿಯ ಮುಖಂಡ ಚಂದ್ರಕಾಂತ ಪಾಟೀಲ ಉಪಸ್ಥಿತರಿದ್ದರು.

### ಬಾಂಬ್ ದಾಳಿ 28 ಸಾವು

**ಖಾರ್ಟೂಮ್:** ಬೆಳ್ಳಿಗೆ ನಡೆದ ಸುಡಾನ್ ರಾಜಧಾನಿ ಖಾರ್ಟೂಮ್‌ನ ದಕ್ಷಿಣ ಭಾಗದಲ್ಲಿರುವ ಇಂಧನ ಕೇಂದ್ರದಲ್ಲಿ ನಡೆದಿರುವ ಬಾಂಬ್ ಸ್ಫೋಟದಲ್ಲಿ ಕನಿಷ್ಠ 28 ಜನರು ಸಾವನ್ನಪ್ಪಿದ್ದಾರೆ ಮತ್ತು 37 ಜನರು ಗಾಯಗೊಂಡಿದ್ದಾರೆ ಎನ್ನುವ ಈ ಮಾಹಿತಿ ದೊರಕಿದೆ.

ದಕ್ಷಿಣ ಖಾರ್ಟೂಮ್ ಎಮರ್ಜೆನ್ಸಿ ರೂಮ್, ಸ್ಥಳೀಯ ಸ್ವಯಂಸೇವಕ ಗುಂಪು, ಮೇಯೊ ಪ್ರದೇಶದ ಸಮೀಪವಿರುವ ನ್ಯೂ ಮಾರ್ಕೆಟ್ 6 ರಲ್ಲಿ ಅಮೋನಿಯಾ ಇಂಧನ ಕೇಂದ್ರ, ಬಾಂಬ್ ದಾಳಿಗೆ ತುತ್ತಾಗಿದೆ ಎಂದು ಹೇಳಿದೆ. ಇದು ಬಶೀರ್ ಆಸ್ಪತ್ರೆಯ ಉತ್ತರ ಭಾಗದಲ್ಲಿದೆ ಈ ಬಾಂಬ್ ದಾಳಿ ಅಪಾರ ಪ್ರಮಾಣದ ಜೀವ ಮತ್ತು ಆಸ್ತಿ ನಷ್ಟವನ್ನು ಉಂಟು ಮಾಡಿದೆ.

ವರದಿ ಪ್ರಕಾರ, 29 ಜನರಿಗೆ ತೀವ್ರ ಸುಟ್ಟ ಗಾಯಗಳಾಗಿವೆ. ಅವುಗಳಲ್ಲಿ ಮೂವರು ಸ್ಥಿತಿ ಚಿಂತಾಜನಕವಾಗಿದೆ. ಅಲ್ಲದೆ, 8 ಜನಕ್ಕೆ ಸಣ್ಣ ಪುಟ್ಟ ಗಾಯಗಳಾಗಿವೆ. ಘಟನೆಯ ನಂತರ, ವೈದ್ಯಕೀಯ ಸೇವೆಗಳು ಸಂತ್ರಸ್ತರಿಗೆ ಸಹಾಯ ಮಾಡುವಲ್ಲಿ ನಿರತವಾಗಿವೆ. ಗಾಯಗೊಂಡವರಿಗೆ ಚಿಕಿತ್ಸೆ ನೀಡಲು ಹೆಚ್ಚುವರಿ ವೈದ್ಯಕೀಯ ನೆರವು ನೀಡುವಂತೆ ಸ್ವಯಂಸೇವಕ ಗುಂಪು ಮನವಿ ಮಾಡಿದೆ. ಅಮೋನಿಯಾ ಇಂಧನ ಕೇಂದ್ರದಲ್ಲಿ ಬಾಂಬ್ ಸ್ಫೋಟದಲ್ಲಿ 28 ಜನರು ಸಾವನ್ನಪ್ಪಿದ್ದಾರೆ ಮತ್ತು 37 ಜನರು ಗಾಯಗೊಂಡಿದ್ದಾರೆ ಎಂದು ಸ್ಥಳೀಯ ಸುದ್ದಿ ಪೋರ್ಟಲ್ ಅಲ್-ರಕುಬಾ ದೃಢಪಡಿಸಿದೆ. ಈವರೆಗೆ ಯಾವುದೇ ಸಂಘಟನೆ ದಾಳಿಯ ಹೊಣೆ ಹೊತ್ತುಕೊಂಡಿಲ್ಲ. 2023 ರ ಮಧ್ಯದಿಂದ, ಸುಡಾನ್ ಸಶಸ್ತ್ರ ಪಡೆಗಳು ಮತ್ತು ಕ್ಷಿಪ್ರ ಬೆಂಬಲ ಪಡೆಗಳ ನಡುವೆ ಸುಡಾನ್‌ನಲ್ಲಿ ನಡೆಯುತ್ತಿರುವ ಸಂಘರ್ಷವು ದೇಶವನ್ನು ಅಳಿವಿನಂಚಿಗೆ ತಂದಿದೆ.

### ಬಾಹ್ಯಾಕಾಶದಲ್ಲಿ 6 ತಿಂಗಳು ಪೂರೈಸಿದ ಸುನಿತಾ ವಿಲಿಯಮ್ಸ್

**ವಾಷಿಂಗ್ಟನ್:** ಭಾರತೀಯ ಮೂಲದ ಅಮೇರಿಕಾ ಗಗನಯಾತ್ರಿ ಸುನಿತಾ ವಿಲಿಯಮ್ಸ್ ಮತ್ತು ಬುಚ್ ವಿಲ್ಮೋರ್ ಬಾಹ್ಯಾಕಾಶದಲ್ಲಿ ಆರು ತಿಂಗಳ ಕಕ್ಷೆಯಲ್ಲಿ ಸಮಯ ಪೂರ್ಣಗೊಳಿಸಿದ್ದು ಇನ್ನೂ ಎರಡು ತಿಂಗಳುಗಳು ಉಳಿದಿವೆ. ಸ್ಟ್ರಾಂಡೆಡ್ ಗಗನಯಾತ್ರಿಗಳು ಎಂದು ಕರೆಯಲ್ಪಡುವ ಬುಚ್ ವಿಲ್ಮೋರ್ ಮತ್ತು ಸುನಿ ವಿಲಿಯಮ್ಸ್ ಆರು ತಿಂಗಳು ಬಾಹ್ಯಾಕಾಶದಲ್ಲಿ ಮುಗಿಸಿದ್ದಾರೆ. ಈ ವರ್ಷದ ಜೂನ್ 5 ರಂದು, ಬುಚ್ ವಿಲ್ಮೋರ್ ಸುನಿತಾ ವಿಲಿಯಮ್ಸ್ ಬಾಹ್ಯಾಕಾಶಕ್ಕೆ ತೆರಳಿದ್ದರು, ವಾರದ ಅವಧಿಯ ಪರೀಕ್ಷಾ ಸಮಯದಲ್ಲಿ ಇಂಜಿನ್ ತಾಂತ್ರಿಕ ದೋಷದಿಂದ 8 ತಿಂಗಳು ಉಳಿದುಕೊಳ್ಳುವಂತಾಗಿದೆ.

ಬೋಯಿಂಗ್‌ನ ಹೊಸ ಸ್ಟಾರ್‌ಲೈನರ್ ಸಿಬ್ಬಂದಿ ಕ್ಯಾಪ್ಸುಲ್ ಅನ್ನು ವಾರದ ಅವಧಿಯ ಪರೀಕ್ಷಾ ಪ್ರಯಾಣದಲ್ಲಿ ಹಾರಿಸಿದ ಮೊದಲಿಗರಾಗಿದ್ದರು. ಎಂಜಿನ್ ಸಮಸ್ಯೆಗಳು ಮತ್ತು ಹೀಲಿಯಂ ಸೋರಿಕೆಗಳ ಸರಣಿ ನಿವಾರಿಸಿದ ನಂತರ ಅವರು ಮರುದಿನ ಅಂತರರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣಕ್ಕೆ ಬಂದಿಳಿದರು.

### ಡಿವೈಡರ್ ಗೆ ಕಾರು ಡಿಕ್ಕಿ: ಪರೀಕ್ಷೆಗೆ ತೆರಳುತ್ತಿದ್ದ 5 ವಿದ್ಯಾರ್ಥಿಗಳು ಸೇರಿ 7 ಮಂದಿ ಸಾವು

**ಗುಜರಾತ್:** ಕಾರೊಂದು ಡಿವೈಡರ್ ಗೆ ಡಿಕ್ಕಿ ಹೊಡೆದ ಪರಿಣಾಮ ಐವರು ವಿದ್ಯಾರ್ಥಿಗಳು ಸೇರಿ 7 ಮಂದಿ ಸಾವನ್ನಪ್ಪಿರುವ ಘಟನೆ ಗುಜರಾತಿನ ಜುನಾಗಢದಲ್ಲಿ ನಡೆದಿದೆ. ಕಾರು ಡಿವೈಡರ್‌ಗೆ ಡಿಕ್ಕಿ ಹೊಡೆದು ಮತ್ತೊಂದು ವಾಹನಕ್ಕೆ ಡಿಕ್ಕಿ ಹೊಡೆದ ಪರಿಣಾಮ ಐವರು ಕಾಲೇಜು ವಿದ್ಯಾರ್ಥಿಗಳು ಮೃತಪಟ್ಟಿದ್ದಾರೆ.



ವೇಗವಾಗಿ ಬಂದ ವಿದ್ಯಾರ್ಥಿಗಳ ಕಾರು ಡಿವೈಡರ್‌ಗೆ ಡಿಕ್ಕಿ ಹೊಡೆದು ರಸ್ತೆಯ ಇನ್ನೊಂದು ಬದಿಗೆ ಪಲ್ಟಿಯಾಗಿದೆ ಮತ್ತು ವೇಗವಾಗಿ ಬಂದ ಎರಡನೇ ಕಾರಿಗೆ ಡಿಕ್ಕಿ ಹೊಡೆದಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಏಳು ಮಂದಿ ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ಐವರು ವಿದ್ಯಾರ್ಥಿಗಳು ಒಂದು ಕಾರಿನಲ್ಲಿ ಪರೀಕ್ಷೆಗಾಗಿ ಕಾಲೇಜಿಗೆ ತೆರಳುತ್ತಿದ್ದರೆ, ಇನ್ನಿಬ್ಬರು ಮೃತರು ಮತ್ತೊಂದು ಕಾರಿನಲ್ಲಿದ್ದರು. ಅಪಘಾತದ ಪರಿಣಾಮ ಎರಡೂ ಕಾರುಗಳು ಗುರುತು ಹಿಡಿಯಲಾಗದಷ್ಟು ಜಖಂಗೊಂಡಿವೆ.

